ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 8 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 142 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ

ಹಿಂದೂ ಬೇಡ, ವೀರಶೈವ-ಲಿಂಗಾಯತ ಎಂದೇ ಬರೆಸಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕರೆ

ಬೆಂಗಳೂರು. ಸೆ.7–ರಾಜ್ಯಾದ್ಯಂತ ಬರುವ 22ರಿಂದ ಆರಂಭವಾಗಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಲಿಂಗಾಯತ ವೀರಶೈವ ಸಮುದಾಯದ ಯಾರೂ, ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸಬಾರದು. ಬದಲಿಗೆ 'ವೀರಶೈವ ಲಿಂಗಾಯತ' ಎಂದು ಬರೆಯಿಸಿ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕರೆ ನೀಡಿದೆ.



ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಿರಿಯ ಉಪಾಧ್ಯಕ್ಷ ಈಶ್ವರ್ ಖಂಡ್ರೆ ಮಾತನಾಡಿದರು. ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ, ವೀಣಾ ಕಾಶೆಪ್ಪನವರ್, ಕಾರ್ಯದರ್ಶಿ ರೇಣುಕ ಪ್ರಸನ್ನ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಭಾದ ರಾಷ್ಟ್ರೀಯ ಹಿರಿಯ ಉಪಾಧ್ಯಕ್ಷ ಈಶ್ವರ ಬಿ ಖಂಡ್ರೆ, ಹಿಂದೂ ಸನಾತನ ಧರ್ಮಕ್ಕೂ, ವೀರಶೈವ ಲಿಂಗಾಯತ ಧರ್ಮಕ್ಕೂ ಸಂಬಂಧವಿಲ್ಲ. ಹೀಗಾಗಿ ನಮ್ಮ ಸಮುದಾಯದ ಎಲ್ಲರೂ ತಾವು 'ವೀರಶೈವ ಲಿಂಗಾಯತ' ಧರ್ಮದವರು ಎಂದೇ ಬರೆಸಬೇಕು ಎಂದು ಹೇಳಿದರು.

'ಜಾತಿಗಳ ಕಾಲಂನಲ್ಲಿ 'ಲಿಂಗಾಯತ' ಅಥವಾ 'ವೀರಶೈವ' ಅಥವಾ 'ವೀರಶೈವ ಲಿಂಗಾಯತ' ಎಂದು ಬರೆಸಬೇಕು. ಉಪಜಾತಿಯ ಕಾಲಂನಲ್ಲಿ, ನಿಮ್ಮ ಉಪಜಾತಿಗಳ ಹೆಸರನ್ನು ಸ್ಪಷ್ಟವಾಗಿ ಬರೆಸಬೇಕು. ಗಣತಿದಾರರು ಸರಿಯಾಗಿ ಮಾಹಿತಿ ದಾಖಲಿಸಿದ್ದಾರೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು ಎಂದರು. ಹಿಂದಿನಿಂದಲೂ ಮಹಾಸಭಾ ವೀರಶೈವ ಲಿಂಗಾಯತ ಧರ್ಮದ ಪ್ರತಿಪಾದನೆ ಮಾಡುತ್ತಾ ಬಂದಿದೆ. ಹೀಗಾಗಿ ಧರ್ಮದ ಕಾಲಂನ ಇತರೆ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ಬರೆಸಬೇಕು ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿದೆ ಎಂದರು.

ಉಳಿದಂತೆ ಜಾತಿಯ ಕಾಲಂನಲ್ಲಿ ವೀರಶೈವ ಅಥವಾ ಲಿಂಗಾಯತ ಎಂದು ಬರೆಸುವಂತೆ ಹಾಗೂ ಉಪ ಜಾತಿಯ ಕಾಲಂನಲ್ಲಿರುವ ತಮ್ಮ ತಮ್ಮ ಉಪ ಜಾತಿ ಹೆಸರು ಬರೆಸುವಂತೆ ಮನವಿ ಮಾಡಿದರು.

ಸರ್ಕಾರಕ್ಕೆ ನಾಡಿನ ಜನರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ನಿಖರ ಮಾಹಿತಿ ದೊರೆತರೆ ನಾಡಿನ ಜನರೆಲ್ಲರ ಕಲ್ಯಾಣಕ್ಕೆ ಕಾರ್ಯಕ್ರಮ ರೂಪಿಸಲು ಅನುವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಈ ಸಮೀಕ್ಷೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಮೀಸಲಾತಿಗಾಗಿ ನೀಡುವ ಜಾತಿ ಪ್ರಮಾಣ ಪತ್ರಕ್ಕೂ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೂ ಸಂಬಂಧವಿಲ್ಲ. ನೈಜ ಜಾತಿ, ಶಾಲಾ ದಾಖಲಾತಿ ಇತ್ಯಾದಿ ಪರಾಮರ್ಶಿಸಿದ ಬಳಿಕವಷ್ಟೇ ಜಾತಿ ಪ್ರಮಾಣ ಪತ್ರ ನೀಡಲಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ನೈಜ ಜಾತಿಯನ್ನೇ ಸಮೀಕ್ಷೆಯಲ್ಲಿ ಬರೆಸಬೇಕು. ನಮ್ಮ ಸಮುದಾಯದ ನೈಜ ಸಂಖ್ಯೆ ಹೊರಹೊಮ್ಮಲು ಸಹಕರಿಸಬೇಕು ಎಂದು ಸಮಸ್ತ ವೀರಶೈವ ಲಿಂಗಾಯತ ಸಮಾಜದ ಬಾಂಧವರಿಗೆ ಸಭಾ ಪರವಾಗಿ ಮನವಿ ಮಾಡಿದರು. ■ 6ನೇ ಪುಟಕ್ಕೆ

ಮೈಸೂರು ಅಭಿವೃದ್ಧಿ ಪ್ರಾಧಿಕಾರ ನಡೆಸಿದ ಮೊದಲ ಇ– ಹರಾಜು ಯಶಸ್ವಿ

110 ನಿವೇಶನಗಳ ಇ–ಹರಾಜಿನಿಂದ ಪ್ರಾಧಿಕಾರಕ್ಕೆ 120 ಕೋಟಿ ಆದಾಯ

● ಉಳಿದ 90 ನಿವೇಶನಗಳು ಮರು ಹರಾಜು ● ಮುಡಾ ಹಗರಣದ ಆರೋಪ ಇ– ಹರಾಜಿನಲ್ಲಿ ಪರಿಣಾಮ ಬೀರಿಲ್ಲ

ಮೈಸೂರು, ಸೆ.7(ಬಿಎಲ್‌ಯು, ಆರ್‌ಕೆ, ಬಿಸಿಟಿ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಇತ್ತೀಚೆಗೆ ನಡೆಸಿದ ಇ– ಹರಾಜಿನಲ್ಲಿ 110 ನಿವೇಶನಗಳ ಹರಾಜು ಯಶಸ್ವಿಯಾಗಿದ್ದು, 120 ಕೋಟಿ ರೂಪಾಯಿ ಆದಾಯ ಗಳಿಸಿದೆ. ಮುಡಾದಲ್ಲಿ ಸಾವಿರಾರು ಕೋಟಿ ರೂಪಾಯಿ ಹಗರಣ ನಡೆದಿದೆ ಎಂಬ ಆರೋಪ ಇ–ಹರಾಜಿನ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಮುಡಾ ವಿರುದ್ಧ ಟೀಕೆ, ಆರೋಪಗಳಿದ್ದರೂ ಎಂಡಿಎ ಮೇಲೆ ನಂಬಿಕೆ ಇಟ್ಟು ಜನರು ನಿವೇಶನ ಖರೀದಿಸಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮೈಸೂರು ಅಭಿವೃದ್ಧಿ ಪ್ರಾಧಿಕಾರವಾಗಿ ಮರು ನಾಮಕರಣಗೊಂಡು ಮೊದಲ ಬಾರಿಗೆ ನಡೆಸಿದ ನಿವೇಶನಗಳ ಇ– ಹರಾಜಿನಲ್ಲಿ ಭಾರಿ ಆದಾಯ ಗಳಿಸಿದೆ. ಮೂಲೆ ನಿವೇಶನ, ಮಧ್ಯಂತರ ನಿವೇಶನ ಹಾಗೂ ಪ್ರೀಮಿಯಂ ನಿವೇಶನಗಳ ಆನ್‌ಲೈನ್ ಹರಾಜು ಪ್ರಕ್ರಿಯೆ ಜುಲೈ 31 ರಂದು ಆರಂಭಗೊಂಡಿತ್ತು.

ಮೈಸೂರಿನ ಶ್ರೀರಾಂಪುರ ಮೂರನೆ ಹಂತ, ವಿಜಯನಗರ ಎರಡನೇ, ಮೂರನೇ ಹಾಗೂ ನಾಲ್ಕನೇ ಹಂತ, ಹೆಬ್ಬಾಳು ಮೊದಲ ಮತ್ತು ಮೂರನೇ ಹಂತ, ದೇವನೂರು ಮೂರನೇ ಹಂತ, ಕೆಸರೆ ಮೂರನೇ ಹಂತ, ದಟ್ಟಗಳ್ಳಿ ಹಾಗೂ ಸಾತಗಳ್ಳಿಯಲ್ಲಿರುವ ನಿವೇಶನಗಳನ್ನು ಇ–ಹರಾಜು ಮೂಲಕ ಮಾರಾಟ ಮಾಡಲು ಎಂಡಿಎ ಇ– ಹರಾಜು ಪ್ರಕ್ರಿಯೆ ಆರಂಭ ಮಾಡಿತ್ತು.

ಇ–ಹರಾಜಿನ ನೇರ ಬಿಡ್ಡಿಂಗ್ ಆ.16 ರಿಂದ ಆರಂಭವಾಗಿ ಆ.26 ರಂದು ಮುಕ್ತಾಯಗೊಂಡಿತ್ತು. ಇ– ಹರಾಜಿನಲ್ಲಿ ಆಸಕ್ತ ಬಿಡ್‌ದಾರರು ನಿವೇಶನ ಖರೀದಿಗೆ ಪೈಪೋಟಿ ನಡೆಸಿದರು. ಹರಾಜು ಬಿಡ್ ಮುಕ್ತಾಯವಾದ ಸಂದರ್ಭದಲ್ಲಿ ಹರಾಜಿಗೆ ಇಡಲಾಗಿದ್ದ 200 ನಿವೇಶನಗಳಲ್ಲಿ 110 ನಿವೇಶನಗಳು ಮಾರಾಟವಾಗಿತ್ತು. ಇದರಿಂದ ಎಂಡಿಎಗೆ 120 ಕೋಟಿ ರೂಪಾಯಿ ಆದಾಯ ಬಂದಿತ್ತು.

ಈ ಸಂಬಂಧ 'ಮೈಸೂರು ಮಿತ್ರ' ನಿಗೆ ಪ್ರತಿಕ್ರಿಯೆ ನೀಡಿದ ಎಂಡಿಎ ಆಯುಕ್ತ ರಕ್ಷಿತ್ ಅವರು, ಹಲವು ನಿವೇಶನಗಳು ಒಂದು ಬಿಡ್ ಅನ್ನು ಮಾತ್ರ ಸ್ವೀಕರಿಸಿದ್ದು, ಅಂತಹ ನಿವೇಶನಗಳನ್ನು ಹರಾಜಿಗೆ ಪರಿಗಣಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕೆಲವು ಬಿಡ್‌ದಾರರು ಇ–ಹರಾಜಿನಿಂದ ಹಿಂದೆ ಸರಿದರು. ನಿಗದಿತ ಹಣ ಪಾವತಿ ಮಾಡಲು ವಿಫಲರಾದರು. ಇದರಿಂದ ಎಂಡಿಎಗೆ ಸುಮಾರು 20 ಕೋಟಿ ನಷ್ಟವಾಯಿತು. ■ 6ನೇ ಪುಟಕ್ಕೆ

50x80 ಅಳತೆ ನಿವೇಶನವನ್ನು 9 ಕೋಟಿಗೆ ಖರೀದಿ ಮಾಡಿರುವವರು ಇವರೆ

ಮೈಸೂರಿನ ವಿಜಯನಗರ 4 ನೇ ಹಂತದ 2 ನೇ ಫೇಸ್ ನಲ್ಲಿ 50x80 ಅಳತೆ (4,000 ಚದರ ಅಡಿ) ನಿವೇಶನವನ್ನು ಖರೀದಿ ಮಾಡಿರುವವರು ಯಾರೆಂಬ ಕುತೂಹಲ ಕೊನೆಗೂ ಬಯಲಾಗಿದೆ.

ಮೈಸೂರು ಮೂಲದ ಮದ್ಯ ವ್ಯಾಪಾರಿ ಮುರುಳೀಧರ್ ಅವರು 50x80 ಅಳತೆಯ ನಿವೇಶನವನ್ನು 9 ಕೋಟಿ ರೂಪಾಯಿಗೆ ಖರೀದಿಸಿ ದಾಖಲೆ ಬರೆದಿದ್ದಾರೆ. ಪ್ರತಿ ಚದರ ಅಡಿಗೆ 22,500 ರೂಪಾಯಿ ನೀಡಿ ಈ ಆಸ್ತಿ ಖರೀದಿ ಮಾಡಿದ್ದಾರೆ. ಮುರುಳೀಧರ್ ಅವರು ಎಂಡಿಎ ನೀಡಿದ ಮೂರು ದಿನಗಳ ಅವಧಿಯಲ್ಲಿ ಶೇ.25 ರಷ್ಟು ಬಿಡ್ ಹಣ ಕೂಡ ಪಾವತಿ ಮಾಡಿದ್ದಾರೆ.

ಮುರುಳೀಧರ್ ಅವರು ಖರೀದಿ ಮಾಡಿರುವ ಈ ನಿವೇಶನದಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ನಿರ್ಮಿಸಬಹುದು. ಈ ನಿವೇಶನದ ಮುಂದೆ ಹಾಗೂ ಹಿಂದೆ ಎರಡು ಬದಿಯಲ್ಲಿ ರಸ್ತೆ ಇದೆ. ತಮ್ಮ ವಾಣಿಜ್ಯ ವ್ಯವಹಾರ ಮಾಡಲು ಈ ನಿವೇಶನ ಹೇಳಿ ಮಾಡಿಸಿದೆ ಎಂದು ಲೆಕ್ಕ ಹಾಕಿ ಖರೀದಿ ಮಾಡಿರಬಹುದು.

ವಿಜಯನಗರ 4 ನೇ ಹಂತ 2ನೇ ಫೇಸ್‌ನ ಇದೇ ಪ್ರದೇಶದಲ್ಲಿ 20x30 (600 ಚದರ ಅಡಿ) ನಿವೇಶನವನ್ನು ವ್ಯಕ್ತಿಯೊಬ್ಬರು 2 ಕೋಟಿಗೆ ಇ– ಹರಾಜಿನಲ್ಲಿ ಖರೀದಿ ಮಾಡಿದ್ದರು. ಒಂದು ■ 6ನೇ ಪುಟಕ್ಕೆ

ವಿಧಾನಪರಿಷತ್‌ಗೆ ಕೆ.ಶಿವಕುಮಾರ್, ರಮೇಶ್‌ಬಾಬು, ಆರತಿ ಕೃಷ್ಣ, ಜಕ್ಕಪ್ಪನವರ್ ನೇಮಕ

ಸರ್ಕಾರದಿಂದ ಅಧಿಕೃತ ಪ್ರಕಟಣೆ



ಕೆ.ಶಿವಕುಮಾರ್



ರಮೇಶ್‌ಬಾಬು



ಆರತಿ ಕೃಷ್ಣ



ಜಕ್ಕಪ್ಪನವರ್

ಬೆಂಗಳೂರು, ಸೆ.7– ವಿಧಾನಪರಿಷತ್‌ನಲ್ಲಿ ಹಲವು ತಿಂಗಳಿಂದ ಖಾಲಿ ಇದ್ದ ನಾಲ್ಕು ಸದಸ್ಯ ಸ್ಥಾನಗಳಿಗೆ ಮೈಸೂರಿನ ಹಿರಿಯ ಪತ್ರಕರ್ತ ಕೆ.ಶಿವಕುಮಾರ್, ಆರತಿ ಕೃಷ್ಣ, ರಮೇಶ್‌ಬಾಬು, ■ 6ನೇ ಪುಟಕ್ಕೆ

ಈ ಬಾರಿಯ ದಸರಾ ಏರ್ ಶೋ ವೀಕ್ಷಣೆಗೆ ಉಚಿತ ಪ್ರವೇಶ ರದ್ದು

■ ಟಿಕೆಟ್ ದರ ಸೇರಿ ಇತರೆ ವಿವರ ಶೀಘ್ರದಲ್ಲೆ ಪ್ರಕಟ ■ ಬೆಂಗಳೂರು ಕಾಲ್ತುಳಿತ ಪ್ರಕರಣದ ಹಿನ್ನೆಲೆ ಜನಸಂದಣಿ ನಿಯಂತ್ರಣಕ್ಕೆ ಕ್ರಮ

ಮೈಸೂರು, ಸೆ.7(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಏರ್ ಶೋಗೆ ಈ ಬಾರಿ ಉಚಿತ ಪ್ರವೇಶ ಇರುವುದಿಲ್ಲ. ಮೈಸೂರಿನ ಬನ್ನಿಮಂಟಪದ ಟಾರ್ಚ್ ಲೈಟ್ ಮೈದಾನದಲ್ಲಿ ವಿಜಯದಶಮಿ ದಿನದಂದು ನಡೆಯುವ ಏರ್ ಶೋ ವೀಕ್ಷಣೆಗೆ ಪ್ರವೇಶ ದರ ನಿಗದಿ ಮಾಡಲಾಗುತ್ತಿದೆ.



ಸಂಗ್ರಹ ಚಿತ್ರ

ಕರ್ನಾಟಕದಲ್ಲಿ ಬೆಂಗಳೂರಿನ ಯಲಹಂಕದಲ್ಲಿ ನಡೆಯುವ ಏರ್ ಶೋ ಬಿಟ್ಟರೆ ಮೈಸೂರು ದಸರಾ ಸಮಯದಲ್ಲಿ ಮಾತ್ರ ಏರ್ ಶೋ ನಡೆಯುತ್ತದೆ. ಭಾರತೀಯ ವಾಯುಪಡೆಯ ರೋಮಾಂಚನಕಾರಿ ಏರ್ ಶೋ ಸಹಸ್ರಾರು ಜನರನ್ನು ಆಕರ್ಷಿಸುತ್ತದೆ.

ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ಇಷ್ಟು ವರ್ಷ ನಡೆದ ಏರ್ ಶೋಗೆ ಉಚಿತ ಪ್ರವೇಶವಿತ್ತು. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಿ ಮೈದಾನದೊಳಗೆ ಉಚಿತವಾಗಿ ಪ್ರವೇಶ ನೀಡಲಾಗುತ್ತಿತ್ತು. ಆದರೆ ಈ ವರ್ಷ ಏರ್ ಶೋ ವೀಕ್ಷಣೆಗೆ ಟಿಕೆಟ್ ದರ ನಿಗದಿ ಮಾಡಲಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ' ನಿಗೆ ವಿವರ ನೀಡಿದ ಮೈಸೂರು ದಸರಾ ವಿಶೇಷಾಧಿಕಾರಿಯೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು, ಟಿಕೆಟ್ ಹೊಂದಿರುವವರಿಗೆ ಮಾತ್ರ ಈ ಬಾರಿ ನಡೆಯುವ ಏರ್ ಶೋ ವೀಕ್ಷಣೆಗೆ ಅವಕಾಶ ಇರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಐಪಿಎಲ್ ವಿಜಯೋತ್ಸವದಲ್ಲಿ ಕಾಲ್ತುಳಿತ ಸಂಭವಿಸಿ 11 ಜನರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಅರಮನೆಯೊಳಗಿನ ಜಂಬೂಸವಾರಿ ಮೆರವಣಿಗೆ ಹಾಗೂ ■ 6ನೇ ಪುಟಕ್ಕೆ

ದಸರಾ ದೀಪಾಲಂಕಾರ ಅವಧಿ 15 ದಿನ ವಿಸ್ತರಣೆ

ಮೈಸೂರು, ಸೆ.7(ಎಂಟಿವೈ)– ಪ್ರಸಕ್ತ ಸಾಲಿನ ನಾಡಹಬ್ಬ ದಸರಾ ಮಹೋತ್ಸವದ ದೀಪಾಲಂಕಾರ ಈ ಬಾರಿ ಅದ್ಧೂರಿಯಾಗಿ ಆಯೋಜಿಸಲು ನಿರ್ಧರಿಸಿರುವ ಬೆನ್ನಲ್ಲೇ ಇದೀಗ ದೀಪಾಲಂಕಾರ ಕಣ್ತುಂಬಿಕೊಳ್ಳುವುದಕ್ಕೆ 15 ದಿನ ವಿಸ್ತರಣೆ ಮಾಡಲು ಸೆಸ್ಕಾಂ ನಿರ್ಧರಿಸಿದೆ.

ಈ ಸಾಲಿನ ದಸರಾ ಮಹೋತ್ಸವ ಸೆ.22ರಂದು ಆರಂಭವಾಗಲಿದ್ದು ಅ.2ರಂದು ಜಂಬೂಸವಾರಿ ನಡೆಯಲಿದೆ. ಇದಕ್ಕಾಗಿ ಸೆಸ್ಕ್ ವತಿಯಿಂದ ಅತ್ಯಂತ ಆಕರ್ಷಣೀಯ ದೀಪಾಲಂಕಾರದ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಒಟ್ಟು 136 ಕಿ.ಮೀ. ರಸ್ತೆಗೆ ದೀಪಾಲಂಕಾರ, 118 ವೃತ್ತಗಳಿಗೆ ದೀಪಾಲಂಕಾರ, 60ಕ್ಕೂ ಹೆಚ್ಚು ವಿವಿಧ ಆಕೃತಿಗಳನ್ನು ನಿರ್ಮಿಸಿ ಅಳವಡಿಸಲು ಸೆಸ್ಕ್ ನಿರ್ಧರಿಸಿದೆ.

ನವರಾತ್ರಿ ವೇಳೆ ಜಗಮಗಿಸಲಿರುವ ಮೈಸೂರು ನಗರಕ್ಕೆ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ದೀಪಾಲಂಕಾರವನ್ನು ಜಂಬೂಸವಾರಿ ನಂತರ 15 ದಿನಗಳವರೆಗೆ ■ 6ನೇ ಪುಟಕ್ಕೆ

ದಸರಾ ಗೋಲ್ಡ್ ಕಾರ್ಡ್, ಟಿಕೆಟ್ ಆನ್‌ಲೈನ್‌ನಲ್ಲಿ ಬಿಡುಗಡೆ

ಮೈಸೂರು, ಸೆ.7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ವೀಕ್ಷಣೆಗಾಗಿ ಜಿಲ್ಲಾಡಳಿತ ಆನ್‌ಲೈನ್‌ನಲ್ಲಿ ಗೋಲ್ಡ್ ಕಾರ್ಡ್ ಹಾಗೂ ಜಂಬೂಸವಾರಿ ಮತ್ತು ಪಂಜಿನ ಕವಾಯತು ವೀಕ್ಷಣೆಗೆ ಟಿಕೆಟ್ ಮಾರಾಟಕ್ಕೆ ಬಿಡುಗಡೆ ಮಾಡಿದೆ.



ಸೆ.6ರಂದು ಮಧ್ಯಾಹ್ನ 3 ಗಂಟೆಯಿಂದ ಆನ್‌ಲೈನ್‌ನಲ್ಲಿ ಗೋಲ್ಡ್ ಕಾರ್ಡ್ ಹಾಗೂ ಜಂಬೂಸವಾರಿ ಮತ್ತು ಪಂಜಿನ ಕವಾಯತು ವೀಕ್ಷಣೆಗೆ ಟಿಕೆಟ್ ಬಿಡುಗಡೆ ಮಾಡಲಾಗಿದೆ. ಬಹುನಿರೀಕ್ಷಿತ ಗೋಲ್ಡ್‌ಕಾರ್ಡ್‌ಗೆ ಈ ಬಾರಿ 6,500 ರೂ. ದರ ನಿಗದಿ ಮಾಡಲಾಗಿದೆ. ಆದರೆ ಬುಕ್ಕಿಂಗ್ ಚಾರ್ಜ್ 390 ರೂ. ಜಿಎಸ್‌ಟಿ 70.20 ರೂ. ಸೇರಿದಂತೆ ಒಂದು ಗೋಲ್ಡ್ ಕಾರ್ಡ್ ಖರೀದಿಗೆ 6,961 ರೂ. ಪಾವತಿಸಬೇಕಾಗಿದೆ.

ಅರಮನೆ ಆವರಣದಲ್ಲಿ ಜಂಬೂಸವಾರಿ ಮೆರವಣಿಗೆ ವೀಕ್ಷಣೆ ಒಂದು ಟಿಕೆಟ್‌ಗೆ 3,500 ರೂ. ದರ ನಿಗದಿ ಮಾಡಲಾಗಿದೆ. ಬುಕ್ಕಿಂಗ್ ಚಾರ್ಜ್ 210 ರೂ., ಜಿಎಸ್‌ಟಿ 37.80 ರೂ. ಸೇರಿದಂತೆ ಜಂಬೂಸವಾರಿ ವೀಕ್ಷಣೆಗೆ ಒಂದು ಟಿಕೆಟ್‌ಗೆ 3,748 ರೂ. ನೀಡಬೇಕಾಗುತ್ತದೆ. ಪಂಜಿನ ಕವಾಯತು ವೀಕ್ಷಣೆಗೆ ಒಂದು ಟಿಕೆಟ್‌ಗೆ 1,500 ರೂ. ದರ ನಿಗದಿ ಮಾಡಲಾಗಿದೆ. ಈ ಟಿಕೆಟ್‌ಗೆ ಖರೀದಿಗೆ ಬುಕ್ಕಿಂಗ್ ಚಾರ್ಜ್ 210 ರೂ., ಜಿಎಸ್‌ಟಿ 17.56 ರೂ ನೀಡಬೇಕಾಗಿದ್ದು, ಟಿಕೆಟ್‌ವೊಂದಕ್ಕೆ 1,616 ರೂ ಪಾವತಿಸಬೇಕಾಗಿದೆ.

ಈ ಬಾರಿ ದಸರಾ ಗೋಲ್ಡ್ ಕಾರ್ಡ್ ಪಡೆದವರಿಗೆ ಕೆಲವು ನಿಬಂಧನೆಗಳನ್ನು ವಿಧಿಸಲಾಗಿದ್ದು, ಗೋಲ್ಡ್ ಕಾರ್ಡ್ ಹೊಂದಿರುವವರು ಮೈಸೂರು ಮೃಗಾಲಯ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ, ಅರಮನೆ, ಡ್ರೋನ್ ಶೋ (ಸೆ.28 ಅಥವಾ ಸೆ.29) ಕೇವಲ ಒಂದು ಬಾರಿ ವೀಕ್ಷಣೆ ■ 6ನೇ ಪುಟಕ್ಕೆ

ಸಮೀಕ್ಷೆ ಹೆಸರಲ್ಲಿ ಹಿಂದೂಗಳ ಕ್ರೈಸ್ತ ಧರ್ಮಕ್ಕೆ ಮತಾಂತರ ಹುನ್ನಾರ

ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆರೋಪ

● ಮತಾಂತರ ಯತ್ನ ಕೈ ಬಿಡದಿದ್ದರೆ ರಾಜ್ಯಾದ್ಯಂತ ಹೋರಾಟದ ಎಚ್ಚರಿಕೆ ● 47ಕ್ಕೂ ಹೆಚ್ಚಿನ ಜಾತಿಗಳು ಕ್ರಿಶ್ಚಿಯನ್ ಧರ್ಮದಲ್ಲಿ ಅಡಕ ● ಹಿಂದುಳಿದ ವರ್ಗಗಳ ಮೀಸಲಾತಿ ಕಬಳಿಸಲು ಷಡ್ಯಂತ್ರ

ಮೈಸೂರು, ಸೆ.7(ಬಿಎಲ್‌ಯು)– ಹಿಂದೂ ಧರ್ಮದ ಹಲವು ಜಾತಿಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೇರ್ಪಡೆ ಮಾಡಲು ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದ್ದು, ಹಿಂದೂ ಧರ್ಮಿಯರನ್ನು ಕ್ರಿಶ್ಚಿಯನ್‌ಗೆ ಮತಾಂತರ ಮಾಡುವ ಕುತಂತ್ರ ರೂಪಿಸಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆರೋಪಿಸಿದ್ದಾರೆ.

ನಗರದ ಸಿಪಾಯಿ ಗ್ರ್ಯಾಂಡೆ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆಯ ಹೆಸರಿನಲ್ಲಿ ರಾಜ್ಯ ಸರ್ಕಾರ ಮತಾಂತರಕ್ಕೆ ಕುಮ್ಮಕ್ಕು ನೀಡುತ್ತಿದೆ. ಈ ಮೂಲಕ ಹಿಂದೂ ಧರ್ಮದ ಬೇರು ಕಿತ್ತು ಹಾಕುವ ಷಡ್ಯಂತ್ರ ರೂಪಿಸಿದೆ ಎಂದು ಆಪಾದಿಸಿದರು.

ಸೆ.22 ರಿಂದ 15 ದಿನಗಳ ಕಾಲ ಸಮೀಕ್ಷೆ ನಡೆಯಲಿದೆ. ಆಯೋಗ ಸಮೀಕ್ಷೆ ನಡೆಸಲು ನಮ್ಮ ಆಕ್ಷೇಪಣೆ ಇಲ್ಲ. ಆದರೆ 47ಕ್ಕೂ ಹೆಚ್ಚಿನ ಜಾತಿಗಳನ್ನು ಕ್ರಿಶ್ಚಿಯನ್ ಧರ್ಮದಲ್ಲಿ ಅಡಕ ಮಾಡಿರುವುದು ಸರಿಯಲ್ಲ. ಇದರಿಂದ ಆಯೋಗ ನಡೆಸುವ ಸಮೀಕ್ಷೆಯ ಮೂಲ ಉದ್ದೇಶವೇ ಮರೆಯಾಗಲಿದೆ ಎಂದು ರಘು ಕೌಟಿಲ್ಯ ದೂರಿದರು. ಸಮೀಕ್ಷೆಗೆ ಒಳಪಡುವ 1,400ಕ್ಕೂ ಹೆಚ್ಚು ಜಾತಿ ಹಾಗೂ ಉಪಜಾತಿಗಳನ್ನು ಆಯೋಗ ಈಗಾಗಲೇ ಪ್ರಕಟಿಸಿದೆ. ಈ ಪಟ್ಟಿಯಲ್ಲಿ ಹಿಂದೂ ಧರ್ಮದಲ್ಲಿರುವ ಜಾತಿಗಳನ್ನು ಅಕ್ರಮವಾಗಿ ಕ್ರೈಸ್ತ ಧರ್ಮದಲ್ಲಿರುವ ಜಾತಿಗಳೆಂದು ಗುರುತಿಸಲಾಗಿದೆ. ಇದು ಹಿಂದೂ ಧರ್ಮಿಯರನ್ನು ಮತಾಂತರ ಮಾಡುವ ವ್ಯವಸ್ಥಿತ ಕುತಂತ್ರವಾಗಿದೆ ಎಂದು ಹೇಳಿದರು. ಈಗಾಗಲೇ ಅನೇಕ ಜಾತಿಗಳ ಸಂಘಟನೆಯವರು ಹಿಂದುಳಿದ ಆಯೋಗಕ್ಕೆ ಪತ್ರ ಬರೆದು ತಮ್ಮ ಜಾತಿಗೆ ಕ್ರೈಸ್ತ ಹಣೆಪಟ್ಟಿ ಕಟ್ಟಿರುವ ಬಗ್ಗೆ ಆಕ್ಷೇಪಣೆ ಸಲ್ಲಿಸಿದ್ದಾರೆ. ಆದರೆ ಈ ಸಂಬಂಧ ಆಯೋಗ ಅಥವಾ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಿಲ್ಲ. ಹಿಂದೂ ಧರ್ಮದಲ್ಲಿರುವ ಜಾತಿಗಳನ್ನು ಕ್ರೈಸ್ತ ಧರ್ಮಕ್ಕೆ ಸೇರಿಸುವ ಹುನ್ನಾರದಲ್ಲಿ ದಲಿತ, ಹಿಂದುಳಿದ ಮತ್ತು ಸವರ್ಣೀಯ ಜಾತಿಗಳು ಸೇರಿರುವುದು ಆತಂಕಕಾರಿ ವಿಚಾರ ಎಂದರು.



ಬಿಜೆಪಿ ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ (ಎಡದಿಂದ ನಾಲ್ಕನೇಯವರು) ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮಾಜಿ ಕಾರ್ಪೋರೇಟರ್ ಪ್ರಶಾಂತ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ಉಪಮೇಯರ್ ಶೈಲೇಂದ್ರ ಇತರರಿದ್ದರು.

ಲಿಂಗಾಯತ ಕ್ರೈಸ್ತ, ಒಕ್ಕಲಿಗ ಕ್ರೈಸ್ತ, ಕುರುಬ ಕ್ರೈಸ್ತ, ನೇಕಾರ ಕ್ರೈಸ್ತ, ಮಡಿವಾಳ ಕ್ರೈಸ್ತ, ಬಿಲ್ಲವ ಕ್ರೈಸ್ತ, ಕುಂಬಾರ ಕ್ರೈಸ್ತ, ಮಾದಿಗ ಕ್ರೈಸ್ತ, ಹೊಲೆಯ ಕ್ರೈಸ್ತ, ಬಂಜಾರ ಕ್ರೈಸ್ತ ಎಂದು ಉಲ್ಲೇಖಿಸಿ ಹಲವು ಜಾತಿಗಳಿಗೆ ಕ್ರೈಸ್ತ ಧರ್ಮದ ಹಣೆಪಟ್ಟಿ ಕಟ್ಟಲಾಗಿದೆ. ಹಿಂದೂ ಧರ್ಮಿಯರನ್ನು ಕ್ರೈಸ್ತ ಧರ್ಮ ಮತಾಂತರಕ್ಕೆ ಪ್ರೇರೇಪಿಸುವುದು ಸರ್ಕಾರದ ಮೂಲ ಉದ್ದೇಶ ಎಂದು ಇದರಿಂದ ಸ್ಪಷ್ಟವಾಗಿದೆ ಎಂದು ರಘು ಕೌಟಿಲ್ಯ ಹೇಳಿದರು. ಕ್ರೈಸ್ತ ಹೆಸರಿನಲ್ಲಿ ಸೇರ್ಪಡೆಯಾಗುವ ಮತಾಂತರಿಗಳು ಹಿಂದುಳಿದ ವರ್ಗಗಳ ಮೀಸಲಾತಿ ಕಬಳಿ ಸುವ ಹುನ್ನಾರ ನಡೆಸಿದ್ದಾರೆ ಎಂದು ಆಪಾದಿಸಿದರು.

ಜನರಿಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸುತ್ತಿರುವ ಸರ್ಕಾರ ಈಗ ತರಾತುರಿಯಲ್ಲಿ ಸಮೀಕ್ಷೆ ನಡೆಸಿ ಮತಾಂತರ ಭಾಗ್ಯ ನೀಡಲು ಮುಂದಾಗಿದೆ ಎಂದು ಆರೋಪಿಸಿದರು. ಕ್ರೈಸ್ತ ಸಮುದಾಯದಲ್ಲಿ ಪ್ರಾಟೆಸ್ಟೆಂಟ್ ಹಾಗೂ ಕ್ಯಾಥೋಲಿಕ್ ಎಂಬ ಪಂಗಡಗಳಿವೆ. ಈ ಸಮುದಾಯದವರು ಕ್ರೈಸ್ತರೆಂದು ಗುರುತಿಸಿಕೊಳ್ಳಲು ಅವಕಾಶವಿದೆ. ಆದರೆ ಸರ್ಕಾರ ಹಲವು ಜಾತಿಗಳಿಗೆ ಕ್ರೈಸ್ತ ಹಣೆಪಟ್ಟಿ ಕಟ್ಟಿ ಹಿಂದೂ ಧರ್ಮದವರ ಮತಾಂತರ ಮಾಡಲು ಪ್ರೇರೇಪಣೆ ನೀಡುತ್ತಿದೆ ಎಂದು ಹೇಳಿದರು. ಯಾವುದಾದರೊಂದು ಜಾತಿಗೆ ಮೀಸಲಾತಿ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 8 ಸೆಪ್ಟೆಂಬರ್ 2025

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಜೊತೆ ದೀಪಾ ಬಾಸ್ತಿ ಅವರನ್ನೂ ಆಹ್ವಾನಿಸಬೇಕಿತ್ತು

ಅವಧೂತ ವಿನಯ್ ಗುರೂಜಿ ಅಭಿಪ್ರಾಯ

ಮೈಸೂರು, ಸೆ.7(ಎಂಕೆ)– ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರ ಜೊತೆಗೆ ದೀಪಾ ಬಾಸ್ತಿ ಅವರನ್ನೂ ಆಹ್ವಾನಿಸಬೇಕಿತ್ತು ಎಂದು ಅವಧೂತ ವಿನಯ್ ಗುರೂಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಭಾನುವಾರ ದಸರಾ ಉದ್ಘಾಟಕರ ಆಯ್ಕೆ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಧರ್ಮ ಎಲ್ಲವನ್ನು ಒಂದೇ ರೀತಿ ನೋಡಲಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಮೊದಲು ಸ್ವಧರ್ಮ ಪಾಲಿಸಿ, ಇತರೆ ಧರ್ಮಗಳನ್ನು ಗೌರವಿಸಬೇಕು. ಹಾಗಾಗಿ ಬಾನು ಮುಷ್ತಾಕ್ ಅವರೊಬ್ಬರನ್ನು ಕರೆಯುವ ಜೊತೆಗೆ ದೀಪಾ ಬಸ್ತಿ ಅವರನ್ನೂ ಕರೆಯಬೇಕಿತ್ತು. ಇಬ್ಬರಿಗೂ ಅವಾರ್ಡ್ ಸಿಕ್ಕಿದೆ. ಇಬ್ಬರೂ ಕರ್ನಾಟಕಕ್ಕೆ ಹೆಸರು ತಂದುಕೊಟ್ಟಿದ್ದಾರೆ. ಹಾಗಾಗಿ ಇಬ್ಬರನ್ನು ಆಹ್ವಾನಿಸಿದ್ದರೆ ಇನ್ನಷ್ಟು ಸಮಂಜಸವಾಗುತ್ತಿತ್ತು ಎಂದರು.

ನಮ್ಮ ದೇಶ ಎಲ್ಲಾ ಧರ್ಮಗಳನ್ನು ಒಟ್ಟುಗೂಡಿಸಿಕೊಂಡಿದೆ. ಯಾವುದೇ ಧರ್ಮವನ್ನು ವಿರೋಧಿಸದೆ ಸ್ವಾಗತ ಮಾಡಿದೆ. ಆದರೆ, ಭಾರತದ ಮೂಲಬೇರು ಯೋಗಭೂಮಿ. ಅಂದರೆ ಸನಾತನ ಧರ್ಮ. ಹಾಗಾಗಿ ಮೂಲಬೇರಿನ ಜೊತೆಗೆ ಇನ್ನುಳಿದ ಧರ್ಮಗಳನ್ನು ಗೌರವಿಸಿ, ಮೂಲಬೇರನ್ನು ಸ್ವೀಕಾರ ಮಾಡಬೇಕು. ಓಂಕಾರವನ್ನು ಸ್ವೀಕಾರ ಮಾಡಿದಾಗ ಶಾಂತಿಯ ಜೈಕಾರವಾಗುತ್ತದೆ ಎಂದು ಹೇಳಿದರು.

ಷಡ್ಯಂತ್ರದ ಹಿಂದೆ ಒಂದಷ್ಟು ಕೈಗಳಿವೆ: ಧರ್ಮಸ್ಥಳ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಧರ್ಮಸ್ಥಳದ ಒಳ್ಳೆಯ ಕಾರ್ಯಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಮ್ಮ ಊರಿನ ಕಡೆ ಅನೇಕ ಸಂಘ–ಸಂಸ್ಥೆಗಳ ಮೂಲಕ ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ. ಅದರೆ ಅಲ್ಲಿ ಏನೋ ಆಗಿದೆ ಅಂತ ತನಿಖೆ ನಡೆಸುತ್ತಿದ್ದಾರೆ. ತಪ್ಪು ಘಟನೆಗಳು ನಡೆದಿದ್ದರೆ ತನಿಖೆಯಿಂದ ಹೊರಬರುತ್ತವೆ. ಅದಕ್ಕೂ ಮೊದಲೇ ಕಾಮೆಂಟ್ ಮಾಡೋದು ಸರಿಯಲ್ಲ. ಷಡ್ಯಂತ್ರದ ಹಿಂದೆ ಒಂದಷ್ಟು ಕೈಗಳಿವೆ. ಹಿಂದೂ ದೇಗುಲ ಟಾರ್ಗೆಟ್ ಹೊಸದಲ್ಲ. ಈ ಹಿಂದೆ ನನ್ನ ಮೇಲೂ ಪಿತೂರಿ ಮಾಡಿದ್ರು. ಆನೆಯ ರೀತಿ ಎಲ್ಲವನ್ನೂ ತುಳಿದು ನಡೆಯಬೇಕು. ಕೊನೆಗೆ ಧರ್ಮ ಉಳಿಯುತ್ತೆ, ಸತ್ಯ ಹೊರಬರುತ್ತೆ ಎಂದರು.

'ಡ್ರಗ್ಸ್ ಮುಕ್ತ ಮೈಸೂರು' ಜಾಗೃತಿ ಬೈಕ್ ರ್‍ಯಾಲಿ

ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಾಣ ಸಂಕಲ್ಪ



ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಾಣ ಸಂಕಲ್ಪ ಹಿನ್ನೆಲೆ 'ಡ್ರಗ್ಸ್ ಮುಕ್ತ ಮೈಸೂರು' ಶೀರ್ಷಿಕೆಯಡಿ ಭಾನುವಾರ ಬೃಹತ್ ಬೈಕ್ ರ್‍ಯಾಲಿಗೆ ಅವಧೂತ ವಿನಯ್ ಗುರೂಜಿ, ಖ್ಯಾತ ವೈದ್ಯ ಡಾ.ಶುಶ್ರುತಗೌಡ ಚಾಲನೆ ನೀಡಿದರು.

ಡ್ರಗ್ಸ್ ಕೇಸ್‌ನಿಂದ ಮೈಸೂರಿಗೆ ಅವಮಾನ...!

"ಮೈಸೂರಲ್ಲಿ ಡ್ರಗ್ಸ್ ಕೇಸ್ ಪತ್ತೆಯಾಗಿದೆ ಎಂದರೆ ಅದು ಮೈಸೂರಿಗಾದ ಅವಮಾನ. ಕರ್ನಾಟಕದ ದುರಾವಸ್ಥೆ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಮೈಸೂರ್ ಪಾಕ್, ಚಾಮುಂಡಿಬೆಟ್ಟದಿಂದ ಪ್ರಸಿದ್ಧಿ ಪಡೆದಿರುವ, ಸಂಸ್ಕಾರದಿಂದ ಕೂಡಿರುವ ಜನರಿರುವ ಮೈಸೂರಲ್ಲಿ ಡ್ರಗ್ಸ್ ಜಾಲ ಪತ್ತೆಯಾಗಿರುವುದು ದುರಾವಸ್ಥೆಗೆ ಉದಾಹರಣೆಯಾಗಿದೆ. ಇಂದು ಡ್ರಗ್ಸ್ ಮುಕ್ತ ಮೈಸೂರಿಗೆ ಮುನ್ನುಡಿ ಬರೆದಿದ್ದು, ಡ್ರಗ್ಸ್ ಫ್ರೀ ಮೈಸೂರು ಮಾಡಲು ಎಲ್ಲರ ಸಹಕಾರ ಅತ್ಯಗತ್ಯ
–ಅವಧೂತ ವಿನಯ್ ಗುರೂಜಿ

"ಇತ್ತೀಚೆಗೆ ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ತಯಾರಿಕಾ ಕಾರ್ಖಾನೆಯೊಂದರಲ್ಲೇ ಸುಮಾರು 192 ಕೋಟಿ ಮೌಲ್ಯದ ಡ್ರಗ್ಸ್ ಅನ್ನು ವಶಕ್ಕೆ ಪಡೆಯಲಾಗಿದೆ. ಇದೊಂದು ಆತಂಕ ಹುಟ್ಟಿಸುವ ಸಂಗತಿಯಾಗಿದ್ದು, ಇನ್ನೂ ಹಲವು ಕಾರ್ಖಾನೆಗಳಿವೆ. ಈ ಕುರಿತು ಪೊಲೀಸರು ಹೆಚ್ಚಿನ ಗಮನಹರಿಸಬೇಕು. ಡ್ರಗ್ಸ್ ನಿಯಂತ್ರಣಕ್ಕೆ ಸರ್ಕಾರ ಮತ್ತು ಪೊಲೀಸರ ಮೇಲೆ ಒತ್ತಡ ಹಾಕುವುದರ ಜೊತೆಗೆ ನಾವೆಲ್ಲರೂ ಜಾಗೃತರಾಗಬೇಕು. ಡ್ರಗ್ಸ್ ತಯಾರಕರನ್ನು ಗಡಿಪಾರು ಮಾಡಬೇಕು. ಮಕ್ಕಳಿಗೆ ಡ್ರಗ್ಸ್ ಕೊಡುವುದು ಅವರನ್ನು ಸಾಯಿಸಿದಂತೆಯೇ. ಹಾಗಾಗಿ ಕೊಲೆ ಅಪರಾಧಿಗಳಿಗೆ ವಿಧಿಸುವ ಶಿಕ್ಷೆಯನ್ನೇ ಡ್ರಗ್ಸ್ ಮಾರಾಟಗಾರರಿಗೂ ವಿಧಿಸಬೇಕು. **–ಡಾ.ಶುಶ್ರುತಗೌಡ, ಖ್ಯಾತ ವೈದ್ಯ**

ಮೈಸೂರು,ಸೆ.7(ಎಂಕೆ)–ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಾಣ ಸಂಕಲ್ಪ ಹಿನ್ನೆಲೆ 'ಡ್ರಗ್ಸ್ ಮುಕ್ತ ಮೈಸೂರು' ಶೀರ್ಷಿಕೆಯಡಿ ಬೃಹತ್ ಬೈಕ್ ರ್‍ಯಾಲಿ ಮೂಲಕ ಜನ ಜಾಗೃತಿ ಮೂಡಿಸಲಾಯಿತು.

ನಗರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಭಾನುವಾರ ವಿ.ಆರ್.ಟ್ರಸ್ಟ್, ರೋಟರಿ, ಲಯನ್ಸ್ ಇಂಟರ್‌ನ್ಯಾಷನಲ್ ಸೇರಿದಂತೆ ಹಲವು ಸಂಘ–ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ 500ಕ್ಕೂ ಬೈಕ್‌ಗಳಲ್ಲಿ ಸಂಚರಿಸಿದ ಸವಾರರು, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೂಡಲೇ ಮಾದಕ ವಸ್ತುಗಳನ್ನು ತ್ಯಜಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಬೈಕ್ ರ್‍ಯಾಲಿ ಹಾರ್ಡಿಂಗ್ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಜೆಎಲ್‌ಬಿ ರಸ್ತೆ ಮಾರ್ಗವಾಗಿ ಮುಡಾ ಸರ್ಕಲ್, ರೈಲ್ವೆ ನಿಲ್ದಾಣ ವೃತ್ತ, ಇರ್ವಿನ್ ರಸ್ತೆ ಮಾರ್ಗವಾಗಿ ಅಶೋಕ ರಸ್ತೆ ಮೂಲಕ ಪುನಃ ಶ್ರೀ ಕೋಟೆ ಆಂಜನೇಯಸ್ವಾಮಿ ಎದುರು ಮುಕ್ತಾಯಗೊಂಡಿತು.

ರ್‍ಯಾಲಿಗೆ ಚಾಲನೆ ನೀಡುವ ಮುನ್ನ ಮಾತನಾಡಿದ ಅವಧೂತ ವಿನಯ್ ಗುರೂಜಿ, ನಮ್ಮ ದೇಶದ ಆಸ್ತಿಯಾಗಿರುವ ಯುವಕರು ಡ್ರಗ್ಸ್‌ಗೆ ಅಡಿಕ್ಟ್ ಆಗದಂತೆ ನೋಡಿಕೊಳ್ಳಬೇಕು. ಯುವ ಸಮೂಹ ಎಚ್ಚೆತ್ತುಕೊಳ್ಳದಿದ್ದರೆ ಡ್ರಗ್ಸ್ ನಿರ್ಮೂಲನೆ ಸಾಧ್ಯವಿಲ್ಲ. ಯಾವ್ಯಾವುದಕ್ಕೋ ಸಾಮಾಜಿಕ ಜಾಲತಾಣ ಬಳಕೆ ಮಾಡುವ ನಾವುಗಳು ಮುಖ್ಯವಾಗಿ ಡ್ರಗ್ಸ್‌ನಿಂದಾಗುವ ಅನಾಹುತಗಳನ್ನು ತಿಳಿಸಲು ಬಳಕೆ ಮಾಡಬೇಕಿದೆ. ಎಲ್ಲರೂ ಸೇರಿ ಊರನ್ನು ಹಾಳು ಮಾಡಿದ್ದೇವೆ. ಹಾಗಾಗಿ ಎಲ್ಲರೂ ಸೇರಿ ಊರನ್ನು ಸರಿಮಾಡುವ ಕೆಲಸ ಮಾಡಬೇಕು. ಡ್ರಗ್ಸ್ ಮಾರಾಟಗಾರರಿಗೆ ಸರಿಯಾದ ದಂಡನೆ ವಿಧಿಸಬೇಕು ಎಂದು ಆಗ್ರಹಿಸಿದರು.

ಖ್ಯಾತ ವೈದ್ಯ ಡಾ.ಶುಶ್ರುತ ಗೌಡ ಮಾತನಾಡಿ, ಮಾದಕ ವಸ್ತುಗಳಿಗೆ ಯುವ ಸಮೂಹ ಬಲಿಯಾಗುತ್ತಿದೆ. ಯುವಕ–ಯುವತಿಯರೇ ದೇಶದ ಭವಿಷ್ಯವಾಗಿದ್ದು, ಪ್ರತೀ ವರ್ಷ 10 ಸಾವಿರಕ್ಕೂ ಹೆಚ್ಚು ಜನರು ಮಾದಕ ವ್ಯಸನದಿಂದ ಸಾವನ್ನಪ್ಪುತ್ತಿದ್ದಾರೆ. ಕರ್ನಾಟಕ ಉತ್ಪಾದನೆ, ತಂತ್ರಜ್ಞಾನ ಮತ್ತು ಅಭಿವೃದ್ಧಿ ಸೇರಿದಂತೆ ಬಹಳಷ್ಟು ವಿಷಯಗಳಲ್ಲಿ ಮುಂದಿದೆ. ದುರದೃಷ್ಟಕರವೆಂದರೆ, ಅತೀ ಹೆಚ್ಚು ಡ್ರಗ್ಸ್ ಬಳಕೆಯ ರಾಜ್ಯಗಳಾದ ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ಮಣಿಪುರ ರಾಜ್ಯಗಳ ಸಾಲಿಗೂ ಕರ್ನಾಟಕ ಸೇರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಭಿಯಾನಗಳಾಗಬೇಕು: ಯೋಗ ಗುರು ಶ್ರೀಹರಿ ಮಾತನಾಡಿ, ನೂರಾರು ವರ್ಷದಿಂದ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯಕ್ರಮಗಳು, ಹೋರಾಟಗಳು ನಡೆಯುತ್ತಲೇ ಇವೆ. ಜೊತೆಗೆ ಶಾಲಾ–ಕಾಲೇಜುಗಳನ್ನು ಒಳಗೊಂಡು ಎಲ್ಲೆಡೆ ಅಭಿಯಾನಗಳು ನಡೆಯಬೇಕು. ಡ್ರಗ್ಸ್ ಬಳಕೆಯಿಂದಾಗುವ ಅಪಾಯವನ್ನು ಪೋಷಕರಿಗೆ ತಿಳಿಸಬೇಕು. ಅಭಿಯಾನಕ್ಕೆ ನಾಗರಿಕರ ಸಹಕಾರ ಅವಶ್ಯವಾಗಿದ್ದು, ಡ್ರಗ್ಸ್ ಸೇವನೆಯಿಂದಾಗುವ ಪರಿಣಾಮ ಕಾಣುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಡ್ರಗ್ಸ್ ಕ್ಯಾಪಿಟಲ್ ಆಗದಿರಲಿ: ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ಮೈಸೂರು ಪಾರಂಪರಿಕ ನಗರಿ, ಅರಮನೆ ನಗರಿ, ಮಲ್ಲಿಗೆ ನಗರಿ ಎಂದೆಲ್ಲಾ ಖ್ಯಾತಿ ಪಡೆದಿದ್ದು, ಡ್ರಗ್ಸ್ ಕ್ಯಾಪಿಟಲ್ ಎಂದಾಗಬಾರದು. ಮೈಸೂರಲ್ಲಿ ದೊಡ್ಡ ಡ್ರಗ್ಸ್ ಜಾಲ ಪತ್ತೆಯಾಗಿದ್ದು, ಆತಂಕಕಾರಿ ವಿಷಯವಾಗಿದೆ. ಮನುಷ್ಯರಿಗೆ ಕಿಕ್ ಬೇಕು ನಿಜ. ಆದರೆ ಆ ಕಿಕ್ ಸಾಧನೆ ಮೂಲಕ ಪಡೆದುಕೊಳ್ಳಬೇಕು. ಒಳ್ಳೆಯ ಕೆಲಸದ ಮೂಲಕ ಕಿಕ್ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಡಾಕ್ಟರೇಟ್ ಆಫ್ ನ್ಯಾಷನಲ್ ಬೋರ್ಡ್ ಸೂಪರ್ ಸ್ಪೆಷಾಲಿಟಿ ತರಬೇತಿ ನೀಡಲು ಮೈಸೂರು ವೈದ್ಯಕೀಯ ಕಾಲೇಜಿಗೆ ಮಾನ್ಯತೆ



ಮೈಸೂರು, ಸೆ.7(ಜಿಎ)–ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು(ಎಂಎಂಸಿಆರ್‌ಐ) ಡಾಕ್ಟರೇಟ್ ಆಫ್ ನ್ಯಾಷನಲ್ ಬೋರ್ಡ್ ಸೂಪರ್ ಸ್ಪೆಷಾಲಿಟಿ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಮಾನ್ಯತೆ ಪಡೆದುಕೊಂಡಿದೆ.

ನವದೆಹಲಿಯ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷಾ ಮಂಡಳಿಯು ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸಾ ಆಂಕೊಲಾಜಿ ವಿಭಾಗಕ್ಕೆ ಡಾಕ್ಟರೇಟ್ ಆಫ್ ನ್ಯಾಷನಲ್ ಬೋರ್ಡ್ ಸೂಪರ್ ಸ್ಪೆಷಾಲಿಟಿ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಮಾನ್ಯತೆ ನೀಡಿದೆ. ವರ್ಷಕ್ಕೆ ಎರಡು ಸೀಟುಗಳಿಗೆ ಅನುಮೋದನೆ ನೀಡಲಾಗಿದ್ದು, ಶತಮಾನೋತ್ಸವದ ಮೈಸೂರು ವೈದ್ಯಕೀಯ ಕಾಲೇಜಿನ ಇತಿಹಾಸದಲ್ಲಿ ಇದು ಒಂದು ಮೈಲಿಗಲ್ಲಾಗಿದೆ. ಇದು ಎಂಎಂಸಿಆರ್‌ಐನಲ್ಲಿ ನಡೆಯುತ್ತಿರುವ ಎರಡನೇ ಸೂಪರ್ ಸ್ಪೆಷಾಲಿಟಿ ತರಬೇತಿ ಕಾರ್ಯಕ್ರಮವಾಗಿದೆ. ಅಲ್ಲದೆ, ಬೆಂಗಳೂರಿನ ಹೊರಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಮೊದಲ ಡಾಕ್ಟರೇಟ್ ಆಫ್ ನ್ಯಾಷನಲ್ ಬೋರ್ಡ್ ಸರ್ಜಿಕಲ್ ಆಂಕೊಲಾಜಿ ತರಬೇತಿ ಕಾರ್ಯಕ್ರಮ ಇದಾಗಿದೆ. ಮೈಸೂರು ಪ್ರದೇಶದ ಆಂಕೊಲಾಜಿಯ ಯಾವುದೇ ಶಾಖೆಯಲ್ಲಿ ಇದು ಮೊದಲ ತರಬೇತಿ ಕಾರ್ಯಕ್ರಮವಾಗಿದೆ.

ಎಂಎಂಸಿಆರ್‌ಐನಲ್ಲಿನ ಶಸ್ತ್ರಚಿಕಿತ್ಸಾ ಆಂಕೊಲಾಜಿ ವಿಭಾಗವು ಪಿಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುವ ಪೂರ್ಣ ಪ್ರಮಾಣದ ವಿಭಾಗವಾಗಿದ್ದು, ಎಲ್ಲಾ ರೀತಿಯ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳಿಗೆ ಸಮರ್ಪಿತವಾಗಿದೆ. ವಿಭಾಗವು ಡಾ.ಎಸ್.ಎಸ್.ಪ್ರಕಾಶ್ ಮತ್ತು ಡಾ.ಎಂ.ಶ್ರೀನಿಧಿ ನುರಿತ ಅಧ್ಯಾಪಕರನ್ನು ಒಳಗೊಂಡಿದೆ. ಎಲ್ಲಾ ರೀತಿಯ ಸಂಕೀರ್ಣ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ಈ ವಿಭಾಗದಲ್ಲಿ ನಿಯಮಿತ ವಾಗಿ ನಡೆಸಲಾಗುತ್ತಿದೆ. ಖಾಸಗಿ ಆಸ್ಪತ್ರೆ ಗಳಲ್ಲಿ ದುಬಾರಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ಪಡೆಯಲು ಸಾಧ್ಯವಾಗದ ಬಡ ಕ್ಯಾನ್ಸರ್ ರೋಗಿಗಳಿಗೆ ಇಲಾಖೆಯು ಉತ್ತಮ ಸೇವೆ ಸಲ್ಲಿಸುತ್ತಿದೆ.

ಮಂತ್ರಾಲಯ, ಶಿರಡಿ ಸೇರಿ 8 ಧರ್ಮಕ್ಷೇತ್ರಗಳಿಗೆ ಶಿವ ಸಾಯಿಯಾತ್ರೆ

ಅ.2ರಿಂದ ಭಾರತ್ ಗೌರವ್ ರೈಲು ಆರಂಭ



ದರಗಳು ಇಂತಿವೆ
ಸ್ಲೀಪರ್ (ರೂ. 27,700), 3ಎಸಿ (ರೂ 37,000), 2ಎಸಿ ಡೀಲಕ್ಸ್ (ರೂ 43,000), ಎಸಿ ಲಕ್ಷುರಿ (ರೂ 47,900). ಆಸಕ್ತರು 93550 21516 ಸಂಪರ್ಕಿಸಿ, ಆನ್‌ಲೈನ್‌ನಲ್ಲಿ www.tourtimes.in ಮೂಲಕ ಬುಕಿಂಗ್ ಮಾಡಬಹುದಾಗಿದೆ.

ಮೈಸೂರು, ಸೆ.7–ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ದೇಶದ ಮುಂಚೂಣಿ ಪ್ರವಾಸಿ ರೈಲು ನಿರ್ವಾಹಕ ಸಂಸ್ಥೆಯಾದ ಟೂರ್ ಟೈಮ್ಸ್ ಸಹಭಾಗಿತ್ವದಲ್ಲಿ ಭಾರತ್ ಗೌರವ್ ರೈಲು ಸಂಚಾರವನ್ನು ಮೊಟ್ಟಮೊದಲಿಗೆ ಆರಂಭಿಸಿದ ಸೌತ್ ಸ್ಟಾರ್ ರೈಲು ಕಂಪನಿಯು ನವ ಬೃಂದಾವನ ಹಾಗೂ ಶ್ರೀಶೈಲ ಸೇರಿದಂತೆ 8 ಧರ್ಮಕ್ಷೇತ್ರಗಳಿಗೆ ಶಿವ ಸಾಯಿಯಾತ್ರೆ ಎಂಬ ಹೊಸ ಪ್ರವಾಸ ಕಾರ್ಯಕ್ರಮ ರೂಪಿಸಿದ್ದು, ಅಕ್ಟೋಬರ್ 2ರಿಂದ ಈ ರೈಲು ಸಂಚಾರ ಆರಂಭಿಸಲಿದೆ.

ಪ್ರವಾಸಿಗರು ರೈಲಿನಲ್ಲಿ ತೆರಳಿ ನವ ಬೃಂದಾವನ, ಮಂತ್ರಾಲಯ, ಪಂಡರಾಪುರ, ಶಿರಡಿ, ತ್ರಯಂಬಕೇಶ್ವರ, ಭೀಮಾಶಂಕರ, ಗುಷ್ಣೇಶ್ವರ ಹಾಗೂ ಶ್ರೀಶೈಲಂ ಧರ್ಮಕ್ಷೇತ್ರಗಳ ದರ್ಶನ ಮಾಡಬಹುದು. ಒಟ್ಟು 11 ದಿನಗಳ ಈ ಪ್ರವಾಸವು ಎಲ್ಲೋರಾ ಗುಹೆಗಳ ಭೇಟಿಯನ್ನೂ ಒಳಗೊಂಡಿದೆ ಎಂದು ಸೌತ್ ಸ್ಟಾರ್‌ನ ಪ್ರಾಡಕ್ಟ್ ಡೈರೆಕ್ಟರ್ ವಿಘ್ನೇಶ್ ಜಿ. ತಿಳಿಸಿದ್ದಾರೆ.

ರೈಲು ಬಂಗಾರಪೇಟೆಯಿಂದ ಹೊರಡಲಿದ್ದು, ಪ್ರವಾಸಿಗರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಬೆಂಗಳೂರಿನ ವೈಟ್‌ಫೀಲ್ಡ್, ಯಲಹಂಕ, ಧರ್ಮಾವರಂ, ಅನಂತಪುರ, ಬಳ್ಳಾರಿ, ಹೊಸಪೇಟೆಯಲ್ಲೂ ರೈಲು ಹತ್ತಬಹುದು. ಆನ್‌ಬೋರ್ಡ್ ಘೋಷಣಾ ವ್ಯವಸ್ಥೆ, ನಿಯೋಜಿತ ಕೋಚ್ ಭದ್ರತಾ ಸಿಬ್ಬಂದಿ, ಟೂರ್ ಮ್ಯಾನೇಜರ್‌ಗಳು, ಪ್ರಯಾಣ ವಿಮೆ, ಹೋಟೆಲ್ ವ್ಯವಸ್ಥೆ, ಸೈಟ್ ಸೀಯಿಂಗ್, ಅನಿಯಮಿತ ದಕ್ಷಿಣ ಭಾರತದ ಊಟ ಇತ್ಯಾದಿ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಈ ಪ್ರವಾಸಕ್ಕೆ ಎಲ್‌ಟಿಸಿ, ಎಲ್‌ಎಫ್‌ಸಿ ಅನ್ವಯವಾಗಲಿದ್ದು, ಭಾರತೀಯ ರೈಲ್ವೆಯ ಶೇ.33ರಷ್ಟು ಸಹಾಯಧನ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.

ಮಕ್ಕಳಿಗೆ ಪ್ರತಿಭಾ ಪುರಸ್ಕಾರ...



ಇತ್ತೀಚೆಗೆ ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ನಡೆದ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ನೃತ್ಯ, ಸಂಗೀತ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ವೇಳೆ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಉಪಾಧ್ಯಕ್ಷೆ ಶ್ರೀಮತಿ ಸೌಮ್ಯ ಎಂ.ಎನ್., ಖಜಾಂಚಿ ಕೆ.ನಾಗರಾಜ, ನಿರ್ದೇಶಕ ಮಂಡಲಿ ಸದಸ್ಯರಾದ ಸಿ.ವಿ.ಪಾರ್ಥಸಾರಥಿ, ಪ್ರಶಾಂತ್ ತಾತಾಚಾರ್ ಹೆಚ್.ಎಸ್., ಬಾಲಕೃಷ್ಣ ಎಂ.ಆರ್., ಹೆಚ್.ಪಿ.ಚೇತನ್, ಶ್ರೀಮತಿ ಮಹಿಮ, ವಿಕ್ರಂ ಕೆ., ಶ್ರೀಮತಿ ನಾಗಶ್ರೀ, ಕೆ.ಎನ್.ಅರುಣ್, ಶಿವರುದ್ರಪ್ಪ, ಶ್ರೀಮತಿ ಎಸ್.ರಾಜಮ್ಮ, ಶ್ರೀಮತಿ ಶಾಶ್ವತಿ ನಾಯಕ ಎಂ.ಪಿ.,ಪ್ರಭಾರ ಕಾರ್ಯದರ್ಶಿ ಶ್ರೀಮತಿ ಎನ್.ವೀಣಾ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಕಟ್ಟೆ ಬಳಗದಿಂದ ಗಣೇಶೋತ್ಸವ

ಮೈಸೂರು, ಸೆ.7–ನಗರದ ಕೃಷ್ಣಮೂರ್ತಿಪುರಂ 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಯಲ್ಲಿರುವ ಕಟ್ಟೆ ಬಳಗದ ವತಿಯಿಂದ 10ನೇ ವರ್ಷದ ಗಣೇಶೋತ್ಸವ ಆಚರಣೆಯನ್ನು ಸೆಪ್ಟೆಂಬರ್ 9ರಿಂದ 11ರವರೆಗೆ ಹಮ್ಮಿಕೊಳ್ಳಲಾಗಿದೆ.

ಸೆ.9ರಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಮಹಾಗಣಪತಿ ಮೂರ್ತಿ ಪ್ರತಿಷ್ಠಾಪನೆ, ಅದೇ ದಿನ ಸಂಜೆ 5.30ಕ್ಕೆ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಕ್ರೀಡಾ ಸ್ಪರ್ಧೆ, ಸೆ.10ರಂದು ಸಂಜೆ 5 ಗಂಟೆಗೆ ನಿತಿನ್ ರಾಜಾರಾಮ್ ಶಾಸ್ತ್ರಿ ಮತ್ತು ತಂಡದವರಿಂದ ಕನ್ನಡ ಮತ್ತು ಹಿಂದಿ ಚಲನಚಿತ್ರಗಳ ರಸಸಂಜೆ ಕಾರ್ಯಕ್ರಮ ಹಾಗೂ ಸೆ.11ರಂದು ಸಂಜೆ 6.30ಕ್ಕೆ ಕೃಷ್ಣಮೂರ್ತಿಪುರಂ ಪ್ರಮುಖ ಬೀದಿಗಳಲ್ಲಿ ಶ್ರೀ ಮಹಾಗಣಪತಿ ಮೆರವಣಿಗೆ ಹಾಗೂ ತೀರ್ಥ ಪ್ರಸಾದವನ್ನು ವಿನಿಯೋಗಿಸಲಾಗುವುದು ಎಂದು ಕಟ್ಟೆ ಬಳಗದ ಸದಸ್ಯ ಆರ್.ಎಸ್.ಸತ್ಯನಾರಾಯಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9686832244 ಅನ್ನು ಸಂಪರ್ಕಿಸಬಹುದು.

ಗಣೇಶೋತ್ಸವ...



ಮೈಸೂರು ತಾಲೂಕಿನ ಜಯಪುರದ ವಿನಾಯಕ ಬಡಾವಣೆಯಲ್ಲಿ ನಡೆದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಸಮಿತಿ ಸದಸ್ಯರು ಸನ್ಮಾನಿಸಿದರು. ಈ ವೇಳೆ ಮುಖಂಡರಾದ ಜವರನಾಯಕ, ಎಂ.ನಾಗರಾಜು, ಮೂಗನಾಯಕ, ಮಂಜುನಾಥ್, ಚಿಕ್ಕಣ್ಣನಾಯಕ ಇತರರಿದ್ದರು.

ಸೆ.12, ಭರವಸೆಯ ಹೆಜ್ಜೆ–ಬದುಕಿನ ಸಾಧ್ಯತೆಗಳ ಕುರಿತು ಕಾರ್ಯಾಗಾರ

ಮೈಸೂರು, ಸೆ.7– ಶಿವಮೊಗ್ಗದ ಸಮನ್ವಯ ಟ್ರಸ್ಟ್ ವತಿಯಿಂದ ಸೆ.12ರಂದು ಬೆಳಗ್ಗೆ 9.30ರಿಂದ ಮೈಸೂರಿನ ಕಲಾಮಂದಿರದಲ್ಲಿ ಭರವಸೆಯ ಹೆಜ್ಜೆ–ಬದುಕಿನ ಸಾಧ್ಯತೆಗಳ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ನಿರ್ದೇಶಕ ಸಮನ್ವಯ ಕಾಶಿ ತಿಳಿಸಿದ್ದಾರೆ.

ಕರ್ನಾಟಕ ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ.ದಯಾನಂದ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮವನ್ನು, ರಾಷ್ಟ್ರಪ್ರಶಸ್ತಿ ಪುರಸ್ಕೃತ ದುರ್ಗಪ್ಪ ಅಂಗಡಿ ಉದ್ಘಾಟಿಸುವರು.

ಅಂತರರಾಷ್ಟ್ರೀಯ ಈಜುಪಟು ಎನ್.ಎಂ. ಧ್ಯಾನ್‌ಕಶ್ಯಪ್, ಅಂತರರಾಷ್ಟ್ರೀಯ ಯೋಗಪಟು (ತಮಿಳುನಾಡಿನ ಸೇಲಂ) ಸುಂದರಿಸನ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು. ಮುಖ್ಯ ಅತಿಥಿಗಳಾಗಿ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕಿ ಡಾ.ಡಿ.ಎಸ್. ಪ್ರತಿಮಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಮೈಸೂರು ಮಹಾನಗರಪಾಲಿಕೆ (ಕಂದಾಯ) ಆಯುಕ್ತ ಸೋಮಶೇಖರ್, ಮೈಸೂರು ಜಿಲ್ಲೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ, ಮೈಸೂರು ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿಲ್ಪಾ ಹಾಗೂ ಫಸ್ಟಾಕ್ ಪ್ರೈ.ಲಿ. ಕಂಪನಿ ಸಿಇಒ ವಿಕ್ರಮ್ ಎ.ಬಿ. ಪಾಲ್ಗೊಳ್ಳುವರು. ಸಮನ್ವಯ ಟ್ರಸ್ಟ್ ನಿರ್ದೇಶಕ ಸಮನ್ವಯ ಕಾಶಿ ಅಧ್ಯಕ್ಷತೆ ವಹಿಸುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊಫೈಲ್ ಇನ್ ಸಂಸ್ಥಾಪಕ ವೆಂಕಟೇಶ್ ಎಸ್.ವಿ, ತರಬೇತುದಾರ ಗುರುರಾಜ ಬುಲುಬುಲೆ ಪಾಲ್ಗೊಳ್ಳಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಮನ್ವಯ ಕಾಶಿ ಕೋರಿದ್ದಾರೆ.

ಅಭಿನಂದನೆ...




ಕೇಂದ್ರ ಲೋಕಸೇವಾ ಆಯೋಗ–2024ರ ಐಎಎಸ್ ಪರೀಕ್ಷೆಯಲ್ಲಿ 31ನೇ ರ್‍ಯಾಂಕ್ ಪಡೆದ ಗುಂಡ್ಲುಪೇಟೆ ತಾಲೂಕಿನ ಆಲತ್ತೂರಿನ ಮಹದೇವೇಗೌಡ ಹಾಗೂ ಜಯಲಕ್ಷ್ಮೀ ದಂಪತಿ ಪುತ್ರಿ ಚೈತ್ರ ಅವರನ್ನು ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ ಅಭಿನಂದಿಸಿದರು.



ಆಸಿಫಾ ಫೆರ್ದೋಸ್‌ಗೆ ಪಿಹೆಚ್.ಡಿ ಪದವಿ

ಮೈಸೂರು: ಡಾ.ಕೆ.ಶಿವಶಂಕರ ಅವರ ಮಾರ್ಗದರ್ಶನದಲ್ಲಿ ಆಸಿಫಾ ಫೆರ್ದೋಸ್ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.09.2025 ಸೋಮವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಭಾದ್ರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಅಭಿರುಚಿ ಪ್ರಕಾಶನ, ಮೈಸೂರು, ಪ್ರಗತಿಪರ ಸಂಘಟನೆಗಳ ಒಕ್ಕೂಟ, ಮಾನವ ಮಂಟಪ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಲಿತ ಸಂಘರ್ಷ ಸಮಿತಿ, ನಿರಂತರ ಫೌಂಡೇಷನ್ :** ಕರ್ವಾಲೋ–50–ತೇಜಸ್ವಿ ಮತ್ತು ಪರಿಸರ ಕಾರ್ಯಕ್ರಮ, ಬೆಳಗ್ಗೆ 10ರಿಂದ ಪೂರ್ಣಚಂದ್ರ ತೇಜಸ್ವಿ ಅವರ ಕುರಿತು ಸಾಕ್ಷ್ಯಚಿತ್ರ ಉದ್ಘಾಟನೆ: ಖ್ಯಾತ ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ, ನಾ ಕಂಡಂತೆ ತೇಜಸ್ವಿ–ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್, ಕೃಷಿ ಹೋರಾಟ, ಛಾಯಾಗ್ರಹಣ ಮತ್ತು ಪರಿಸರ–ಕೃಷಿಕ ಎಂ.ವಿ.ಕೃಷ್ಣ, ತೇಜಸ್ವಿ ಅವರ ಒಡನಾಟದಲ್ಲಿ –ಶ್ರೀ ರಾಘವೇಂದ್ರ ಮೂಡಿಗೆರೆ, ಸಂವಾದ–ಕರ್ವಾಲೋ ಸುತ್ತಮುತ್ತ, ಕೃಪಾಕರ ಸೇನಾನಿ, ಪ್ರೊ.ಬಿ.ಎನ್.ರಾಮ, ಸ್ಥಳ: ಕಿರುರಂಗಮಂದಿರ.
- **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಸ್ಪತ್ರೆ :** ಪೆಲ್ವಿಕ್ ಹೆಲ್ತ್ ಕ್ಲಿನಿಕ್ ಉದ್ಘಾಟನೆ, ಉದ್ಘಾಟನೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಒಳಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಎಂ.ಜಿ.ರಸ್ತೆ, ಬೆಳಗ್ಗೆ 10.30ಕ್ಕೆ.
- **ಹೆಚ್.ವಿ.ರಾಜೀವ್ ಸ್ನೇಹ ಬಳಗ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಕ್ಲಿಯರ್ ಮೆಡಿ ಹೆಲ್ತ್‌ಕೇರ್ :** ಶಿಕ್ಷಕರ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಕರ್ನಾಟಕ ಪಬ್ಲಿಕ್ ಶಾಲೆ ಕುವೆಂಪುನಗರ, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ಸಂಜೀವ್ ಕುಲಕರ್ಣಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ಕೆ.ಬಿ.ಸುನೀತಾ ಆಚಾರ್ಯ ಹಾಗೂ ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಡಾ.ಜ್ಯೋತಿಶಂಕರ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು: ಪುಷ್ಪ ಜಗದೀಶ್, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ವಿ.ಬಾಲಸಾಯಿ–ವೇಣುವಾದನ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ, ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ, ವಿಶ್ವ ಫಿಸಿಯೋಥೆರಪಿ ದಿನಾಚರಣೆ ಸಂದರ್ಭದಲ್ಲಿ ಫಿಸಿಯೋಥೆರಪಿಯನ್ನು ಯಾವ ಸಂದರ್ಭಗಳಲ್ಲಿ ನೀಡಲಾಗುತ್ತದೆ ಕುರಿತು ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಸ್ವಸ್ಥವೃತ್ತ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಫಿಸಿಯೋಥೆರಪಿಸ್ಟ್ ಡಾ.ಬಿ.ಸಿ.ಶ್ರೀಧರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಹೆಚ್.ಡಿ.ಚೇತನಾ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಆನಯಂಪಟ್ಟಿ ಎಸ್.ಗಣೇಶನ್, ಜಲತರಂಗ್ ವಾದನ, 4.00: ಮಹಿಳಾರಂಗ, ಡಾಕ್ಟರ್ ಸಮಯ: ಮಹಿಳಾ ಆರೋಗ್ಯ ಕಾರ್ಯಕ್ರಮ, ಭಾಗವಹಿಸುತ್ತಾರೆ: ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜಿನ ವೈದ್ಯಾಧಿಕಾರಿ ಡಾ.ಪ್ರಫುಲ್ಲ.ಕೆ, ಪ್ರಸ್ತುತಿ: ಕೆ.ನೇತ್ರಾವತಿ, 4.45–ಹಿಂದಿ ಪಾಠ, ಪ್ರಸ್ತುತಿ: ಶಾಂತಾ.ಡಿ.ಕಿಣಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50: ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ. ನೂತನವಾಗಿ ಆರಂಭವಾಗಿರುವ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕಾರ್ಯ ಚಟುವಟಿಕೆ ಕುರಿತು ವಿಶೇಷ ಅಧಿಕಾರಿ ಡಾ.ಕೆ.ಎಂ.ಹರಿಣಿಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00: ಯುವವಾಣಿ, ದಸರಾ ಕುರಿತ ವಿಶೇಷ ಚಿತ್ರ ಚಿತ್ತಾರ, ಪ್ರಸ್ತುತಪಡಿಸುತ್ತಾರೆ: ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಸಹನಾ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ನಾರಾಯಣ ಅಯ್ಯಂಗಾರ್, ಗೋಟುವಾದ್ಯ ವಾದನ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ, 10.30–ಸವಿನೆನಪು.

- **ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ:** ಜಶ್ನ್ ಈದ್ ಮಿಲಾದ್ –ಉನ್ –ನಬಿ (ಎಸ್‌ಎಎಸ್) ಆಚರಣೆ ಹಾಗೂ ಬಡ ವಿಧವೆಯರಿಗೆ ಉಚಿತ ಹೊಲಿಗೆ ಯಂತ್ರಗಳ ವಿತರಣೆ, ಸ್ಥಳ: ಜಿಲ್ಲಾ ವಕ್ಫ್ ಬೋರ್ಡ್ ಕಚೇರಿ ಬಳಿಯ ಮಸೀದಿ ಸವಾರ್ ಲೈನ್ ಮೈದಾನ, ಬಿರಿಯಾನಿ ಪ್ಯಾರಡೈಸ್ ಹೋಟೆಲ್ ಪಕ್ಕ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 10ರಿಂದ.
- **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕ ಸಂಗೀತೋತ್ಸವ, ಬೆಳಗ್ಗೆ 6ರಿಂದ ನಗರ ಸಂಕೀರ್ತನೆ, 8ಕ್ಕೆ ನಕ್ಷತ್ರ ಹೋಮ ಚಳ್ಳಕೆರೆ ಸಹೋದರರಿಂದ. 12.30ಕ್ಕೆ ಪೂರ್ಣಾಹುತಿ. ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

ಮೈಸೂರು ತಾತಯ್ಯನವರ 181ನೇ ಜಯಂತೋತ್ಸವ

ತಾತಯ್ಯನವರು ಸಮಾಜಕ್ಕೆ ಸಹಾಯಹಸ್ತ ನೀಡಿದ ಹೃದಯವಂತರು

ಖ್ಯಾತ ಆಧ್ಯಾತ್ಮಿಕ ಪ್ರವಚನಕಾರ್ತಿ ಡಾ.ವಿ.ಬಿ.ಆರತಿ ಸ್ಮರಣೆ

ಮೈಸೂರು,ಸೆ.7(ಪಿಎಂ)– ಸಮಾಜಕ್ಕೆ ಸಹಾಯಹಸ್ತ ನೀಡಲು ಬೇಕಿರುವುದು ಸೇವಾ ಮನೋಭಾವದ ಒಳ್ಳೆಯ ಹೃದಯವೇ ಹೊರತು, ಹಣ–ಅಧಿಕಾರವಲ್ಲ. ಅಂತಹ ಸದ್ಗುಣ ಹೊಂದಿದ್ದ ತಾತಯ್ಯನವರು ಸಮಾಜಕ್ಕೆ ಸಹಾಯಹಸ್ತ ನೀಡಿದ ಹೃದಯವಂತರು ಎಂದು ಖ್ಯಾತ ಆಧ್ಯಾತ್ಮಿಕ ಪ್ರವಚನಕಾರ್ತಿ ಡಾ.ವಿ.ಬಿ.ಆರತಿ ಸ್ಮರಿಸಿದರು.

ಮೈಸೂರಿನ ಕೆಆರ್ ಮೊಹಲ್ಲಾದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ದಿ ಅನಾಥಾಲಯ ಆವರಣದಲ್ಲಿ ಅನಾಥಾಲಯದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವೃದ್ಧ ಪಿತಾಮಹ ದಯಾಸಾಗರ ಶ್ರೀ ಮಗ್ಗೆ ವೆಂಕಟಕೃಷ್ಣಯ್ಯ (ಮೈಸೂರು ತಾತಯ್ಯ) ಅವರ 181ನೇ ಜಯಂತೋತ್ಸವ ಹಾಗೂ 'ಶ್ರೀ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ' ಮತ್ತು 'ತಾತಯ್ಯ ಶ್ರೀ–ಫಲಾನುಭವಿ ಸಾಧಕ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಎಲ್ಲಾ ಜೀವಿಗಳ ಹಿತಬಯಸುವವನೇ ನಿಜ ಭಕ್ತನೆಂದು ಉಲ್ಲೇಖಿಸಿದ್ದು, ಅಂತೆಯೇ ಸಮಾಜಕ್ಕೆ ಸಹಾಯಹಸ್ತ ಚಾಚಿದ ತಾತಯ್ಯ (ಎಂ.ವೆಂಕಟಕೃಷ್ಣಯ್ಯ) ಇದಕ್ಕೆ ಸೂಕ್ತ ನಿದರ್ಶನ. ನಾನು ಚಿಕ್ಕವಳಿದ್ದಾಗಲೇ ತಾತಯ್ಯವರ ಬಗ್ಗೆ ನನ್ನ ತಂದೆಯವರು ಪರಿಚಯಿಸಿ, ಅವರ ಕೊಡುಗೆ ಬಗ್ಗೆ ಹೇಳಿದ್ದರು. ಜೊತೆಗೆ ತಾತಯ್ಯನವರು ನಮ್ಮ ನೆಂಟರೆಂದು ಸಹ ಹೇಳಿದ್ದರು. ಸಮಾಜಮುಖಿ ಚಿಂತನೆ ಹೊಂದಿದ್ದ ತಾತಯ್ಯನವರ ಕುಟುಂಬಕ್ಕೆ ನಾನು ಸೇರಿದ್ದೇನೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ ಎಂದು ತಿಳಿಸಿದರು.

ತಾತಯ್ಯನವರಿಗೆ ಸಮಾಜ ಸೇವೆಯ ತುಡಿತವಿತ್ತು ನಾವು ಬಹುತೇಕರು ಸಮಾಜಕ್ಕೆ ಸ್ಪಂದಿಸಲು ಹಣ, ಅಧಿಕಾರ ಬೇಕೆನ್ನುತ್ತೇವೆ. ಆದರೆ, ನಿಜಕ್ಕೂ ಬೇಕಿರುವುದು ಒಳ್ಳೆಯ ಹೃದಯ. ಅಂತಹ ಹೃದಯವನ್ನು ತಾತಯ್ಯ ಹೊಂದಿದ್ದರು. ಅವರೇನು ದೊಡ್ಡ ಆಸ್ತಿವಂತರಲ್ಲ. ಆದರೂ ಸಮಾಜಕ್ಕೆ ಕೊಡುಗೆ ನೀಡಲು ಶ್ರಮಿಸಿದರು. ಸರ್.ಎಂ.ವಿಶ್ವೇಶ್ವರಯ್ಯನವರೂ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಾವು ಕುಡಿಯುವ ನೀರು, ಅನುಭವಿಸುತ್ತಿರುವ ವಿದ್ಯುತ್ ಸೌಲಭ್ಯದ ಹಿಂದೆ ಸರ್‌ಎಂವಿ ಕೊಡುಗೆ ಅಪಾರ. ಅಂತಹ ಮಹನೀಯರ ಋಣ ನಮ್ಮ ಮೇಲಿದೆ ಎಂದು ಸ್ಮರಿಸಿದರು.

ಮೆಕಾಲೆ ಶಿಕ್ಷಣದಿಂದ ಸಂಸ್ಕಾರ ಬರೋಲ್ಲ

ತಂದೆ ತಾಯಿಯಿಂದ ಮಕ್ಕಳಿಗೆ ಬರಬೇಕಿರುವುದು ಕೇವಲ ಆಸ್ತಿಯಲ್ಲ, ಸಂಸ್ಕಾರ. ಅಂತಹ ಸಂಸ್ಕಾರವನ್ನು ಅನಾಥಾಲಯ ನೀಡುತ್ತಿದೆ. ಸಂಸ್ಕಾರವು ಮೆಕಾಲೆ ಶಿಕ್ಷಣ ಪದ್ಧತಿಯ ಶಾಲೆ ಹಾಗೂ ಮಿಷನರಿ ಸ್ಕೂಲ್‌ಗಳಲ್ಲಿ ಓದುವವರಿಗೆ ಬರುವುದಿಲ್ಲ.



ಮೈಸೂರಿನ ಅನಾಥಾಲಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಾತಯ್ಯ ಅವರ 181ನೇ ಜಯಂತೋತ್ಸವದಲ್ಲಿ 'ಶ್ರೀ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ' ಮತ್ತು 'ತಾತಯ್ಯ ಶ್ರೀ–ಫಲಾನುಭವಿ ಸಾಧಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಅಲ್ಲದೆ, ಅತಿಥಿಗಳನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಅನಾಥಾಲಯದ ಪದಾಧಿಕಾರಿಗಳು ಹಾಗೂ ಸದಸ್ಯರನ್ನೂ ಕಾಣಬಹುದು.

ತಾತಯ್ಯನವರು ಸಮಾಜದ ದೋಷಗಳನ್ನು ತಿದ್ದಿದರು. ಆದರೆ ಅವರೆಂದೂ ಶಾಪ ಹಾಕಿಕೊಂಡು ತಿರುಗಲಿಲ್ಲ. ನೀವು ಸರಿಯಿಲ್ಲ, ನೀವು ಜಾತಿವಾದಿಗಳು ಎಂದು ಬಾಯಿಗೆ ಬಂದಂತೆ ಮಾತನಾಡುವುದಲ್ಲ. ಸಮಾಜ ಸುಧಾರಣೆಗೆ ಪ್ರೀತಿ, ದಯೆ ಇರಬೇಕು. ಆ ಸದ್ಗುಣಗಳು ನಮ್ಮ ತಾತಯ್ಯನವರಲ್ಲಿತ್ತು ಹಾಗಾಗಿ ಇಲ್ಲಿ ಬಂದ ವಿದ್ಯಾರ್ಥಿಗಳಿಗೆ ವಿದ್ಯೆಯೊಂದಿಗೆ ಸಂಸ್ಕಾರ ಕೊಟ್ಟರು ಎಂದರು.

ರಾಹುಲ್ ಗಾಂಧಿ ಕುರಿತು ವ್ಯಂಗ್ಯ: ಹಸಿದು ಕಷ್ಟಪಟ್ಟವರಿಗೆ ಜೀವನದ ಬೆಲೆ ಗೊತ್ತಾಗುತ್ತದೆ. ಹಾಗಾಗಿ ಅನಾಥಾಲಯದಲ್ಲಿ ಇದ್ದು ವಿದ್ಯೆ ಕಲಿಯಬೇಕು. ಇಂದು ನಮ್ಮ ಮಕ್ಕಳಿಗೆ ಸಮಸ್ಯೆಗಳು ತಿಳಿಯದಾಗಿದೆ. ಕಾರಣ ಎಲ್ಲವೂ ಸುಲಭವಾಗಿ ದೊರಕುವಂತಾಗಿದೆ. ಆದರೆ ಕಷ್ಟ ಗೊತ್ತಾಗಬೇಕು. ಕಷ್ಟಪಟ್ಟು ಹಂತ ಹಂತವಾಗಿ ಬೆಳೆಯಬೇಕು. ಜೀವನದಲ್ಲಿ ಎಲ್ಲವೂ ಸುಲಭವಾಗಿ ದೊರಕಿದರೆ, ಸಮಸ್ಯೆಗಳು ಶುರುವಾಗುತ್ತವೆ ಆಗ ರಾಹುಲ್ ಗಾಂಧಿ ರೀತಿಯಲ್ಲಿ ಆಗಿಬಿಡುತ್ತೇವೆ ಎಂದು ವ್ಯಂಗ್ಯವಾಡಿದರು.

ಉದ್ಯಮಿಯಿಂದ ಸೇವೆ ಕುರಿತು ದೊಡ್ಡ ಸುಳ್ಳು: ತಾತಯ್ಯನವರನ್ನು ರಾಜ ಮಹಾರಾಜರು ಗೌರವಿಸುತ್ತಿದ್ದರು. ಆದರೂ ಅವರು ಮೆರೆಯಲಿಲ್ಲ. ಬರುವುದೆಲ್ಲವನ್ನೂ ಮತ್ತೆ ಸಮಾಜಕ್ಕೆ ವಿನಿಯೋಗಿಸಿದರು. ನಮ್ಮ ಋಷಿಗಳು ಸರ್ವಸ್ವವನ್ನೇ ಸಮಾಜಕ್ಕೆ ಕೊಟ್ಟವರು. ಭಾರತದಲ್ಲಿ ಅಂತಹ ಪರಂಪರೆ ಇದೆ. ನಮ್ಮ ದೇಶದ ದೊಡ್ಡ ಉದ್ಯಮಿಯೊಬ್ಬರು 'ನಮ್ಮ ಭಾರತೀಯರಿಗೆ ಸೇವಾ ಮನೋಭಾವದ ಪ್ರಜ್ಞೆಯೇ ಇಲ್ಲ, ಅದು ಕ್ರಿಶ್ಚಿಯನ್ ಮಿಷನರಿಗಳಿಂದ ಬಂದಿದೆ' ಎಂದು ಸಂದರ್ಶನವೊಂದರಲ್ಲಿ ಕೆಲ ವರ್ಷಗಳ ಹಿಂದೆ ಹೇಳಿದರು. ಇದಕ್ಕಿಂತ ದೊಡ್ಡ ಸುಳ್ಳು ಬೇರೆಯಿಲ್ಲ. ಸದರಿ ಉದ್ಯಮಿಯವರಿಂದ ಸಮಾಜಕ್ಕೆ ಸಾಕಷ್ಟು ಕೊಡುಗೆ ಸಿಕ್ಕಿದೆ. ಆದರೆ ಅವರ ಈ ಮಾತು ಒಪ್ಪಲು ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾತಯ್ಯರ ಬಗ್ಗೆ ಪಠ್ಯಪುಸ್ತಕದಲ್ಲಿ ಇಲ್ಲದ ಬಗ್ಗೆ ಬೇಸರ: ಸಮಾಜಕ್ಕೆ ಸಹಾಯಹಸ್ತ ನೀಡಿದ ತಾತಯ್ಯನವರ ಬಗ್ಗೆ ಯಾವ ಪಠ್ಯ ಪುಸ್ತಕದಲ್ಲಿಯೂ ಇಲ್ಲ. ಆದರೆ ಮತಾಂತರಕ್ಕಾಗಿ ಯಾವುದೋ ಮಹಿಳೆ ಮಾಡಿದಂತಹ ಸೇವೆಯ ನಾಟಕದ ಬಗ್ಗೆ ಅಷ್ಟೊಂದು ಹೇಳುತ್ತೇವೆ. ಆದರೆ ಯಾವುದೇ ಫಲಾಪೇಕ್ಷೆ ಇಲ್ಲದೇ ಅಷ್ಟೊಂದು ಸೇವೆ ನೀಡಿದ ತಾತಯ್ಯನವರಿಗೆ ಬಗ್ಗೆಯೇ ಮಾತನಾಡುವುದಿಲ್ಲ. ಆದರೆ ನಾನು ನನ್ನ ದೇಶದ ಮಹನೀಯರ ಕೊಡುಗೆ ಬಗ್ಗೆ ಸಾರಿ ಹೇಳುತ್ತೇನೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಸಮಾಜಕ್ಕೆ ನೀಡಿರುವ ಸೇವೆಯನ್ನು ಪರಿಗಣಿಸಿ ಉಷಾಕಿರಣ್ ಕಣ್ಣಿನ ಆಸ್ಪತ್ರೆ–ಉಷಾಕಿರಣ್ ಚಾರಿಟಬಲ್ ಟ್ರಸ್ಟ್ ಪ್ರತಿನಿಧಿಗಳಾದ ಡಾ.ಉಷಾ ರವಿಶಂಕರ್, ಡಾ.ಕೆ.ವಿ.ರವಿಶಂಕರ್ ದಂಪತಿಗೆ 'ಶ್ರೀ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ', ಸಂಸ್ಕೃತ ವಿದ್ವಾಂಸ ಟಿ.ವಿ.ಸತ್ಯನಾರಾಯಣ ಅವರಿಗೆ 'ತಾತಯ್ಯ ಶ್ರೀ–ಫಲಾನುಭವಿ ಸಾಧಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಹಿರಿಯ ವಕೀಲ ಎ.ಎಸ್.ನಟರಾಜ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಅನಾಥಾಲಯದ ಅಧ್ಯಕ್ಷರೂ ಆದ ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಧ್ಯಕ್ಷತೆ ವಹಿಸಿದ್ದರು. ಅನಾಥಾಲಯ ಉಪಾಧ್ಯಕ್ಷ ಎನ್.ವಿ.ದಿನೇಶ್, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ ಮತ್ತಿತರರು ಹಾಜರಿದ್ದರು.

> ನೇತ್ರತಜ್ಞನಾಗಿ ವೃತ್ತಿ ಬದುಕಿನಲ್ಲಿ ಬಡರೋಗಿಗಳ ಚಿಕಿತ್ಸೆಗೆ ನೆರವಾಗಲು ನಮಗೆ ಅನೇಕ ದಾನಿಗಳು ಕೈಜೋಡಿಸಿದ್ದಾರೆ. ಮೂರು ದಶಕಗಳ ಸೇವೆಯು ತೃಪ್ತಿ ಸಿಕ್ಕಿದೆ. ಸೇವಾ ಮನೋಭಾವ ನನ್ನಲ್ಲಿ ಬೆಳೆಯಲು ನನ್ನ ಗುರುಗಳಾದ ಡಾ.ಎಸ್.ಎಸ್.ಬದರಿನಾಥ್ ಅವರು ಕಾರಣ. ಅವರನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳುತ್ತೇನೆ.
> -ಡಾ.ರವಿಶಂಕರ್

> 1976ರಿಂದ 80ರವರೆಗೆ ಅನಾಥಾಲಯದಲ್ಲಿ ಆಶ್ರಯ ಪಡೆದಿದ್ದೆ. ಇಲ್ಲಿ ಅನ್ನದಾನ, ಸಂಸ್ಕೃತಪಾಠ ಶಾಲೆಯಲ್ಲಿ ವಿದ್ಯ ದಾನ ಪಡೆದು ಈ ಒಂದು ಹಂತಕ್ಕೆ ಬಂದಿದ್ದೇನೆ. ತಾತಯ್ಯನವರ ಅನಾಥಾಲಯಕ್ಕೆ ನಾನು ಸದಾ ಚಿರಋಣಿ.
> -ಟಿ.ವಿ.ಸತ್ಯನಾರಾಯಣ

ಇಂದು 'ಕರ್ವಾಲೋ 50' ಕಾರ್ಯಕ್ರಮ

ಮೈಸೂರು, ಸೆ.7– ಮೈಸೂರಿನ ಅಭಿರುಚಿ ಪ್ರಕಾಶನ, ಪುಸ್ತಕ ಪ್ರಕಾಶನ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಮಾನವ ಮಂಟಪ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಲಿತ ಸಂಘರ್ಷ ಸಮಿತಿ, ನಿರಂತರ ಫೌಂಡೇಷನ್ ಸಹಯೋಗದಲ್ಲಿ 'ಕರ್ವಾಲೋ 50' ತೇಜಸ್ವಿ ಮತ್ತು ಪರಿಸರ ಕಾರ್ಯಕ್ರಮವನ್ನು ಮೈಸೂರಿನ ಕಿರುರಂಗಮಂದಿರದಲ್ಲಿ ಸೋಮವಾರ(ಸೆ.8) ಬೆಳಗ್ಗೆ 10ಕ್ಕೆ ಏರ್ಪಡಿಸಲಾಗಿದೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನದ ನಂತರ ವಿಮರ್ಶಕ ಹಾಗೂ ಬರಹಗಾರ ಶಿವಮೊಗ್ಗದ ಪ್ರೊ.ರಾಜೇಂದ್ರ ಚೆನ್ನಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಂತರ ವಿವಿಧ ಕ್ಷೇತ್ರದ ಸಾಧಕರು ಸೇರಿ 12 ಮಂದಿ ತೇಜಸ್ವಿ ಅವರನ್ನು ಕುರಿತು ಮಾತನಾಡಲಿದ್ದಾರೆ. ಸಂಜೆ 6ಕ್ಕೆ ನಟರಾಜ್ ಹೊನ್ನವಳ್ಳಿ ಅವರು ರಂಗರೂಪಕ್ಕಿಳಿಸಿರುವ ತೇಜಸ್ವಿ ಅವರ 'ಜುಗಾರಿ ಕ್ರಾಸ್' ನಾಟಕ ಪ್ರದರ್ಶನವಾಗಲಿದೆ. 'ಕರ್ವಾಲೋ' ಕೃತಿಗೆ 50 ವರ್ಷಗಳ ಸಂಭ್ರಮ ಹಾಗೂ ಸೆ.8 ತೇಜಸ್ವಿ ಅವರ ಹುಟ್ಟಿದ ದಿನವಾಗಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಒಳ ಮೀಸಲಾತಿ ಸಂಬಂಧ ಸರ್ಕಾರದ ಆದೇಶ ಮಾದಿಗರ ಪಾಲಿಗೆ ಮರಣ ಶಾಸನ

ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಪ್ರತಿಪಾದನೆ



ಮೈಸೂರು, ಸೆ.7– ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿಯೊಳಗಿನ ಒಳ ಮೀಸಲಾತಿ ಸಂಬಂಧಿಸಿದಂತೆ ಮಾಡಿದ ಆದೇಶ ಮಾದಿಗರ ಪಾಲಿಗೆ ಮರಣ ಶಾಸನ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್ ಅರುಣ್‌ಕುಮಾರ್ ಪ್ರತಿಪಾದಿಸಿದರು

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಭಾನುವಾರ ನಡೆದ ದುಂಡು ಮೇಜಿನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ನ್ಯಾ ಹೆಚ್.ಎನ್ ನಾಗಮೋಹನ್ ದಾಸ್ ಕಮಿಷನ್ ರಚನೆಯಾದ ಮೂಲ ಉದ್ದೇಶ ಪರಿಶಿಷ್ಟ ಜಾತಿಯೊಳಗಿನ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರದಲ್ಲಿ ಸೇರಿರುವ ಮಾದಿಗ ಮತ್ತು ಹೊಲಯ ಸಂಬಂಧಿತ ಜಾತಿಯವರನ್ನು ಬೇರ್ಪಡಿಸುವುದೇ ಆಗಿತ್ತು ಎಂದು ಆರೋಪಿಸಿದರು.

ನ್ಯಾ. ಹೆಚ್.ಎನ್.ನಾಗಮೋಹನ್ ದಾಸ್ ಆಯೋಗವು ತನ್ನ ವರದಿಯಲ್ಲಿ ಅಲೆಮಾರಿಗಳಿಗೆ 1%, ಮಾದಿಗ ಸಂಬಂಧಿತ ಜಾತಿಗಳಿಗೆ 6%, ಹೊಲಯ ಸಂಬಂಧಿತ ಜಾತಿಗಳಿಗೆ 5% ಬೋವಿ ಮತ್ತು ಲಂಬಾಣಿ ಸಂಬಂಧಿತ ಜಾತಿಗಳಿಗೆ 4% ಮತ್ತು Ak, AD, AA 1% ರಂತೆ 5 ಗುಂಪುಗಳಲ್ಲಿ ಮೀಸಲಾತಿಯ 17% ಅನ್ನು ವಿಂಗಡಿಸಿ ತನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ನೀಡಿತ್ತು. ಆದರೆ ಸರ್ಕಾರವು ತನ್ನ ಇಚ್ಛಾನುಸಾರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಜಸ್ಟೀಸ್ ನಾಗಮೋಹನ್‌ದಾಸ್ ಅವರ ಶಿಫಾರಸನ್ನು ಧಿಕ್ಕರಿಸಿ ತನ್ನ ವೋಟ್ ಬ್ಯಾಂಕ್ ಓಲೈಕೆಗಾಗಿ ಅಸಂವಿಧಾನ ಗುಂಪುಗಳನ್ನು ರಚನೆ ಮಾಡಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ 6% ಹೊಲೆಯ ಮತ್ತು ಸಂಬಂಧಿತ ಜಾತಿಗಳಿಗೆ 6%ಮತ್ತು ವರ್ಮಾ ಕೊಚರ್ಾ ಬೋವಿ ಲಂಬಾಣಿಗಳ ಗುಂಪಿಗೆ ಅಲೆಮಾರಿಗಳನ್ನು ಸೇರಿಸಿ 5%ಕಾನೂನು ಬಾಹಿರವಾಗಿ ವಿಂಗಡಿಸಿ ಆದೇಶ ಮಾಡಿದೆ.

ಸರ್ಕಾರ ತನ್ನ ಆದೇಶದಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆಂಧ್ರದಲ್ಲಿರುವ ಹೊಲಯರಿಗೂ ಕೂಡ ಮಾದಿಗ ಗುಂಪಿನಲ್ಲೂ ಅನುಕೂಲವಾಗಿರುತ್ತದೆ. ಇದು ಮಾದಿಗರು ಮಾದಿಗ ಸಂಬಂಧಿತ ಜಾತಿಗಳಿಗೆ ಮರಣ ಶಾಸನ ಬರೆದಂತಾಗಿದೆ. ಈ ಆದೇಶದಿಂದ ಹೊಲೆಯ ಸಮಾಜಕ್ಕೆ 12% ಕೊಟ್ಟಂತಾಗಿದೆ. ಏಕೆಂದರೆ ಹೊಲೆಯರು ಮತ್ತು ಮಾದಿಗರು ಒಂದೇ ಗುಂಪಿನಲ್ಲಿದ್ದಾಗ ಹೊಲಯ ಸಮಾಜದವರು ಸರ್ಕಾರದ ಸವಲತ್ತುಗಳನ್ನು ಸುಮಾರು 90 ರಿಂದ 95% ತಮ್ಮದಾಗಿಸಿಕೊಂಡಿರುತ್ತಾರೆ. ಸರ್ಕಾರವು ತಕ್ಷಣ ಎಕೆ, ಎಡಿ ಗುಂಪನ್ನು ಬೇರ್ಪಡಿಸಿ ಒಂದು ಪರ್ಸೆಂಟ್ ಅವರಿಗೆ ನೀಡಿ ಅನಿವಾರ್ಯ ಪರಿಸ್ಥಿತಿ ಆದರೆ ಮಾದಿಗರಿಗೆ 5.5% ಒಲೆಯರಿಗೆ 5.5% ಮಾಡಿ ಮುಂದೆ ಆಗುವ ಹೊಸ ಸಮೀಕ್ಷೆಗಳ ದತ್ತಾಂಶಗಳನ್ನು ಆಧರಿಸಿ ಮೀಸಲಾತಿಯನ್ನು ತಿದ್ದುಪಡಿ ಮಾಡಬಹುದು. ಮಾಡದಿದ್ದರೆ, ಹಿಂದೆ ಹೇಳಿದಾಗೆ ಈ ಸರ್ಕಾರದ ಆದೇಶ ಮಾದಿಗರ ಪಾಲಿಗೆ ಮರಣ ಶಾಸನ ಎಂದು ನುಡಿದರು

ವೇದಿಕೆಯ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಧಾರವಾಡದ ಹಿರಿಯ ವಕೀಲರದಂತ ಚಿಕ್ಕಣ್ಣ, ಎಂ.ಶಿವಕುಮಾರ್ ಬೆಳ್ತಿ, ಎಂ ದಾಸಯ್ಯ, ಮಾಳಪ್ಪ ಕುರ್ಕಿ, ಎಂ.ಆರ್.ಸುರೇಂದ್ರ ಕುಮಾರ್, ಎಸ್.ರಾಜು, ಮಲ್ಲರಾಜ, ಸಿದ್ದಯ್ಯ, ಪುಟ್ಟರಾಜ, ಶಿವಣ್ಣ, ನಾಗಮ್ಮ, ಅರ್ಪಿತ, ಧನಲಕ್ಷ್ಮಿ, ಪ್ರವೀಣ್‌ಕುಮಾರ್, ರಂಗರಾಜ್, ಪುಟ್ಟರಾಜು, ನಟರಾಜು, ಸೇರಿದಂತೆ ಸುಮಾರು 60ಕ್ಕೂ ಹೆಚ್ಚು ವಕೀಲರು ಭಾಗವಹಿಸಿದ್ದರು.

ಒಳಮೀಸಲಾತಿ ಹಂಚಿಕೆ ವಿರುದ್ಧ ನ್ಯಾಯಾಲಯದ ಮೊರೆ

ಬಲಗೈ ಸಮುದಾಯದ ದುಂಡು ಮೇಜಿನ ಸಭೆಯಲ್ಲಿ ನಿರ್ಣಯ



ಮೈಸೂರು, ಸೆ.7– ಒಳ ಮೀಸಲಾತಿ ಅನುಷ್ಠಾನದಿಂದ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯದ ಕುರಿತು ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸುವುದು ಸೇರಿದಂತೆ 9 ನಿರ್ಣಯಗಳನ್ನು ಬಲಗೈ ಸಮುದಾಯದ ದುಂಡು ಮೇಜಿನ ಸಭೆಯಲ್ಲಿ ಕೈಗೊಳ್ಳಲಾಗಿದೆ

ಮೈಸೂರಿನ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮತ್ತು ಜೈ ಭೀಮ್ ಸಾಮಾಜಿಕ ಪರಿವರ್ತನ ವೇದಿಕೆ ಸಹಯೋಗದಲ್ಲಿ ಭಾನುವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ಈ ಮೇಲಿನ ನಿರ್ಣಯವನ್ನು ಒಕ್ಕೊರಲಿನಿಂದ ಕೈಗೊಳ್ಳಲಾಯಿತು. ಸಭೆಯಲ್ಲಿ ನಡೆದ ಚರ್ಚೆಯ ನಂತರ ಸಂವಿಧಾನ ಸಂರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ನಿರ್ಣಯಗಳನ್ನು ಮಂಡಿಸಿದರು. ಒಳ ಮೀಸಲಾತಿ ಪ್ರಕ್ರಿಯೆಯಲ್ಲಿ ಬಲಗೈ ಸಮುದಾಯವನ್ನು ಪ್ರವರ್ಗ 'ಬಿ'ಗೆ ಸೇರಿಸಲಾಗಿದೆ. ಇದರಿಂದ ನೇಮಕಾತಿ ಪ್ರಕ್ರಿಯೆಯಲ್ಲಿ ಸಮುದಾಯ ಅವಕಾಶ ವಂಚಿತವಾಗಲಿದೆ. ಹೀಗಾಗಿ ಒಳ ಮೀಸಲಾತಿ ಅನುಷ್ಠಾನದಲ್ಲಿ ಸಮುದಾಯಕ್ಕಾಗಿರುವ ಅನ್ಯಾಯದ ವಿರುದ್ಧ ಹೈಕೋರ್ಟ್‌ಗೆ ಮಧ್ಯಂತರ ದಾವೆ ಹೂಡಲಾಗುವುದು ಎಂದು ಹೇಳಿದರು.

2026–27ನೇ ಸಾಲಿನಲ್ಲಿ ನಡೆಯುವ ಜಾತಿಗಣತಿ ಸಮೀಕ್ಷೆಯಲ್ಲಿ ಬಲಗೈ ಸಮುದಾಯವು ಒಂದೇ ಜಾತಿ ಸೂಚಕ ಪದ ಬಳಸುವಂತೆ ಜಾಗೃತಿ ಮೂಡಿಸಲಾಗುವುದು. ಜನಸಂಖ್ಯೆ ಆಧಾರದ ಮೇಲೆ ನಿಗಮ–ಮಂಡಳಿಗಳಿಗೆ ಅನುದಾನ ನೀಡಬೇಕು. ಹಿಂದುಳಿದ ವರ್ಗದ ಶಾಶ್ವತ ಆಯೋಗವು ನಡೆಸುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬಲಗೈ ಸಮುದಾಯಗಳ ಸಮೀಕ್ಷೆ ನಡೆಸಲು ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ರಾಜ್ಯ ಸಮಿತಿಯನ್ನು ರಚಿಸಿ ರಾಜ್ಯಾದ್ಯಂತ ಕಾರ್ಯೋನ್ಮುಖರಾಗಬೇಕು.

ಬೆಂಗಳೂರು ನಗರ ಜಿಲ್ಲೆ ಹಾಗೂ ಮಹಾನಗರ ಪಾಲಿಕೆ ಪ್ರದೇಶದಲ್ಲಿ ಸಮರ್ಪಕ ಸಮೀಕ್ಷೆ ನಡೆಸಲು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆಯವರನ್ನು ಒಳಗೊಂಡ ಸಮಿತಿ ನೇತೃತ್ವದಲ್ಲಿ ಕಾರ್ಯಪ್ರವೃತ್ತವಾಗಬೇಕು ಎಂದರು.

ಲೇಖಕ ಮಹೇಶ್ ಇರಸವಾಡಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಒಳಮೀಸಲಾತಿ ಜಾಗೃತಿ ವೇದಿಕೆಯ ಸಂಚಾಲಕ ನವೀನ್ ಮನಿಯ, ಲೇಖಕ ಸಿ.ಹರಕುಮಾರ್, ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಧ್ಯಾಪಕ ಚಂದ್ರಶೇಖರ್ ಐಜೂರು, ದಲಿತ ನವ ನಿರ್ಮಾಣ ವೇದಿಕೆಯ ಅಧ್ಯಕ್ಷ ಹರಿಹರ ಆನಂದಸ್ವಾಮಿ, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಚಂದ್ರಶೇಖರ್, ಮಾಜಿ ಉಪಾಧ್ಯಕ್ಷ ಪುಟ್ಟಸ್ವಾಮಿ, ಮಾಜಿ ಕಾರ್ಯದರ್ಶಿ ಉಮೇಶ್, ಡಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಆರ್.ಕಾಂತರಾಜು, ನೆಲೆ ಹಿನ್ನೆಲೆ ಗೋಪಾಲ್, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ರಾಜ್ಯ ಉಪಾಧ್ಯಕ್ಷ ಪುಟ್ಟರಸ, ನಗರಪಾಲಿಕೆ ಮಾಜಿ ಸದಸ್ಯರಾದ ಸಿದ್ದಪ್ಪ, ಪಲ್ಲವಿ ಬೇಗಂ, ಡಾ.ಅಶ್ವಿನ್ ಶರತ್, ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಶರತ್, ಕಾಂಗ್ರೆಸ್ ಮುಖಂಡ ಈಶ್ವರ್ ಚಕ್ಕಡಿ, ಪ್ರದೀಪ್ ಚಂದ್ರು, ಸುರೇಶ್ ಬಾಬು, ಮಧುಸೂದನ್, ಮಹದೇವ್, ಗಂಗಾಧರಯ್ಯ, ಹಿರಿಯ ವಕೀಲ ಮಹದೇವಯ್ಯ, ಕೆಂಪದೇವಯ್ಯ, ಮಹೇಶ್, ಪ್ರಭು, ಮಂಜು ಸಭೆಯಲ್ಲಿ ಹಾಜರಿದ್ದರು.

> 2026–27 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಜಾತಿ ಗಣತಿ ಮಾಡುವಾಗ ಬಲಗೈ ಸಮುದಾಯದವು ಒಂದೇ ಜಾತಿ ಸೂಚಕ ಪದ ಬಳಕೆ ಮಾಡಬೇಕು ಹಾಗೂ ಜನಸಂಖ್ಯೆ ಆದರದ ಮೇಲೆ ನಿಗಮ ಮಂಡಳಿ ಗಳಲ್ಲಿ ಆದ್ಯತೆ ನೀಡಬೇಕು.
> -ಎನ್.ಭಾಸ್ಕರ್

ಮೈಸೂರಲ್ಲಿ ಪರಿಸರ ಸಂರಕ್ಷಣಾ ಕಾನೂನುಗಳ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ

ಎಂಜಿಪಿ ನಿಯೋಗದಿಂದ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಕೆ



ಎಂಜಿಪಿ ನಿಯೋಗದಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು,ಸೆ.7(ಪಿಎಂ)– ಪರಿಸರ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಮೂಲಕ ಮೈಸೂರು ನಗರದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವಂತೆ ಕೋರಿ ಮೈಸೂರು ಗ್ರಾಹಕರ ಪರಿಷತ್ತು (ಎಂಜಿಪಿ) ನಿಯೋಗದ ವತಿಯಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರೂ ಆದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಯಿತು.

ಎಂಜಿಪಿ ಸ್ಥಾಪಕ ಕಾರ್ಯಾಧ್ಯಕ್ಷ ಡಾ.ಭಾಮಿ ವಿ.ಶೆಣೈ ನೇತೃತ್ವದಲ್ಲಿ ಎಂಜಿಪಿ ಸದಸ್ಯರು ಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿ, ನಗರದ ಕುಕ್ಕರಹಳ್ಳಿ ಕೆರೆ, ಲಿಂಗಬುಧಿ ಕೆರೆ ಹಾಗೂ ಹೆಬ್ಬಾಳ ಕೆರೆಗಳು ಮಾಲಿನ್ಯಗೊಳ್ಳದಂತೆ ನೋಡಿಕೊಳ್ಳುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ದೂರಿದರು.

ಮೈಸೂರು ನಗರದಲ್ಲಿ ದಿನನಿತ್ಯ ಹೆಚ್ಚುತ್ತಿರುವ ವಾಯು ಮಾಲಿನ್ಯದ ಪೂರ್ಣ ಮಾಹಿತಿಯನ್ನು ಭಾಮಿ ಶೆಣೈ ಮಂಡಳಿ ಅಧ್ಯಕ್ಷರಿಗೆ ತಿಳಿಸಿದರು. ಕಾರ್ಖಾನೆಗಳು ಹಾಗೂ ವಾಹನಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯ ತಡೆಗಟ್ಟಬೇಕು. ನಗರದಲ್ಲಿರುವ ಎಲ್ಲಾ ಕೆರೆಗಳನ್ನು ಮಾಲಿನ್ಯ ಮುಕ್ತಗೊಳಿಸಬೇಕು ಎಂದೂ ಕೋರಿದರು.

ಒಂದು ತಾಸು ಎಲ್ಲವನ್ನು ಆಲಿಸಿದ ಮಂಡಳಿ ಅಧ್ಯಕ್ಷರು, ಶೀಘ್ರದಲ್ಲೇ ಅಧಿಕಾರಿಗಳ ತಂಡದೊಂದಿಗೆ ಮೈಸೂರಿನಲ್ಲಿ ಸಭೆ ನಡೆಸುತ್ತೇನೆ. ಜೊತೆಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮೈಸೂರು ನಗರದಲ್ಲಿ ಮಾಲಿನ್ಯ ನಿಯಂತ್ರಿಸಿ, ಪರಿಸರ ಸಂರಕ್ಷಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇನೆ ಎಂದು ಎಂಜಿಪಿ ನಿಯೋಗಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದರು.

ಇದೇ ವೇಳೆ ಲಿಖಿತ ದಾಖಲೆಯ 7 ಪುಟಗಳ ವರದಿಯನ್ನೂ ಮಂಡಳಿ ಅಧ್ಯಕ್ಷರಿಗೆ ಸಲ್ಲಿಸಲಾಯಿತು. ಎಂಜಿಪಿ ಕಾರ್ಯಾಧ್ಯಕ್ಷರಾದಶೋಭಾನ, ಸಂಚಾಲಕ ಡಿ.ವಿ.ದಯಾನಂದ್ ಸಾಗರ್, ಖಜಾಂಚಿ ಎಸ್.ಶಂಕರ್, ಸದಸ್ಯೆ ಸುಮಶೆಣೈ, ನಿವೃತ್ತ ಅಧಿಕಾರಿ ಪ್ರಕಾಶ್ ಹಾಜರಿದ್ದರು.

ಪೂರ್ಣಚಂದ್ರ ಗ್ರಹಣ



ಮೈಸೂರಿನಲ್ಲೂ ಪೂರ್ಣಚಂದ್ರ ಗ್ರಹಣ ಸ್ಪಷ್ಟವಾಗಿ ಗೋಚರಿಸಿತು. ಹಲವರು ಚಂದ್ರಗ್ರಹಣದ ಸೊಬಗು ಕಣ್ತುಂಬಿಕೊಂಡರೆ, ಕೆಲವರು ಟೆಲಿಸ್ಕೋಪ್ ಮೂಲಕ ವೀಕ್ಷಿಸಿದರು.

ಚಿತ್ರ– ಲಕ್ಷ್ಮೀ ನಾರಾಯಣ ಯಾದವ್

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಎರಡನೇ ಚುನಾವಣೆಯಿಂದಲೇ ಮತಗಳ್ಳತನ ಆರಂಭವಾಗಿದೆ

ಹಿರಿಯ ಬರಹಗಾರ ಶಿವಸುಂದರ್ ಅಭಿಪ್ರಾಯ



'ಮತಗಳ್ಳತನ ಮತ್ತು ಪ್ರಜಾಪ್ರಭುತ್ವದ ಸವಾಲುಗಳು' ವಿಚಾರ ಸಂಕಿರಣವನ್ನು ಹಿರಿಯ ಬರಹಗಾರ ಶಿವಸುಂದರ್ ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಮೈಸೂರು, ಸೆ.7(ಎಸ್‌ಪಿಎನ್)– ದೇಶದಲ್ಲಿ ಈಗ ಮತಗಳ್ಳತನದ್ದೆ ಚರ್ಚೆ ಆರಂಭವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಎರಡನೇ ಚುನಾವಣೆಯಿಂದಲೇ ಮತಗಳ್ಳತನ ಆರಂಭವಾಗಿದೆ ಎಂದು ಹಿರಿಯ ಬರಹಗಾರ ಶಿವಸುಂದರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ಸಭಾಂಗಣದಲ್ಲಿ ಪೀಪಲ್ಸ್ ಲೀಗಲ್ ಫೋರಂ ಮತ್ತು ಕೆಎಸ್‌ಐಸಿ ಹೊರಗುತ್ತಿಗೆ ಮತ್ತು ಇತರೆ ನೌಕರರ ಸಂಘ ಸಹಯೋಗದೊಂದಿಗೆ ನಡೆದ 'ಮತಗಳ್ಳತನ ಮತ್ತು ಪ್ರಜಾಪ್ರಭುತ್ವದ ಸವಾಲುಗಳು' ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಮೊದಲ ಚುನಾವಣೆ 1951ರಲ್ಲಿ ನಡೆದಾಗ ಅಂದಿನ ಮುಖ್ಯ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರು ಎಲ್ಲಾ ವರ್ಗದವರೂ ಮತದಾನದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಪ್ರಯತ್ನಿಸಿದ್ದರು. ನಂತರ ನಡೆದ ಎರಡನೇ ಚುನಾವಣೆಯಲ್ಲೇ ಮತಗಳ್ಳತನ ಆರಂಭವಾಗುತ್ತದೆ. ಅಂದಿನಿಂದ ಇಂದಿನವರೆಗೂ ಮತಗಳ್ಳತನ ವಿವಿಧ ರೂಪದಲ್ಲಿ ನಡೆಯುತ್ತಿದೆ ಎಂದು ಎಳೆ ಎಳೆಯಾಗಿ ವಿವರಿಸಿದರಲ್ಲದೆ, ಪ್ರಜಾಪ್ರಭುತ್ವ ಉಳಿವಿಗಾಗಿ ಚುನಾವಣಾ ಆಯೋಗದ ನೀತಿ–ನಿಯಮಗಳು ಬದಲಾಗಲೇಬೇಕು. ಈ ಹಿಂದೆ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್.ಶೇಷನ್ ಅವರು ಮಾತ್ರ ಪೂರ್ಣ ಪ್ರಮಾಣದ ಚುನಾವಣಾ ಕಾನೂನುಗಳನ್ನು ಮೊದಲ ಬಾರಿಗೆ ಪ್ರಯೋಗಿಸಿದ್ದಾರೆ ಎಂದರು.

ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥರನ್ನು ಪ್ರಧಾನಮಂತ್ರಿ, ಗೃಹ ಸಚಿವ ಹಾಗೂ ಲೋಕಸಭೆ ಪ್ರತಿಪಕ್ಷದ ನಾಯಕ ನೇತೃತ್ವದಲ್ಲಿ ಆಯ್ಕೆ ಮಾಡುವ ಕಾನೂನನ್ನು 2023ರಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಇದರಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಮೂರ್ತಿಗಳನ್ನೇ ಹೊರಗಿಟ್ಟು ನೇಮಕ ಮಾಡುವ ಕಾನೂನು ರಚಿಸಿದೆ. ಇದರಿಂದ ಕೇಂದ್ರ ಸರ್ಕಾರ ಇಚ್ಛಾನುಸಾರ ಚುನಾವಣಾ ಮುಖ್ಯ ಆಯುಕ್ತರನ್ನು ಆಯ್ಕೆ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಕಾನೂನು ಜಾರಿಗೊಳಿಸುವ ಸಂದರ್ಭದಲ್ಲಿ ವಿರೋಧ ಮಾಡಿದ ಅಂದಿನ 130 ಸಂಸದರನ್ನು ಅಮಾನತ್ತುಗೊಳಿಸಿ, ಎರಡು ಸದನದಲ್ಲಿ ಬಿಲ್‌ಪಾಸ್ ಮಾಡಿದ ಒಂದು ವಾರಕ್ಕೆ ರಾಷ್ಟ್ರಪತಿಗಳು ಆತುರಾತುರವಾಗಿ ಸಹಿ ಹಾಕಿ ಜಾರಿಗೊಳಿಸುತ್ತಾರೆ. ಇದರಲ್ಲಿ ಚುನಾವಣಾ ಆಯೋಗದ ಮುಖ್ಯಸ್ಥರನ್ನು ತೆಗೆದು ಹಾಕಲು ಸುಪ್ರೀಂಕೋರ್ಟ್ ನ್ಯಾಯಾಮೂರ್ತಿಗಳಿಗೆ ಅನುಸರಿಸುವ ಎಲ್ಲಾ ಮಾರ್ಗಗಳನ್ನು ಅನುಸರಿಸಬೇಕಾದ ನೀತಿಯನ್ನು ಜಾರಿಗೆ ತಂದಿದೆ ಎಂದು ಮಾಹಿತಿ ನೀಡಿದರು.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐ ಆರ್) ವಿರೋಧ ವ್ಯಕ್ತವಾಗಿರುವಾಗಲೇ, ದೇಶಾವ್ಯಾಪ್ತಿ 'ಎಸ್‌ಐಆರ್' ಜಾರಿಗೊಳಿಸಲು ಕೇಂದ್ರ ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ. ದೇಶವ್ಯಾಪಿ ಅದರ ಸಿದ್ಧತೆಗಳ ಕುರಿತು ಚರ್ಚಿಸಲು ಆಯೋಗದ ಉನ್ನತ ಅಧಿಕಾರಿಗಳು ಸೆ.10ರಂದು ವಿವಿಧ ರಾಜ್ಯಗಳ ಚುನಾವಣಾ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ ಮುಂದಾಗಿರುವುದು ಆತಂಕದ ವಿಷಯ ಎಂದರು.

'ಎಸ್‌ಐಆರ್' ಜಾರಿ ಹಿಂದೆ ದುರುದ್ದೇಶ: ಜನ್ಮಸ್ಥಳ ಪರಿಶೀಲನೆಯ ಮೂಲಕ ವಿದೇಶಿ ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದು. ಬಾಂಗ್ಲಾದೇಶ, ಪಾಕಿಸ್ತಾನ, ಮ್ಯಾನ್ಮಾರ್ ಸೇರಿ ಇತರೆ ದೇಶಗಳಿಂದ ನುಸುಳಿರುವ ವಿದೇಶಿ ಅಕ್ರಮ ವಲಸಿಗರನ್ನು ಗುರುತಿಸುವುದು. ಮತದಾರರ ಪಟ್ಟಿಯ ಸಮಗ್ರತೆ ರಕ್ಷಿಸಲು, ಸಾಂವಿಧಾನಿಕ ಆದೇಶ ನಿರ್ವಹಿಸಲು ಮುಂದಾಗಿದೆ ಆಯೋಗ ಹೇಳುತ್ತಿದ್ದರೂ ಇದರ ಹಿಂದೆ ದಲಿತರು, ಕಾರ್ಮಿಕರು, ಅನಕ್ಷರಸ್ಥರನ್ನು ಮತದಾನದಿಂದ ಹೊರಗಿಟ್ಟು ಮತಪಟ್ಟಿ ತಯಾರಿಸಲು ಮುಂದಾಗುತ್ತಿರುವುದು ಆತಂಕದ ವಿಷಯ ಎಂದರು.

ಮತಗಟ್ಟೆ ಅಧಿಕಾರಿಗಳು(ಬಿಎಲ್‌ಎ) ಬೂತ್ ಮಟ್ಟದಲ್ಲಿ ಪ್ರತಿ ಮನೆಗೆ ಭೇಟಿ ನೀಡಿ, ಮತದಾರರ ವಿವರವನ್ನು ಸಂಗ್ರಹಿಸಿ, ಖಚಿತಪಡಿಸಿಕೊಳ್ಳುವುದು ಹಾಗೂ ಗುರುತು ಪತ್ತೆಗೆ 1980ರ ದಶಕದ ಜನನ–ಮರಣ ಪ್ರಮಾಣ ಪತ್ರ ತೋರಿಸುವಂತೆ ಒತ್ತಾಯಿಸಲಾಗುತ್ತಿದೆ. ಬಿಹಾರದಲ್ಲಿ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿಗೆ ಸಹಾಯ ಮಾಡಲು ಆಯೋಗವು 'ಎಸ್‌ಐಆರ್' ಜಾರಿಗೊಳಿಸಿದೆ ಎಂದು ನೇರ ಆರೋಪ ಮಾಡಿದರು.

ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ ಮಾಡಲು ಬಯಸುವವರಿಗೆ ಮತ್ತು ಹೊರ ರಾಜ್ಯಗಳಿಗೆ ಸ್ಥಳಾಂತರಗೊಂಡವರಿಗೆ 'ಎಸ್‌ಐಆರ್' ನಲ್ಲಿ 'ಘೋಷಣಾ ಪತ್ರ' ಎಂಬ ಹೊಸ ನಮೂನೆಯನ್ನು ಪರಿಚಯಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವವರು 1987ರ ಜುಲೈ 1ರ ಮೊದಲು ಜನಿಸಿದವರಾಗಿದ್ದರೆ ಭಾರತದಲ್ಲಿ ಜನಿಸಿದ್ದೇವೆ ಎನ್ನುವುದಕ್ಕೆ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆ ಒದಗಿಸಬೇಕು.

1987ರ ಜುಲೈ 1ರಿಂದ 2004ರ ಡಿ.2 ರೊಳಗೆ ಜನಿಸಿದವರು ತಮ್ಮ ಪೋಷಕರ ಜನ್ಮ ದಿನಾಂಕ, ಜನ್ಮಸ್ಥಳದ ದಾಖಲೆ ಯನ್ನೂ ಒದಗಿಸಬೇಕು ಎಂದು ಚುನಾವಣಾ ಆಯೋಗ ಕೇಳುತ್ತಿದೆ. ಈ ರೀತಿ ದಾಖಲೆಗಳನ್ನು ಪರಿಶೀಲಿಸಲು ಚುನಾವಣಾ ಆಯೋಗಕ್ಕೆ ಯಾವ ಅಧಿಕಾರ ವಿದೆ ಎಂದು ಪ್ರಶ್ನಿಸಿದರಲ್ಲದೆ, ಈ ಮೂಲಕ ಸಿಎಎ, ಎನ್‌ಆರ್‌ಸಿಯನ್ನು ಪರೋಕ್ಷವಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ, ಆಯೋಗವನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಸುಪ್ರೀಂಕೋರ್ಟ್ ಸೂಚನೆ: ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಮತ್ತು ಮತದಾನದ ಹಕ್ಕಿನಿಂದ ವಂಚಿತರಾಗುತ್ತಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ. ಕೆಲವು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು ಈಗಾಗಲೇ ತಮ್ಮ ರಾಜ್ಯಗಳಲ್ಲಿ ಕೊನೆಯ ಬಾರಿ ಪರಿಷ್ಕರಣೆ ಆಗಿರುವ ಮತದಾರರ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತಿದ್ದಾರೆ. ಹೆಚ್ಚಿನ ರಾಜ್ಯಗಳು 2002–2004ರ ಅವಧಿಯಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಿದ್ದವು. ಇದೀಗ ಮತಪಟ್ಟಿ ಪರಿಷ್ಕರಣೆ ನೆಪದಲ್ಲಿ ನಾಗರಿಕ ಪೌರತ್ವ ಸಾಬೀತುಪಡಿಸುವಂತೆ ಕೇಳುತ್ತಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಈ ವೇಳೆ ಪೀಪಲ್ಸ್ ಲೀಗಲ್ ಫೋರಂನ ನಿರ್ದೇಶಕ ಪಿ.ಪಿ.ಬಾಬುರಾಜ್, ಕೆಎಸ್‌ಐಸಿ ಹೊರಗುತ್ತಿಗೆ ಮತ್ತು ಇತರೆ ನೌಕರರ ಸಂಘದ ಅಧ್ಯಕ್ಷ ಬಿ.ವಿಜಯೇಂದ್ರ, ವಕೀಲ ಜಿ.ವಿ.ಯತೀಶ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಒಂದು ದೊಡ್ಡ ಮಾಲ್‌ನಲ್ಲಿ ಸುಂದರವಾದ
ಹುಡುಗಿ ಶಾಪಿಂಗ್ ಮಾಡುತ್ತಿರುತ್ತಾಳೆ.
ಆಗ ಗುಂಡ ಅವಳ ಬಳಿ ಹೋಗಿ

ಗುಂಡ : ಮೇಡಂ ನನ್ನ ಹೆಂಡ್ತಿ ಈ ಮಾಲ್‌ನಲ್ಲಿ ಕಾಣ್ತಿಲ್ಲ. ನೀವು ನನ್ನ ಜೊತೆ ಸ್ವಲ್ಪ ಹೊತ್ತು ಮಾತಾಡ್ತೀರಾ?

ಹುಡುಗಿ : (ಕೋಪಗೊಂಡು) ನಿಮ್ ಹೆಂಡತಿ ಕಾಣೆಸ್ತಿಲ್ಲ ಅಂದ್ರೆ ನನ್ನ ಹತ್ರ ಯಾಕೆ ಬಂದಿದ್ದೀರ?

ಗುಂಡ : ಏನಿಲ್ಲ ಮೇಡಂ. ನಾನು ಚೆನ್ನಾಗಿರೋ ಹುಡುಗಿ ಜೊತೆ ಎಲ್ಲಾದ್ರೂ ಮಾತಾಡಿದ್ರೆ ಸಾಕು, ನನ್ನ ಹೆಂಡತಿ ಅದೆಲ್ಲಿರ್ತಾಳೋ ಕೂಡಲೇ ಪ್ರತ್ಯಕ್ಷ ಆಗಿ ಬಿಡ್ತಾಳೆ!

ಮೈಸೂರು ಮಿತ್ರ

ಸೋಮವಾರ, 8 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಪ್ರೀತಿಯನ್ನು ಗೆಲ್ಲಲು ಆಗದೆ ಇರಬಹುದು. ಆದರೆ ಪ್ರೀತಿಯಿಂದ ಎಲ್ಲವನ್ನು ಗೆಲ್ಲಬಹುದು. ದ್ವೇಷದಿಂದ ಏನನ್ನೂ ಗೆಲ್ಲಲಾಗದು. ಆದರೆ ಎಲ್ಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಪ್ರೀತಿಯಿಂದ ಸಾವನ್ನೂ ಗೆಲ್ಲಬಹುದು. ದ್ವೇಷದಿಂದ ಬದುಕಿನಲ್ಲೂ ಸೋಲಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು	ಅಡಿಗೆ ಬಿದ್ದರೂ ಮೀಸೆ ಮೇಲೆ

ನಿಮ್ಮ ಪತ್ರಗಳು

ದಸರಾ ಆನೆಗಳಿಗೆ ಕಿರಿಕಿರಿ ಮಾಡಬೇಡಿ

ಮಾನ್ಯರೆ,

ವಿಶ್ವ ವಿಖ್ಯಾತ ದಸರಾಗೆ ಮೈಸೂರಿನಲ್ಲಿ ಎಲ್ಲಾ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ದಸರಾ ಆನೆಗಳು ನಾಡಿಗೆ ಆಗಮಿಸಿ ರಾಜಬೀದಿಯಲ್ಲಿ ತಾಲೀಮು ನಡೆಸುತ್ತಿವೆ. ಕಾಡಿನಿಂದ ಬಂದ ದಸರಾ ಆನೆಗಳು ನಾಡಿಗೆ ಹೊಂದಿಕೊಳ್ಳುತ್ತಿವೆ. ಗಾಂಭೀರ್ಯದಿಂದ ರಾಜಬೀದಿಯಲ್ಲಿ ಹೆಜ್ಜೆ ಹಾಕುತ್ತಿವೆ. ಆನೆ ಬರುವ ರಾಜಬೀದಿಗಳಲ್ಲಿ ಅವು



ಗಳಿಗೆ ಆಗದ ಪಟಾಕಿ ಸದ್ದು, ಮೋಟಾರ್ ಗಾಡಿಗಳ ಕರ್ಕಶ ಸದ್ದು, ತಮಟೆ ಸದ್ದು, ಧ್ವನಿವರ್ಧಕಗಳ ಸದ್ದು ಆಗದಂತೆ ನೋಡಿಕೊಳ್ಳಬೇಕು. ಆನೆಗಳು ರಸ್ತೆಗಿಳಿದ ಕೂಡಲೇ ಓಹೋ ಎಂದು ಉದ್ಗಾರ ಮಾಡಿ ಜೋರು ಧ್ವನಿಯಲ್ಲಿ ಕಿರುಚುವುದು. ಈ ತರಹ ಸದ್ದುಗಳು ಕೇಳಿದರೆ ಆ ಮೂಲಕ ಪ್ರಾಣಿಗೆ ಗಾಬರಿಯಿಂದ ಅಡ್ಡಾದಿಡ್ಡಿ ರಸ್ತೆಯಲ್ಲಿ ಓಡಾಡಿ ಸಾವು ನೋವು, ಅನಾಹುತಗಳು ಸಂಭವಿಸಿ ಸಾರ್ವಜನಿಕರಿಗೆ ನಷ್ಟ ಉಂಟಾಗಬಹುದು. ಆದ್ದರಿಂದ ದಸರಾ ಆನೆ ಬರುವ ರಾಜಬೀದಿಗಳಲ್ಲಿ ಅದಕ್ಕೆ ತೊಂದರೆ ಉಂಟಾಗುವ ಹಾಗೆ ನಡೆದುಕೊಳ್ಳಬೇಡಿ. ಅದು ನಮ್ಮ ಪರಿಸರಕ್ಕೆ ಹೊಂದಿಕೊಳ್ಳಲು ಅವಕಾಶ ನೀಡಿ. ದಸರಾ ಆನೆಯನ್ನು ಪ್ರೀತಿಯಿಂದ ಸ್ವಾಗತಿಸೋಣ. ದಸರಾ ಹಬ್ಬವನ್ನು ಎಲ್ಲರೂ ಸಂತೋಷದಿಂದ ಕಳೆಯೋಣ. ಮೂಕಪ್ರಾಣಿಗಳ ಮನಸು ಭಾವನೆಗಳನ್ನು ಅರಿತು ಸಂಭ್ರಮಿಸೋಣ.

–ಎಂ.ಎಸ್.ಉಷಾ ಪ್ರಕಾಶ್, ಲೇಖಕಿ, ಕವಯಿತ್ರಿ, ಮೈಸೂರು.

ಜಿಎಸ್‌ಟಿ ಪರಿಷ್ಕರಣೆ ಸ್ವಾಗತಾರ್ಹ

ಮಾನ್ಯರೆ,

ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ), ಮಂಡಳಿ ಸಭೆಯು, ಜಿಎಸ್‌ಟಿ ಪರಿಷ್ಕರಿಸಲು, ತೀರ್ಮಾನಿಸಿರುವುದು ಸ್ವಾಗತಾರ್ಹ ಕ್ರಮ, ಹಾಲಿ ಇರುವ 4 ಹಂತದ ಜಿಎಸ್‌ಟಿಯನ್ನು 2 ಹಂತಕ್ಕೆ ಇಳಿಸಿರುವುದಾಗಿ (5 ಮತ್ತು 18), ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಇದರಿಂದಾಗಿ ಜನಸಾಮಾನ್ಯರಿಗೆ ಅನುಕೂಲವಾಗಲಿದೆ. ಎಲ್ಲಕ್ಕಿಂತ ಮುಖ್ಯವಾಗಿ, ವೈಯಕ್ತಿಕ ಜೀವ ವಿಮಾ ಪಾಲಿಸಿ ಮತ್ತು ಆರೋಗ್ಯ ವಿಮೆಯ ಮೇಲಿನ ಜಿಎಸ್‌ಟಿಗೆ, ಸಂಪೂರ್ಣ ವಿನಾಯಿತಿ ನೀಡುವುದಾಗಿ ಸಚಿವರು ಹೇಳಿದ್ದಾರೆ. ಇದರಿಂದಾಗಿ ಬಡ ಮತ್ತು ಮಧ್ಯಮ ವರ್ಗದ ಜನರು ಸಹ ಕೈಗೆಟುಕುವ ದರದಲ್ಲಿ ವಿಮಾ ಪಾಲಿಸಿ ತೆಗೆದುಕೊಳ್ಳಲು ಅನುಕೂಲವಾಗಬಹುದು. ಇದರಿಂದ ದೇಶದ ಆರ್ಥಿಕ ವ್ಯವಸ್ಥೆಗೆ ಪೂರಕವಾದ ವಾತಾವರಣ ನಿರ್ಮಾಣವಾಗಬಹುದು. ಆದರೆ ಈ ಹೊಸ ಪರಿಷ್ಕರಣೆ, ಇದೇ ತಿಂಗಳ 22ರಿಂದ ಅನ್ವಯವಾಗುತ್ತದೆ ಎಂದು ತಿಳಿಸಿದ್ದಾರೆ. ಈ ಹೊಸ ಪರಿಷ್ಕರಣೆ ಇಂದಿನಿಂದಲೇ (ಸೆ.5), ಜಾರಿಗೆ ತರಲು ವಿತ್ತ ಸಚಿವರು ಕ್ರಮ ಕೈಗೊಳ್ಳಬೇಕು, ಇಲ್ಲದೇ ಹೋದರೆ, ಈ ತಿಂಗಳ 22ನೇ ತಾರೀಖಿನ ತನಕ, ಜೀವ ವಿಮೆ ಸೇರಿದಂತೆ ಯಾವುದೇ ಹೊಸ ವ್ಯವಹಾರಗಳು ನಡೆಯುವುದಿಲ್ಲ. ಈ ಬಗ್ಗೆ ಸರ್ಕಾರ ಸೂಕ್ತ ಕೈಗೊಳ್ಳಬೇಕು. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಥೈಲ್ಯಾಂಡ್ ಕೋರ್ಟ್ ಅಸಾಧಾರಣ ಕ್ರಮ ಸ್ವಾಗತಾರ್ಹ

ಮಾನ್ಯರೆ,

ಥೈಲ್ಯಾಂಡ್ ದೇಶದ ಪ್ರಧಾನ ಮಂತ್ರಿ ಪೇಟೊಂಗ್ಟಾರ್ನ್ ಶೈನವಾತ್ರ ಹಾಗೂ ಅವರ ಸಚಿವ ಸಂಪುಟವನ್ನು ಆ ದೇಶದ ಸಾಂವಿಧಾನಿಕ ನ್ಯಾಯಾಲಯ ವಜಾಗೊಳಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಕಾಂಬೋಡಿಯಾ ದೇಶದೊಂದಿಗಿನ ಗಡಿ ವಿವಾದವನ್ನು ನಿರ್ವಹಿಸಿದ ವಿಚಾರಕ್ಕೆ ಸಂಬಂಧಿಸಿದ ಹಾಗೆ ಆ ದೇಶದ ನ್ಯಾಯಾಲಯ ಈ ಅಸಾಧಾರಣ ಕ್ರಮ ಕೈಗೊಂಡಿದೆ ಎಂದು ಹೇಳಲಾಗಿದೆ. 9 ಮಂದಿ ನ್ಯಾಯಾಧೀಶರನ್ನು ಒಳಗೊಂಡ ಸಾಂವಿಧಾನಿಕ ಪೀಠ, ಪ್ರಧಾನ ಮಂತ್ರಿ ಹುದ್ದೆಗೆ ಬೇಕಾದ ನೈತಿಕ ಮಾನದಂಡವನ್ನು ಶೈನವಾತ್ರ ಹೊಂದಿರಲಿಲ್ಲವೆಂದು ಹೇಳಿದೆ. ಈ ಮೂಲಕ ಪ್ರಧಾನಮಂತ್ರಿಯಂತಹ ಉನ್ನತ ಸ್ಥಾನ ಹೊಂದಿದವರೂ ಕಾನೂನಿನ ಮುಷ್ಠಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂಬ ಸಂದೇಶ ನೀಡಿದೆ. ತನ್ಮೂಲಕ ನ್ಯಾಯಾಂಗಕ್ಕಿಂತ ದೊಡ್ಡವರು ಯಾರೂ ಇಲ್ಲವೆಂಬುದನ್ನು ಆ ದೇಶದ ನ್ಯಾಯಾಲಯ ಸ್ಪಷ್ಟಪಡಿಸಿರುವುದು ಸ್ವಾಗತಾರ್ಹವಾಗಿದೆ. –ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಕೋಟೆ ಸುತ್ತಮುತ್ತ ಚಿರತೆ, ಹುಲಿ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರು ಜಿಲ್ಲೆಗೆ ಸೇರಿದ ಹೆಚ್.ಡಿ.ಕೋಟೆ ತಾಲೂಕಿನ ಹಲವು ಗ್ರಾಮಗಳಲ್ಲಿ ಅಂದರೆ ಹೈರಿಗೆ ಗ್ರಾಪಂ ವ್ಯಾಪ್ತಿಗೆ ಬರುವ ಹೆಚ್.ಮಟಕೆರೆ, ಹೈರಿಗೆ, ಮಾಲಾರ ಕಾಲೋನಿ ಹಾಗೂ ಇತರೆ ಅಕ್ಕಪಕ್ಕದ ಗ್ರಾಮಗಳಲ್ಲಿ ಹುಲಿ, ಚಿರತೆ ಹಾವಳಿ ಹೆಚ್ಚಾಗಿದ್ದು, ರೈತರು ತಮ್ಮ ಜಮೀನುಗಳಲ್ಲಿ ಕೆಲಸ ಕಾರ್ಯ ಮಾಡಲು ಭಯದ ಪರಿಸ್ಥಿತಿ ಇದೆ. ವಯಸ್ಸಾದವರು, ರೋಗಿಗಳು, ಮಾಲಾರ ಕಾಲೋನಿವರೆಗೂ ಬೆಳಗಿನ ಜಾವ ವಾಕಿಂಗ್ ಮಾಡುವವರಿಗೂ ತೊಂದರೆಯಾಗುತ್ತದೆ. ಆದರೆ ಅಕ್ಕಪಕ್ಕದ ಹೊಲಗದ್ದೆಗಳಲ್ಲಿ ಹುಲಿ, ಚಿರತೆ ಹೆಜ್ಜೆ ಗುರುತುಗಳು ನೋಡಿ ಭಯ ಪಡುತ್ತಿದ್ದಾರೆ. ಇತ್ತೀಚೆಗೆ ಮೈಸೂರ್–ಮಾನಂದವಾಡಿ ಮುಖ್ಯ ರಸ್ತೆಯಲ್ಲಿ ಮಟಕೆರೆ ಹತ್ತಿರ ಚಿರತೆ ಮರಿಗೆ ಅಪಘಾತವಾಗಿದೆ. ರೈತರು ಕಬ್ಬು, ಶುಂಠಿ ಕೆಲಸ ಹಾಗೂ ತೋಟಗಳಲ್ಲಿ ಕೆಲಸ ಕಾರ್ಯ ಮಾಡಲು ತುಂಬಾ ಭಯಪಡುತ್ತಿದ್ದಾರೆ. ಈ ಪಂಚಾಯತಿ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಚಿರತೆ, ಹುಲಿ ಹಾವಳಿ ಹೆಚ್ಚಾಗಿದ್ದು, ಇದನ್ನು ರಕ್ಷಣೆ ಮಾಡಲು ಅರಣ್ಯ ಅಧಿಕಾರಿಗಳು ಮುಂದಾಗಬೇಕಾಗಿದೆ. ಆದುದರಿಂದ ಈ ವಿಚಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕೂಡಲೇ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು.

–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ.ಕೋಟೆ ತಾ.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸರಳತೆ ಸೂತ್ರದಲ್ಲಿ ಸುಖ ಕಂಡ ಸಿದ್ಧೇಶ್ವರ ಶ್ರೀಗಳು!

ಭಾರತ ಭೂಮಿಯು ಇಡೀ ವಿಶ್ವದಲ್ಲಿ ಭಿನ್ನವಾಗಿ ನಿಲ್ಲುವುದು ಆಧ್ಯಾತ್ಮಿಕ ಚಿಂತನೆಗಳ ಅಸಂಖ್ಯ ಸಂತರ ಅಸಾಮಾನ್ಯ ಸಾಧನೆಗಳಿಂದ. ತಮ್ಮ ಜ್ಞಾನ ದಾಸೋಹದಿಂದ ಜನರನ್ನು ಜಾಗೃತಗೊಳಿಸುವುದಷ್ಟೇ ಅಲ್ಲದೆ ನುಡಿದಂತೆ ನಡೆದು ಆದರ್ಶಪ್ರಾಯವಾಗಿರುತ್ತಾರೆ. ಅಂತಹ ಸಂತರಲ್ಲಿ ಒಬ್ಬರು ವಿಜಯಪುರ ಜ್ಞಾನಯೋಗಾಶ್ರಮದ ಜ್ಞಾನ ಭಂಡಾರಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು. ರಾಗದ್ವೇಷಗಳಿಲ್ಲ, ಅಳುಕುಭೀತಿಗಳಿಲ್ಲ; ಮುನಿಸು ಕಾತರವಿಲ್ಲ, ಗರ್ವ ಇನಿತಿಲ್ಲ. ಇದೆ ಪ್ರೀತಿ, ಇದೆ ಕರುಣೆ, ಇದೆ ಸಮತೆ ಮನದಲ್ಲಿ; ಓ! ಸಂತನೋ ಈತ! ಮುದ್ದುರಾಮ ಎಂದು ಖ್ಯಾತ ಕವಿಗಳಾದ ಶ್ರೀ ಕೆ.ಸಿ.ಶಿವಪ್ಪನವರು ತಮ್ಮ ಚೌಪದಿಯೊಂದರಲ್ಲಿ ಸಿದ್ಧೇಶ್ವರ ಶ್ರೀಗಳವರನ್ನು ಹೀಗೆ ಬಣ್ಣಿಸಿದ್ದಾರೆ. ಸಿದ್ಧೇಶ್ವರ ಶ್ರೀಗಳವರ ವ್ಯಕ್ತಿತ್ವ ಅರಿಯಲು ಇದೊಂದು ಚೌಪದಿಯೇ ಸಾಕು.

ಮಹಾತ್ಮರು ದೇಹದಲ್ಲಿರುವಾಗ ಒಂದೆಡೆ ಮಾತ್ರ ಸಿಗುತ್ತಾರೆ. ದೇಹ ಬಿಟ್ಟಮೇಲೆ ಎಲ್ಲೆಲ್ಲೂ ದೊರಕುತ್ತಾರೆ ಎಂದು ಹಿರಿಯರೊಬ್ಬರು ಹೇಳಿರುವ ಮಾತು ಅಕ್ಷರಶಃ ನಿಜ ಎನಿಸುತ್ತದೆ. ಅವರು 82 ವರ್ಷಗಳ ಸಂತ ಜೀವನ ಪೂರೈಸಿ 2023 ಜನವರಿ 3ರಂದು ಲಿಂಗೈಕ್ಯರಾಗಿದ್ದರೂ, ಅವರ ನುಡಿಕುಸುಮಗಳ ಘಮಲು ಇಂದಿಗೂ ಎಲ್ಲೆಲ್ಲೂ ಪಸರಿಸುತ್ತಿದೆ. ಸಂತ ಜೀವನ ನಡೆಸಿದ ಪೂಜ್ಯರು, ಎಲ್ಲರಿಗೂ ಸಂತಸದ ಜೀವನ ನಡೆಸಲು ಸರಳ ಸೂತ್ರಗಳನ್ನು ತಿಳಿಸಿದವರು.

ಪೂಜ್ಯರು ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲೂಕಿನ ನಂದರಗಿ ಗ್ರಾಮದಲ್ಲಿ 1940 ಸೆಪ್ಟೆಂಬರ್ 5ರಂದು ಜನಿಸಿದರು. ಇವರ ತಂದೆಯವರು ತಿಕೋಟ ತಾಲೂಕಿನ ಬಿಜ್ಜರಗಿ ಗ್ರಾಮದ ಜಮೀನ್ದಾರರೂ ಹಾಗೂ ಚಿತ್ರ ಕಲಾವಿದರಾಗಿದ್ದ ಓಗೆಪ್ಪ ಬಿರಾದಾರರವರು, ತಾಯಿ ಗಂಗಮ್ಮ. ಇವರ ಜನ್ಮನಾಮ ಸಿದ್ಧಗೊಂಡಪ್ಪ. ಶ್ರೀಗಳು ಬಿಜ್ಜರಗಿ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ, ಪ್ರೌಢಶಾಲಾ ಶಿಕ್ಷಣಕ್ಕೆ ವಿಜಯಪುರದ ಶ್ರೀ ಸಿದ್ಧೇಶ್ವರ ಪದವಿಪೂರ್ವ ಕಾಲೇಜಿಗೆ ದಾಖಲಾಗುತ್ತಾರೆ. ಶಾಲೆಯ ಸಮೀಪದಲ್ಲಿಯೇ ಇದ್ದ ಶಿವಾನುಭವ ಮಂಟಪದಲ್ಲಿ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ಆಧ್ಯಾತ್ಮ ಪ್ರವಚನ ಇವರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ನಂತರ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪದವಿ ಪೂರೈಸಿ, ಕೊಲ್ಹಾಪುರ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸುತ್ತಾರೆ. ಶಿಕ್ಷಣದ ಜೊತೆಗೆ ಶ್ರೀ ಮಲ್ಲಿಕಾರ್ಜುನ ಗುರುಗಳು ಮಾಡಿದ ಪ್ರವಚನವನ್ನು ಲಿಖಿತ ರೂಪದಲ್ಲಿ ದಾಖಲಿಸಿ, ಸಂಕಲನ ಕೃತಿ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು 18ನೇ ವಯಸ್ಸಿನಲ್ಲಿಯೇ ರಚಿಸಿ ಬೆಳೆಯುವ ಪೈರು ಮೊಳಕೆಯಲ್ಲಿಯೇ ಎಂಬುದನ್ನು ನಿರೂಪಿಸುತ್ತಾರೆ.

ಸ್ನಾತಕೋತ್ತರ ಪದವಿ ಪಡೆದು ವಿಜಯಪುರಕ್ಕೆ ಹಿಂದಿರುಗಿದ ನಂತರ ಪೂಜ್ಯರಿಗೆ ಭಗವದ್ಗೀತೆ, ಉಪನಿಷತ್ತುಗಳ ಬಗ್ಗೆ ಮಲ್ಲಿಕಾರ್ಜುನಸ್ವಾಮಿಗಳು ವ್ಯಾಖ್ಯಾನಿಸಿ ಪೂಜ್ಯರ ಜ್ಞಾನದಿಗಂತವನ್ನು ವಿಸ್ತರಿಸುತ್ತಾರೆ. ಯೋಗಸೂತ್ರ, ವಚನಶಾಸ್ತ್ರ ಅಧ್ಯಯನ ಮಾಡಿ ಪ್ರವಚನಗಳನ್ನು ನೀಡಲು ಪ್ರಾರಂಭಿಸುತ್ತಾರೆ. ಪೂಜ್ಯರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ ಪರಿಣತಿ ಇರುತ್ತದೆ. ಕರ್ನಾಟಕ ರಾಜ್ಯವಷ್ಟೇ ಅಲ್ಲದೆ ಮಹಾರಾಷ್ಟ್ರದ ಪ್ರಮುಖ ನಗರ/ಪಟ್ಟಣಗಳಲ್ಲಿ ತಿಂಗಳುಗಟ್ಟಲೆ ಪ್ರವಚನ ನೀಡುತ್ತಾರೆ. ಪೂಜ್ಯರ ಪ್ರವಚನ ಆಲಿಸಲು ಮುಂಜಾನೆಯ ವೇಳೆಗೆ ಸಾವಿರಾರು ಭಕ್ತರು ಸೇರುತ್ತಿದ್ದುದು ಆಶ್ಚರ್ಯಕರ ಸಂಗತಿ. ತಮ್ಮ ಗುರುಗಳ ಮಾರ್ಗದರ್ಶನದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ಜವಾಬ್ದಾರಿಯನ್ನು ಸಹ ನಿಭಾಯಿಸುತ್ತಾರೆ. ಪ್ರಕೃತಿ ಪ್ರಿಯರಾದ ಪೂಜ್ಯರು ತಮ್ಮ ಪ್ರವಚನದಲ್ಲಿ ಹೂವುಗಳು, ಪ್ರಾಣಿಗಳು, ಮರಗಳ ಉದಾಹರಣೆಗಳನ್ನು ನೀಡಿ, ಸಣ್ಣ ಕಥೆಗಳ ಮೂಲಕ ಎಂಥಹ ಕಠಿಣವಾದ ವಿಷಯವು ಸರಳ ರೀತಿಯಲ್ಲಿ ಭಕ್ತರಿಗೆ ಅರ್ಥವಾಗುವಂತೆ ಮಾಡುತ್ತಿದ್ದರು. 2018ರ ಡಿಸೆಂಬರ್ ಮಾಹೆಯಲ್ಲಿ ವಿಜಯಪುರದಲ್ಲಿ ಆಯೋಜಿಸಿದ್ದ 7 ದಿನಗಳ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಪೂಜ್ಯರ ಪ್ರವಚನ ಆಲಿಸಲು ದಾಖಲೆಯ 20 ಲಕ್ಷ ಭಕ್ತರು ಆಗಮಿಸಿದ್ದು, ಪೂಜ್ಯರ ಮೇಲಿನ ಭಕ್ತಿಗೆ ಸಾಕ್ಷಿಯಾಗಿದೆ.



ಪೂಜ್ಯರ ಸಂದೇಶಗಳು ಎಲ್ಲರ ಮನಮುಟ್ಟುವಂತೆ ಇವೆ. ಇಂದಿಗೂ ಅವರ ಪ್ರವಚನಗಳು ಪುಸ್ತಕ ರೂಪದಲ್ಲಿ, ವಿಡೀಯೋ ರೂಪದಲ್ಲಿ ಲಕ್ಷಾಂತರ ಜನರನ್ನು ಜಾಗೃತಗೊಳಿಸುತ್ತಲೇ ಇವೆ. ಅವರ ಶರೀರ ಮರೆಯಾಗಿದ್ದರೂ, ಅವರ ಶಾರೀರ ಹಾಗೂ ಅಕ್ಷರಗಳ ಮೂಲಕ ಜನಮಾನಸದಲ್ಲಿ ಜೀವಂತವಾಗಿಯೇ ಇದ್ದಾರೆ. ಸೂರ್ಯನ ಕಿರಣಗಳು ಕೊಳಕು ಇರುವ ಜಾಗಕ್ಕೂ ಹೋಗುತ್ತದೆ. ಆದರೆ ಅದು ಕೊಳಕಾಗುವುದಿಲ್ಲ. ಹಾಗೆಯೇ ನಾವು ಸಹ ಸೂರ್ಯನ ಕಿರಣದಂತೆ ಬದುಕಬೇಕು. ಯಾವ ಜಾಗಕ್ಕೆ ಹೋದರೂ, ಯಾರ ಜೊತೆ ಇದ್ದರೂ ನಾವು ನಾವಾಗಿರಬೇಕು, ಕೊಳಕಾಗಬಾರದು ಎಂದು ಹೇಳುತ್ತಿದ್ದರು. ಕಷ್ಟಗಳನ್ನು ಮೌನವಾಗಿ ದಾಟಬೇಕು, ಪರಿಶ್ರಮವಿಲ್ಲದೆ ಸಾಗಬೇಕು, ಸಿಗುವ ಯಶಸ್ಸಿನ ಶಬ್ದ ಜಗತ್ತಿಗೆ ಕೇಳಿಸುವಷ್ಟು ಜೋರಾಗಿರಬೇಕು ಎಂತಲೂ, ಪ್ರತಿಯೊಂದರಲ್ಲು ಸೌಂದರ್ಯವಿದೆ, ಗುರುತಿಸುವ ಕಣ್ಣು ಬೇಕು, ಪ್ರತಿಯೊಬ್ಬರಲ್ಲೂ ಸಾಮರ್ಥ್ಯವಿದೆ, ಹೊರತೆಗೆಯಬಲ್ಲ ಶಕ್ತಿಬೇಕಷ್ಟೆ ಎಂಬ ಸಂದೇಶವು ಅನುಕರಣೀಯವಾಗಿದೆ. ಕುದಿಯುವವರು ಕುದಿಯಲಿ, ಉರಿಯುವವರು ಉರಿಯಲಿ, ನಿನ್ನ ಪಾಡಿಗೆ ನೀನಿರು, ಕುದಿಯುವವರು ಆವಿಯಾಗುತ್ತಾರೆ. ಉರಿಯುವವರು ಬೂದಿಯಾಗುತ್ತಾರೆ ಎಂಬ ಮಾತುಗಳು ವ್ಯಕ್ತಿತ್ವ ವಿಕಸನಕ್ಕೆ ಪರಿಣಾಮಕಾರಿಯಾದ ಮಾತುಗಳಾಗಿವೆ.

ಪೂಜ್ಯರ ಜ್ಞಾನ ದಾಸೋಹದ ಕೈಂಕರ್ಯವನ್ನು ಮನಗಂಡು ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಲು ಮುಂದೆ ಬಂದವು. ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಕೊಡುವುದಾಗಿ ವಿನಂತಿಸಿದವು, ಅಷ್ಟೇ ಏಕೆ ದೇಶದ ಅತ್ಯುನ್ನತ ಗೌರವ ಪುರಸ್ಕಾರಗಳಲ್ಲಿ ಒಂದಾದ ಪದ್ಮಶ್ರೀ ಅವರಿಗೆ ಒಲಿದು ಬಂದಿತ್ತು. ಎಲ್ಲವನ್ನೂ ಪೂಜ್ಯರು ವಿನಮ್ರವಾಗಿ ನಿರಾಕರಿಸುತ್ತಾರೆ. ಈ ನಡೆಯು ಅವರ ಮೇರು ವ್ಯಕ್ತಿತ್ವವನ್ನು ತಿಳಿಸುತ್ತದೆ. ಪ್ರಶಸ್ತಿ ಪುರಸ್ಕಾರಗಳಿಗೋಸ್ಕರ ವಿವಿಧ ರೀತಿಯಲ್ಲಿ ಪ್ರಯತ್ನಿಸುವ ಸಾಧಕರೇ ಹೆಚ್ಚಾಗಿರುವ ಈ ಕಾಲಘಟ್ಟದಲ್ಲಿ ಯಾವುದಕ್ಕೂ ಆಸೆಪಡದೆ ಸರಳತೆಯಲ್ಲಿ ಸುಖ ಕಂಡ ಮಹಾನ್ ಸಂತ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು. ಅವರ ಉಡುಪು ಸರಳ, ಅವರ ಪಾದರಕ್ಷೆ ಸರಳ. ಜೇಬುಗಳಿಲ್ಲದ ಅಂಗಿಯನ್ನು ತೊಟ್ಟ ಅಪೂರ್ವ ಸಂತರವರು.

ಪೂಜ್ಯರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ ಅವರ ಪ್ರವಚನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ಭಗವದ್ಚಿಂತನ, ನಾನಾರು ಅಲ್ಲದೆ ನೂರಾರು ಕೃತಿಗಳು ಪ್ರಕಟಗೊಂಡಿವೆ. ಭಕ್ತಿಯೋಗ, ಕನ್ನಡ ಭಾಷೆಯಲ್ಲಿ ಭಗವದ್ಗೀತೆ, ಉಪನಿಷತ್ತುಗಳ ಕೃತಿ ಪೂಜ್ಯರಿಂದ ರಚಿಸಲ್ಪಟ್ಟಿವೆ. Songs of Silence ಎಂಬ ಆಂಗ್ಲ ಕವನ ಸಂಕಲನವನ್ನು ಸಹ ರಚಿಸಿದ್ದಾರೆ. ಅಲ್ಲಮ ಪ್ರಭುಗಳ ವಚನಗಳ ವ್ಯಾಖ್ಯಾನ ಕೃತಿ ವಚನ–ನಿರ್ವಚನ ಕೃತಿಯು ಅಮೂಲ್ಯವಾಗಿದೆ. ಈ ಕೃತಿಯ ಆಂಗ್ಲ ತರ್ಜುಮೆ ಕೃತಿ Vachanas of Allamprabhu ರಚಿಸಿದ್ದು ಸಹ ಪೂಜ್ಯರೆ. 2021ರ ಜೂನ್ 21ರಂದು ಮೈಸೂರಿನ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಶಿವಸೂತ್ರ, ನಾರದ ಭಕ್ತಿಸೂತ್ರ ಮತ್ತು ಪತಂಜಲಿಯ ಯೋಗಸೂತ್ರ ಕೃತಿಗಳನ್ನು ಭಾರತದ ಪ್ರಧಾನಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಶುಭ ಸಂದೇಶ ಲಿಖಿಸಿ ಲೋಕಾರ್ಪಣೆ ಮಾಡಿದ್ದು ವಿಶೇಷವಾದ ಸಂಗತಿ.

ಸುತ್ತೂರು ಮಠದ ಜಗದ್ಗುರುಗಳವರಿಗೆ ಸಿದ್ಧೇಶ್ವರ ಶ್ರೀಗಳವರನ್ನು ಕಂಡರೆ ವಿಶೇಷವಾದ ಅಕ್ಕರೆ ಇತ್ತು. ದಕ್ಷಿಣ ಕರ್ನಾಟಕದಲ್ಲಿ ಸಿದ್ಧೇಶ್ವರ ಶ್ರೀಗಳವರ ಪ್ರವಚನ ಆಲಿಸುವ ಅವಕಾಶ ಭಕ್ತರಿಗೆ ದೊರಕಿದ್ದು ಸುತ್ತೂರು ಮಠದ ಜಗದ್ಗುರುಗಳವರಿಂದ. ಪ್ರತಿ ವರ್ಷ ಬೇಸಿಗೆ ಅವಧಿಯಲ್ಲಿ ಸುತ್ತೂರು, ಬಿ.ಆರ್.ಹಿಲ್ಸ್ ಹಾಗೂ ಊಟಿಯಲ್ಲಿ ಆಯೋಜಿಸುತ್ತಿದ್ದ ಹತ್ತಾರು ಶಿಬಿರಗಳಲ್ಲಿ ಪೂಜ್ಯರ ಪ್ರವಚನ ಇರುತ್ತಿತ್ತು.ಸುತ್ತೂರು ಮಠದ ಸಂಸ್ಥೆಯಲ್ಲಿ ಕಳೆದ 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನನಗೆ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರನ್ನು ಅತ್ಯಂತ ಹತ್ತಿರದಿಂದ ನೋಡುವ ಸೌಭಾಗ್ಯ ಒದಗಿತ್ತು. ಅವರ ವಚನ–ನಿರ್ವಚನ ಕೃತಿಯ ಇಂಗ್ಲಿಷ್ ಭಾಷಾಂತರ ಮಾಡುವ ಕೈಂಕರ್ಯದಲ್ಲಿ ನನಗೂ ಸಹ ಸೇವೆ ಸಲ್ಲಿಸುವ ಅವಕಾಶ ಒದಗಿತ್ತು. ತಿಂಗಳುಗಟ್ಟಲೆ ಇಡೀ ದಿನ ಅವರೊಟ್ಟಿಗೆ ಕಳೆಯುವ ಸದಾವಕಾಶ ದೊರಕಿತ್ತು. ಆಗ ಅವರ ಜ್ಞಾನದ ಆಳ ಹಾಗೂ ವಿಸ್ತಾರ ತಿಳಿಯಿತು. ನಾನು ಸಾಹಿತ್ಯ ಕ್ಷೇತ್ರದ ಕೆಲವು ಪ್ರಕಾರಗಳಲ್ಲಿ ಬರೆಯಲು ಪ್ರೇರೇಪಿಸಿದ ಮಹನೀಯರಲ್ಲಿ ಸಿದ್ಧೇಶ್ವರ ಶ್ರೀಗಳವರು ಸಹ ಒಬ್ಬರು.

ಪೂಜ್ಯರು ಲಿಂಗೈಕ್ಯರಾಗುವ ಹಲವು ವರ್ಷಗಳ ಹಿಂದೆಯೇ ಬರೆದಿದ್ದ ಅಂತಿಮ ಅಭಿವಂದನ ಪತ್ರ ಬಹಳ ವಿಶೇಷ ಹಾಗೂ ಅಮೂಲ್ಯವಾದುದು. ಈ ಅಭಿವಂದನ ಪತ್ರವು ಸಹ ಜಗತ್ತಿಗೆ ಒಂದು ದೊಡ್ಡ ಸಂದೇಶವನ್ನೇ ನೀಡುತ್ತದೆ. ಅಭಿವಂದನ ಪತ್ರದ ಆಯ್ದ ಅಂಶಗಳು ಇಂತಿವೆ. ಬದುಕು ಅನುಭವಗಳ ಪ್ರವಾಹ, ನನ್ನದು ಆವೇಗವಿಲ್ಲದ, ಸಾವಧಾನದ ಬದುಕು, ಬದುಕು ಮುಗಿಯುತ್ತದೆ, ದೀಪ ಆರಿದಂತೆ, ತೆರೆ ಅಡಗಿದಂತೆ, ಮೇಘ ಕರಗಿದಂತೆ, ಉಳಿಯುವುದು ಬರಿ ಬಯಲು, ಮಹಾಮೌನ, ಶೂನ್ಯ ಸತ್ಯ. ದೇಹವನ್ನು ಭೂಮಿಯಲ್ಲಿ ಹುಗಿಯುವ ಬದಲು ಅಗ್ನಿಯರ್ಪಿತ ಮಾಡುವುದು. ಯಾವುದೇ ಬಗೆಯ ಸ್ಮಾರಕ ನಿರ್ಮಿಸಬಾರದು. ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಸಹಜವೂ ಅಲ್ಲ, ಅಸಹಜವೂ ಅಲ್ಲ, ನಾನು ಇಲ್ಲ, ನೀನು ಇಲ್ಲ. ಇಲ್ಲ, ಇಲ್ಲ ಎಂಬುದು ತಾನಿಲ್ಲ, ಗುಹೇಶ್ವರನೆಂಬುದು ತಾ ಬಯಲು.

ನಾಳೆ ಮೈಸೂರಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಯವರ ನೆನಪಿನ ಕಾರ್ಯಕ್ರಮ

ಇಂತಹ ಮಹಾಸಂತರ ಜನ್ಮದಿನೋತ್ಸವ ಅಂಗವಾಗಿ ಸೆಪ್ಟೆಂಬರ್ 9ರ ಮಂಗಳವಾರ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಸಿದ್ಧೇಶ್ವರ ಶ್ರೀಗಳವರ ನೆನಪಿನ ಕಾರ್ಯಕ್ರಮವು ಏರ್ಪಾಡಾಗಿದ್ದು, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ಮಹಾರಾಷ್ಟ್ರ ಕನ್ನೇರಿಯ ಶ್ರೀ ಸಿದ್ಧಗಿರಿ ಸಂಸ್ಥಾನ ಮಠದ ಪೂಜ್ಯ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು ಹಾಗೂ ಶ್ರೀ ಶಿವಾನಂದ ಮಠದ ಪೂಜ್ಯ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳವರು ನುಡಿನಮನ ಸಲ್ಲಿಸುವರು. ಮಾಜಿ ರಾಜ್ಯ ಸಭಾ ಸದಸ್ಯ ಬಸವರಾಜ ಸೇಡಂರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೆ.ಸಿ. ಶಿವಪ್ಪ ಉಪಸ್ಥಿತರಿರುತ್ತಾರೆ. ಈ ಜ್ಞಾನಸಂಗಮ ಕಾರ್ಯಕ್ರಮದಲ್ಲಿ ಆಸಕ್ತರು ಭಾಗವಹಿಸಬಹುದು.

ಹೂರಣ: ಅಕ್ಷರ ಕಲಿತವ ಭ್ರಷ್ಟನಾಗಬಹುದು, ಸಂಸ್ಕಾರವಂತ ಭ್ರಷ್ಟನಾಗಲಾರ: ಸಿದ್ಧೇಶ್ವರ ಶ್ರೀಗಳು

ಪೊಲೀಸ್ ಇಲಾಖೆ ನೇಮಕಾತಿ ಪ್ರಕ್ರಿಯೆ; 3500 ಹುದ್ದೆ ಭರ್ತಿಗೆ ಸಿದ್ಧತೆ



ಕ್ರ.ಸಂ.	ಹುದ್ದೆ	ಪ್ರಸ್ತುತ ನೇಮಕಾತಿ ಮರು ಹಂಚಲಾಗಿರುವ ಹುದ್ದೆಗಳ ಸಂಖ್ಯೆ		
		ಕೆಕೆ	ಕಲ್ಯಾಣ ಕರ್ನಾಟಕೇತರ	ಒಟ್ಟು
01	ಡಿಟೆಕ್ಟಿವ್ ಸಬ್ ಇನ್ಸ್‌ಪೆಕ್ಟರ್ (ಡಿಎಸ್‌ಐ)	05	15	20
02	ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಎಪಿಸಿ)	275	1375	1650
03	ನಾಗರಿಕ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್)	614	–	614
04	ಸ್ಟೆ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್	532	1500	2032
05	ಪೊಲೀಸ್ ಕಾನ್ಸ್‌ಟೇಬಲ್(ಕೆಎಸ್‌ಐಎಸ್‌ಎಫ್)	340	–	340

ಮೈಸೂರು,ಸೆ.7(ಎಸ್‌ಪಿಎನ್)– ಒಳಮೀಸಲಾತಿ ಜಾರಿಗೊಂಡ ಬೆನ್ನಲ್ಲೇ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಕೆಎಸ್‌ಆರ್‌ಪಿ ಘಟಕದ 1500 ಸ್ಟೆಆರ್ ಪಿಸಿ ಹುದ್ದೆಗಳನ್ನು ಹಾಗೂ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್)– 2 ಸಾವಿರ ಹುದ್ದೆಗಳು ಸೇರಿದಂತೆ ಒಟ್ಟು 3,500 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಪೊಲೀಸ್ ಇಲಾಖೆಯಲ್ಲಿ ಖಾಲಿಯಿದ್ದ ಎಪಿಸಿ ಮತ್ತು ಸ್ಟೆಆರ್‌ಪಿಸಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಕೋರಿ ಜಿಲ್ಲಾ/ಘಟಕವಾರು ಹುದ್ದೆಗಳ ಸಂಖ್ಯಾವಾರು ವಿವರಗಳನ್ನು ಪ್ರಸ್ತಾಪಿಸಲಾಗಿತ್ತು. ಈ ಮಧ್ಯೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ಸಂಬಂಧ ಸರ್ಕಾರವು ನೀಡಿದ ನಿರ್ಬಂಧದಿಂದಾಗಿ ಈವರೆಗೂ ನೇಮಕಾತಿ ಅಧಿಸೂಚನೆ ಹೊರಡಿಸಿರಲಿಲ್ಲ. ಪ್ರಸ್ತುತ ಸರ್ಕಾರವು ಪರಿಶಿಷ್ಟ ಜಾತಿಯ ಒಳಮೀಸಲಾತಿಗಳನ್ನು ಗುರುತಿಸಿ ಪರಿಷ್ಕೃತ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶಿಸಿದೆ.

ಈ ಮಧ್ಯೆ ಕೆಲವು ಘಟಕಗಳಲ್ಲಿ ಈ ಹಿಂದೆ ಪ್ರಸ್ತಾಪಿಸಿರುವ ಸಂಖ್ಯಾಬಲಗಳಲ್ಲಿ ಬದಲಾವಣೆಯಾಗಿರುತ್ತದೆ. ಆದ್ದರಿಂದ ಸರ್ಕಾರವು ಹೊರಡಿಸಿರುವ 'ಪರಿಷ್ಕೃತ ರೋಸ್ಟರ್ ಬಿಂದು'ಗಳಡಿಯಲ್ಲಿ ಕ್ರೀಡಾ ಮೀಸಲಾತಿ ಸೇರಿದಂತೆ ಸಂಬಂಧಪಟ್ಟ ಘಟಕಗಳಿಂದ ವರ್ಗೀಕರಣವನ್ನು ಪಡೆದು ಈ ಕೆಳಗಿನ ವೃಂದದ ಹುದ್ದೆಗಳನ್ನು (ಈ ಹಿಂದಿನ ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ನೇರ ನೇಮಕಾತಿಯ ಮೂಲಕ ಭರ್ತಿಮಾಡಲು ಮುಂದಿನ ಕ್ರಮಕ್ಕಾಗಿ ಮರು ಹಂಚಿಕೆ ಮಾಡಲಾಗಿರುತ್ತದೆ ಹಾಗೂ ಸಿವಿಲ್ ಮತ್ತು ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್‌ಗಳ ಘಟಕವಾರು ಹುದ್ದೆಗಳ ಹಂಚಿಕೆಯ ವಿವರ ಇಂತಿದೆ;

ಮೈಸೂರು ನಗರದಲ್ಲಿ 62, ಚಾಮರಾಜನಗರ 17, ಕೊಡಗು 31, ಹಾಸನ 8, ಮಂಡ್ಯ ಜಿಲ್ಲೆ 30 ಸೇರಿದಂತೆ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ 275 ಕಲ್ಯಾಣ ಕರ್ನಾಟಕ, 1375 ಕಲ್ಯಾಣ ಕರ್ನಾಟಕೇತರ ಜಿಲ್ಲೆಗಳು ಸೇರಿದಂತೆ 1650 ಹುದ್ದೆಗಳು ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಕಾನ್ಸ್‌ಟೇಬಲ್ 2 ಸಾವಿರ ಹುದ್ದೆಗಳು ಸೇರಿದಂತೆ ಒಟ್ಟು 3500 ಹುದ್ದೆಗಳನ್ನು ಭರ್ತಿ ಮಾಡಲು ಡಿಜಿ ಅಂಡ್ ಐಜಿಪಿ ಡಾ.ಎಂ.ಎ.ಸಲೀಂ ಆದೇಶಿಸಿದ್ದಾರೆ.

ನೇರ ನೇಮಕಾತಿ ವೇಳೆ ಅನುಸರಿಸಬೇಕಾದ 'ಪರಿಷ್ಕೃತ ಮೀಸಲಾತಿ ರೋಸ್ಟರ್' ನಿಗದಿಪಡಿಸಲಾಗಿದ್ದು, ಪೊಲೀಸ್ ಇಲಾಖೆಯಲ್ಲಿ 3500 ಹುದ್ದೆಗಳ ಭರ್ತಿಗೆ ಸಿದ್ಧತೆಗಳು ಆರಂಭವಾಗಿವೆ. ಪೊಲೀಸ್ ಇಲಾಖೆಯಲ್ಲಿ ವಿವಿಧ ಹಂತದ ಸಿಬ್ಬಂದಿ ಒಳಗೊಂಡು ಒಟ್ಟು 1,11,330 ಮಂಜೂರಾದ ಹುದ್ದೆಗಳಿವೆ. ಆ ಪೈಕಿ 18,581 ಹುದ್ದೆಗಳು ಖಾಲಿ ಇವೆ. ಹೀಗಾಗಿ, ಕರ್ತವ್ಯದಲ್ಲಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳ ಮೇಲೆ ಒತ್ತಡ ಸೃಷ್ಟಿಯಾಗಿದೆ.

ಲಕ್ಷ ನಾಗರಿಕರಿಗೆ 196 ಪೊಲೀಸರಷ್ಟೇ

ಸ್ಪಂದನೆ: ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ (ಬಿಪಿಆರ್‌ಡಿ) ಪ್ರತಿ ವರ್ಷ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಮಾಹಿತಿಯನ್ನು ಪ್ರಕಟಿಸುತ್ತದೆ. ಆ ಪ್ರಕಾರ ರಾಜ್ಯದಲ್ಲಿ 1 ಲಕ್ಷ ಜನರಿಗೆ ಕೇವಲ 165 ಪೊಲೀಸರಷ್ಟೇ ಕೆಲಸ ಮಾಡುತ್ತಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ 1 ಲಕ್ಷ ಜನರಿಗೆ 196 ಪೊಲೀಸರಿದ್ದಾರೆ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸರಿದ್ದಾರೆ. ಕರ್ನಾಟಕದಲ್ಲೂ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೆಚ್ಚುತ್ತಿದೆ ಸಿಬ್ಬಂದಿ ಮೇಲೆ ಒತ್ತಡ: ಸಿಬ್ಬಂದಿ ಕೊರತೆ ಕಾರಣಕ್ಕೆ ವಾರದ ರಜೆಯನ್ನೂ ತ್ಯಾಗ ಮಾಡಿ, ಕೆಲಸ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಪೊಲೀಸ್ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ. ರಾಷ್ಟ್ರೀಯ ಸಾಮಾಜಿಕ ನ್ಯಾಯದಳದ ರಾಷ್ಟ್ರೀಯ ಅಧ್ಯಕ್ಷ ಆರ್.ಸ್ಕಂದ ಶರತ್ ಕೆಲವು ತಿಂಗಳ ಹಿಂದೆ ಸಲ್ಲಿಸಿದ್ದ ಮನವಿ ಆಧರಿಸಿ, ಪೊಲೀಸ್ ಸಿಬ್ಬಂದಿಗೆ ಮೂರು ಪಾಳಿಯಲ್ಲಿ ಕೆಲಸದ ಸಮಯ ನಿಗದಿಪಡಿಸುವ ಕುರಿತು ಇಲಾಖೆ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈ ಸಂಬಂಧ ನೇಮಕಾತಿ ವಿಭಾಗದ (ಪೊಲೀಸ್) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ಒಳಮೀಸಲಾತಿ ಜಾರಿಗೆ ಬಂದಿರುವ ಕಾರಣ ಮಂಜೂರಾಗಿರುವ ಹುದ್ದೆಗಳನ್ನು ಮರು ಹಂಚಿಕೆ ಮಾಡಿ, ಆ ಪಟ್ಟಿ ನೇಮಕಾತಿ ವಿಭಾಗಕ್ಕೆ ರವಾನಿಸಿದ್ದಾರೆ.

“ 28.10.2024ರಂದು ನಡೆದ ಸಂಪುಟ ಸಭೆ ತೀರ್ಮಾನದಂತೆ, 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ, ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಕಾಲಬದ್ಧವಾಗಿ ಹೊಸ ನೇಮಕಾತಿ ಅಧಿಸೂಚನೆ ಹೊರಡಿಸುವಂತೆ ರಾಜ್ಯ ಸರ್ಕಾರ ಸೂಚಿಸಿದೆ.


–ವೀರಭದ್ರ, ಅಧೀನ ಕಾರ್ಯದರ್ಶಿ ಸಿಆಸು ಇಲಾಖೆ (ಸೇವಾ ನಿಯಮಗಳು)

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸೋಮವಾರ 8 ಸೆಪ್ಟೆಂಬರ್ 2025

ಹಿಂದೂ–ಮುಸ್ಲಿಂ ಪರಸ್ಪರ ಸಿಹಿ ಹಂಚಿ ಸಹಬಾಳ್ವೆ ಸಂದೇಶ



ಮೈಸೂರಿನ ಕೆ ಆರ್ ಮೊಹಲ್ಲಾದಲ್ಲಿರುವ ಮಸೀದಿಯಲ್ಲಿ ಈದ್ ಮಿಲಾದ್ ಅಂಗವಾಗಿ ಸ್ಥಳೀಯ ಹಿಂದೂ–ಮುಸ್ಲಿಂ ಬಾಂಧವರು ಪರಸ್ಪರ ಸಿಹಿ ಹಂಚಿ ಶುಭಾಶಯ ವಿನಿಮಯ ಮಾಡಿಕೊಂಡರು. ಕಾಂಗ್ರೆಸ್ ಮುಖಂಡ ಬಿ.ಶ್ರೀನಾಥ್ ಬಾಬು, ಜಿ.ರಾಘವೇಂದ್ರ, ರವಿನಂದನ್, ದಿನೇಶ್, ಹಜ್ಗರ್ ಪಾಷ, ಗುಲ್ಜನ್ ಪಾಷಾ, ಫಾರೂಕ್ ಮತ್ತಿತರರು ಹಾಜರಿದ್ದರು.

ಒಂದು ದೇಶ– ಒಂದೇ ಚುನಾವಣೆಯಿಂದ ದೇಶಕ್ಕೆ ಒಳಿತು

ವಿಚಾರ ಸಂಕಿರಣದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ



ಬೆಂಗಳೂರು, ಸೆ.7– ಒಂದು ದೇಶ ಒಂದು ಚುನಾವಣೆಯು ಈ ಕಾಲಘಟ್ಟದಲ್ಲಿ ಅತ್ಯಗತ್ಯವಾಗಿದೆ. ಇದರಿಂದ ರಾಜ್ಯ ಮತ್ತು ದೇಶಕ್ಕೆ ಒಳಿತಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ಲೇಷಿಸಿದರು.

ಮಲ್ಲೇಶ್ವರದ ಹವ್ಯಕ ಭವನದಲ್ಲಿ ಸೆ.7ರಂದು ಏರ್ಪಡಿಸಿದ್ದ ಒಂದು ದೇಶ ಒಂದು ಚುನಾವಣೆ ಕುರಿತು ವಿದ್ಯಾರ್ಥಿ ಪ್ರಮುಖರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆಡಳಿತ ಸುಧಾರಣೆ ಜೊತೆಗೆ ಸಾವಿರಾರು ಕೋಟಿ ಹಣವನ್ನು ಉಳಿಸುವ ಕ್ರಮ ಇದು ಎಂದು ಮೆಚ್ಚುಗೆ ಸೂಚಿಸಿದರು.

ಕೆಟ್ಟ ವಿಚಾರಗಳು ಬಹಳ ಬೇಗ ಜನರನ್ನು ತಲುಪುತ್ತವೆ. ಒಳ್ಳೆಯ ವಿಚಾರ ಜನರನ್ನು ತಲುಪಲು ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ನಾವು ನಮ್ಮ ಜಿಲ್ಲೆ, ವಿಧಾನಸಭಾ ಕ್ಷೇತ್ರಗಳಲ್ಲಿ ಈ ಒಳ್ಳೆಯ ವಿಚಾರದ ಕುರಿತು ಜಾಗೃತಿ ಮೂಡಿಸಬೇಕು. ವಿವಿಧ ಕ್ಷೇತ್ರಗಳ ಸಮಾಜದ ಗಣ್ಯರ ಮಧ್ಯೆ ಚರ್ಚೆ ಮಾಡಬೇಕು. ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರ ನಡುವೆ ಚರ್ಚೆ ನಡೆಸಬೇಕು ಎಂದು ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ದಿಟ್ಟ ನಾಯಕತ್ವದಲ್ಲಿ ಭಾರತವು ಅತ್ಯಂತ ವೇಗದಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಕೆಲವೇ ಕೆಲವು ವರ್ಷಗಳಲ್ಲಿ ಭಾರತವು ಅಮೆರಿಕವನ್ನು ಹಿಂದಿಕ್ಕಿ ಜಗತ್ತಿನ ಎರಡನೇ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದು ಸಮೀಕ್ಷಾ ವರದಿ ತಿಳಿಸಿದೆ. ಇದನ್ನು ಮತ್ತು ಭಾರತದ ಏಳಿಗೆಯನ್ನು ಅಮೆರಿಕ ಸಹಿಸಿಕೊಳ್ಳದಿದ್ದರೆ ಒಪ್ಪಬಹುದು. ಆದರೆ, ಈ ದೇಶದ ಮಣ್ಣಿನ ಋಣ, ಅನ್ನದ ಋಣ ಪಡೆದ ರಾಹುಲ್ ಗಾಂಧಿ, ನಮ್ಮ ಮುಖ್ಯಮಂತ್ರಿಯವರಿಗೆ ಇದನ್ನು ಸಹಿಸಲು ಆಗುತ್ತಿಲ್ಲ ಎಂದರೆ ಇದು ಈ ದೇಶದ ದುರಂತ ಎಂದು ಟೀಕಿಸಿದರು.

ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಮಾತನಾಡಿ, ಒಂದೇ ಚುನಾವಣೆ ಕುರಿತು ಅಧ್ಯಯನ ನಡೆಸಿ ವರದಿ ಪಡೆಯಲಾಗಿದೆ. ಇದು ಅನುಷ್ಠಾನಕ್ಕೆ ಯೋಗ್ಯ ಎಂಬ ವರದಿ ಲಭಿಸಿದೆ. 370ನೇ ವಿಧಿಯನ್ನು ತಾತ್ಕಾಲಿಕ ನೆಲೆಯಲ್ಲಿ ಹೇರಲಾಗಿತ್ತು. ಮತಬ್ಯಾಂಕ್, ತುಷ್ಟೀಕರಣದ ಸಲುವಾಗಿ ಅದನ್ನು ಖಾಯಂ ಮಾಡಿದ್ದರು. ಬಿಜೆಪಿ, 370ನೇ ವಿಧಿಯನ್ನು ತನ್ನ ಆಶ್ವಾಸನೆಯಂತೆ ರದ್ದು ಮಾಡಿತು. ಇನ್ನೂ ಜಿಎಸ್‌ಟಿ ಸರಳೀಕರಣದ ಮಹತ್ವದ ನಿರ್ಧಾರವನ್ನು ಮೋದಿಜೀ ಅವರ ಮಾರ್ಗದರ್ಶನದಡಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತೆಗೆದುಕೊಂಡಿದ್ದಾರೆ ಎಂದರು.

ಈ ಮೊದಲು ದೇಶದಲ್ಲಿ ಒಂದು ರಾಷ್ಟ್ರ ಒಂದೇ ಚುನಾವಣೆ ಪದ್ಧತಿ ಇತ್ತು. ಆದರೆ, ಕಾಂಗ್ರೆಸ್ಸಿನ ಇಂದಿರಾ ಗಾಂಧಿಯವರು ಅನೇಕ ರಾಜ್ಯಗಳಲ್ಲಿ ಚುನಾಯಿತ ಸರ್ಕಾರವನ್ನು ರದ್ದು ಮಾಡಿ, ರಾಷ್ಟ್ರಪತಿ ಆಳ್ವಿಕೆ ಹೇರಿ ಈ ಗಿಟಾರ್‌ನ ತಂತಿ ಕಡಿದು ಹಾಕಿದರು ಎಂದು ಟೀಕಿಸಿದರು.

ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ ಮಾತನಾಡಿ, ವಿವಿಧತೆಯಲ್ಲಿ ಏಕತೆ ಮತ್ತು ಒಗ್ಗಟ್ಟಿನ ಸಂದೇಶವನ್ನು ನಾವು ಒಂದು ರಾಷ್ಟ್ರ–ಒಂದು ಚುನಾವಣೆ ಎಂಬ ಸುಧಾರಣೆ ಮೂಲಕ ನೀಡಲು ಸಾಧ್ಯವಿದೆ. ಇದಕ್ಕೆ ಹೆಚ್ಚಿನ ಒತ್ತು ನೀಡಬೇಕು. ಜನರಲ್ಲಿ ಜಾಗೃತಿ ಮೂಡಿಸಬೇಕು. ಇದೊಂದು ಅಭಿಯಾನ ಆಗಬೇಕಿದೆ ಎಂದು ತಿಳಿಸಿದರು.

ಅನಂತಗೀತ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಾರಿತೋಷಕ ಬಹುಮಾನ



ಮೈಸೂರಿನ ಬಿ.ಇ.ಎಂ.ಎಲ್ ಬಸವ ಸಮಿತಿಯು 34ನೇ ವಾರ್ಷಿಕ ಮಹೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಚಿತ್ರಕಲೆ ಮತ್ತು ವಚನ ವಾಚನ ಸ್ಪರ್ಧೆಯಲ್ಲಿ ಅನಂತಗೀತ ವಿದ್ಯಾಲಯದ 6ನೇ ತರಗತಿ ವಿದ್ಯಾರ್ಥಿ ತಪಸ್ವಿ ವಚನ ವಾಚನ ಮತ್ತು ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಎರಡನೇ ತರಗತಿ ಮನಿಶ್ ಚಿತ್ರಕಲೆ ಮತ್ತು ವಚನ ವಾಚನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಪಾರಿತೋಷಕ ಬಹುಮಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಶಾಲೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ನಿರ್ದೇಶಕಿ ಮಂಜುಳಾ ಕಲ್ಲೂರು, ಕಾರ್ಯದರ್ಶಿ ಗೀತಾ ಮತ್ತು ಮುಖ್ಯ ಶಿಕ್ಷಕ ಲೋಕೇಶ್ ಹೆಚ್.ಪಿ, ಶಿಕ್ಷಕರಾದ ಕಾವೇರಮ್ಮ, ಜಮುನಾ, ಉಷಾ, ವಿನುತಾ, ಪ್ರೇಮ ಅಭಿನಂದಿಸಿದ್ದಾರೆ.

ಸೇತುವೆಯಿಂದ ಕ್ಷಿಪ್ರಾ ನದಿಗೆ ಬಿದ್ದ ಕಾರು, ಮೂವರು ಪೊಲೀಸರು ನೀರು ಪಾಲು

ಭೋಪಾಲ್: ಮಧ್ಯಪ್ರದೇಶದ ಉಜ್ಜಯಿನಿ ಜಿಲ್ಲೆಯಲ್ಲಿ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ, ಸಬ್ ಇನ್ಸ್‌ಪೆಕ್ಟರ್ ಮತ್ತು ಮಹಿಳಾ ಕಾನ್‌ಸ್ಟೆಬಲ್ ಅನ್ನು ಕರೆದೊಯ್ಯುತ್ತಿದ್ದ ಕಾರು ಸೇತುವೆಯಿಂದ ಕೆಳಗೆ ಬಿದ್ದು ಕ್ಷಿಪ್ರಾ ನದಿಯಲ್ಲಿ ಕೊಚ್ಚಿಹೋದ ಘಟನೆ ನಡೆದಿದೆ.

ಭಾನುವಾರ ಬೆಳಗ್ಗೆ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಅಶೋಕ್ ಶರ್ಮಾ ಅವರ ಮೃತದೇಹವನ್ನು ನದಿಯಿಂದ ಹೊರತೆಗೆಯಲಾಗಿದ್ದು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಇಆರ್‌ಎಫ್ ತಂಡಗಳ ಶೋಧ ಕಾರ್ಯಾಚರಣೆ ಚುರುಕುಗೊಂಡಿದ್ದರೂ, ಇತರ ಇಬ್ಬರು ಪೊಲೀಸರು ಇನ್ನೂ ನದಿಯಲ್ಲಿ ನಾಪತ್ತೆಯಾಗಿದ್ದಾರೆ.

14 ವರ್ಷದ ಬಾಲಕಿಯ ನಾಪತ್ತೆ ಪ್ರಕರಣದ ತನಿಖೆಗಾಗಿ ಇವರು ಉಜ್ಜಯಿನಿ ನಗರದಿಂದ ಚಿಂತಾಮನ್‌ಗೆ ತೆರಳುತ್ತಿದ್ದಾಗ ರಾತ್ರಿ 8 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಮೂವರು ಪೊಲೀಸರಿದ್ದ ಕಾರನ್ನು ಮಹಿಳಾ ಕಾನ್‌ಸ್ಟೆಬಲ್ ಆರ್ತಿ ಪಾಲ್ ಚಲಾಯಿಸುತ್ತಿದ್ದರು ಎನಿಸುತ್ತದೆ. ಇದ್ದಕ್ಕಿದ್ದಂತೆ ಸಮತೋಲನ ತಪ್ಪಿ, ಬಡಾ ಪುಲ್ ಸೇತುವೆಯಿಂದ ನದಿಗೆ ಬಿದ್ದಿದ್ದಾರೆ ಎಂದು ಉಜ್ಜಯಿನಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಶರ್ಮಾ ತಿಳಿಸಿದ್ದಾರೆ.

ಈರೇಗೌಡ ನಿಧನ



ಹುಣಸೂರು, ಸೆ.7– ಹುಣಸೂರು ತಾಲೂಕು ಮೂಡಲಕೊಪ್ಪಲು ಗ್ರಾಮದ ಈರೇಗೌಡ(84) ಅವರು ಶನಿವಾರ ನಿಧನರಾದರು.

ಇವರು ನಾಟಿ ಔಷಧಿಯಿಂದ ಜಾನುವಾರುಗಳನ್ನು ಗುಣಪಡಿಸುವ ಮೂಲಕ ಸುತ್ತಮುತ್ತ ಹಳ್ಳಿಗಳಲ್ಲಿ ಪ್ರಸಿದ್ಧರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟ

ಮದ್ದೂರಲ್ಲಿ ಪೊಲೀಸರು ಸೇರಿ 10ಕ್ಕೂ ಅಧಿಕ ಮಂದಿಗೆ ಗಾಯ




ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿದ್ದನ್ನು ವಿರೋಧಿಸಿ ಯುವಕರು ಪ್ರತಿಭಟನೆ ನಡೆಸುತ್ತಿರುವುದು (ಎಡಚಿತ್ರ)ಮಹಿಳೆಯರು ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಮದ್ದೂರು,ಸೆ.7– ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಕಿಡಿಗೇಡಿಗಳ ಗುಂಪು ವಿದ್ಯುತ್ ಕಡಿತಗೊಳಿಸಿ ಕಲ್ಲು ತೂರಾಟ ನಡೆಸಿದ್ದಕ್ಕೆ ಪ್ರತಿಯಾಗಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಯುವಕರ ಗುಂಪು ಕಲ್ಲು ತೂರಾಟ ನಡೆಸಿದ ಪರಿಣಾಮ ಪೊಲೀಸರು ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಮದ್ದೂರಿನಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ.

ಪಟ್ಟಣದ ರಾಮ್ ರಹಿಮ್ ನಗರ 6ನೇ ಕ್ರಾಸ್‌ನ ಯುವಕರು ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದರು. ಸಂಜೆ ವಿಸರ್ಜನೆ ಮಾಡಲು ಮೆರವಣಿಗೆ ಮೂಲಕ ಎರಡು ಡಿಜೆ ಹಾಕಿಕೊಂಡು ನೃತ್ಯ ಮಾಡುತ್ತಾ ಪಟ್ಟಣದ ಮಸ್ಜಿದ್ ಹುಸೇನ್ ಫಿ ಮಸೀದಿ ಸಣ್ಣ ಚೌಕದ ಬಳಿ ಬರುತ್ತಿದ್ದಂತೆ ಮೆರವಣಿಗೆ ಮೇಲೆ ಗುಂಪು ಕಲ್ಲುಗಳನ್ನು ತೂರಿದ್ದಲ್ಲದೆ, ಕಬ್ಬಿಣದ ರಾಡ್‌ನಿಂದ ಮೆರವಣಿಗೆಯಲ್ಲಿ ಬಂದವರ ಮೇಲೆ ಹಲ್ಲೆ ನಡೆಸಿದೆ.

ವಿಗ್ರಹದ ಮೇಲೆ ಕಲ್ಲು ತೂರಾಟ ನಡೆಸಿದ್ದಕ್ಕೆ ಕೆರಳಿದ ಯುವಕರು ಪ್ರತಿಯಾಗಿ ಕಿಡಿಗೇಡಿಗಳ ಗುಂಪಿನ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಇದರಿಂದ ಪೊಲೀಸ್ ಸಿಬ್ಬಂದಿ, ಮಹಿಳೆಯರು ಸೇರಿ ಎರಡು ಕೋಮಿನ 10ಕ್ಕೂ ಹೆಚ್ಚು ಯುವಕರು ಗಾಯಗೊಂಡರು. ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಘಟನೆ ನಡೆಯುತ್ತಿದ್ದಂತೆಯೇ ಸ್ಥಳದಲ್ಲಿದ್ದ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ಕರೆಸಿಕೊಂಡು ಪರಿಸ್ಥಿತಿ ಯನ್ನು ತಹಬದಿಗೆ ತಂದರು. ಬಳಿಕ ಮೆರವಣಿಗೆ ಸ್ಥಗಿತಗೊಳಿಸಿ ಮೂರ್ತಿಯನ್ನು ತರಾತುರಿಯಲ್ಲಿ ಪೊಲೀಸರ ಸಮ್ಮುಖದಲ್ಲಿಯೇ ವಿಸರ್ಜನೆ ಮಾಡಿದರು.

ಹಿಂದೂ ಯುವಕರಿಂದ ಪ್ರತಿಭಟನೆ: ವಿಸರ್ಜನೆ ನಂತರ ಹಿಂದೂ ಯುವಕರು ಪಟ್ಟಣದ ಕೆಮ್ಮಣ್ಣು ನಾಲೆ ವೃತ್ತದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ದಕ್ಷಿಣ ವಲಯ ಐಜಿಪಿ ಡಾ. ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಆಯಾ ಕಟ್ಟಿನ ಸ್ಥಳಗಳಲ್ಲಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರೂ ಆತಂಕದ ವಾತಾವರಣ ಮನೆ ಮಾಡಿದೆ. ಕಳೆದ ವರ್ಷ ನಾಗಮಂಗಲ ಪಟ್ಟಣದಲ್ಲಿ ಇಂಥದ್ದೇ ಘಟನೆ ನಡೆದಿತ್ತು ಆದರೆ ಈ ಬಾರಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸರಣಿ ಶಾಂತಿಸಭೆಗಳನ್ನು ನಡೆಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸ್ವತಃ ಎಸ್ಪಿ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದರು. ಮುಂಜಾಗ್ರತೆ ಕ್ರಮವಾಗಿ ಇಷ್ಟೆಲ್ಲ ಕ್ರಮ ಕೈಗೊಂಡಿದ್ದರೂ ಜಿಲ್ಲೆಯಲ್ಲಿ ಮತ್ತೆ ಇಂತಹ ಘಟನೆ ಮರುಕಳಿಸಿರುವುದು ವಿಷಾದಕರ ಸಂಗತಿ.

ರಾಜ್ಯದಲ್ಲಿ ಒಕ್ಕಲಿಗ ಸಮಾಜ ಒಂದಾಗಿ ಧ್ವನಿ ಎತ್ತುವ ಕೆಲಸ ಮಾಡಲಿ



ಶ್ರೀರಂಗಪಟ್ಟಣದ ಒಕ್ಕಲಿಗರ ನೂತನ ಅಧ್ಯಕ್ಷ ಇಂದ್ರಕುಮಾರ್ ಅವರನ್ನು ಜಿಲಾಧ್ಯಕ್ಷ ಗೌಡಯ್ಯನ ದೊಡ್ಡಿ ತಿಮ್ಮೇಗೌಡ ಅವರು ಅಭಿನಂಧಿಸಿದರು.

ಶ್ರೀರಂಗಪಟ್ಟಣ, ಸೆ.7– ರಾಜ್ಯದಲ್ಲಿ ಒಕ್ಕಲಿಗ ಸಮಾಜ ಕುಸಿತಕ್ಕೆ ಒಳಗಾಗುತ್ತಿದ್ದು, ಸಮಾಜದ ಜನರು ಒಗ್ಗೂಡಬೇಕೆಂದು ಮಂಡ್ಯ ಒಕ್ಕಲಿಗ ಸಂಘದ ಅಧ್ಯಕ್ಷ ಗೌಡಯ್ಯನ ದೊಡ್ಡಿ ತಿಮ್ಮೇಗೌಡ ತಿಳಿಸಿದ್ದಾರೆ.

ಮಂಡ್ಯದ ಒಕ್ಕಲಿಗ ಸಮಾಜಗಳನ್ನು ಒಡೆದು ಆಳುವ ಯತ್ನಗಳು ನಡೆಯುತ್ತಿದ್ದು, ನಮ್ಮ ಸಮಾಜವನ್ನು ತುಳಿಯುವ ಪ್ರಯತ್ನಗಳು ನಡೆಯುತ್ತಿವೆ. ಈ ಹೊತ್ತಿನಲ್ಲಿ ಸಮಾಜದ ಜನರು ಒಂದುಗೂಡಿ ಧ್ವನಿ ಎತ್ತುವ ಕೆಲಸ ಮಾಡಬೇಕು ಎಂದರು. ಇವತ್ತಿನ ದಿನದಲ್ಲಿ ಕೇಳಿ ಪಡೆದುಕೊಳ್ಳುವ ಕಾಲ ಬಂದಿದ್ದು, ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಬೇಕೆಂದು ಎಂದು ಪಟ್ಟಣದಲ್ಲಿ ನಡೆದ ತಾಲೂಕು ಒಕ್ಕಲಿಗ ಸಭೆಯಲ್ಲಿ ಹೇಳಿದರು.

ಜಿಲ್ಲೆಯ ಒಕ್ಕಲಿಗ ಸಂಘಗಳ ಮೂಲಕ ಸಮಾಜದ ಮಕ್ಕಳಿಗೆ ವಸತಿ ನಿಲಯ ಹಾಗೂ ತಾಲೂಕು ಮಟ್ಟದಲ್ಲಿ ಒಕ್ಕಲಿಗ ಭವನಗಳನ್ನು ನಿರ್ಮಿಸಬೇಕು ಇದಕ್ಕೆ ಸೂಕ್ತ ಸ್ಥಳದಲ್ಲಿ ಆಯಾ ತಾಲೂಕಿನಲ್ಲಿ ಒಕ್ಕಲಿಗ ಸಮಾಜಗಳಿಗೆ ನಿವೇಶನಗಳನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಸರ್ವಾನುಮತದಿಂದ ಎಂ.ಶೆಟ್ಟಹಳ್ಳಿ ಗ್ರಾಮದ ಇಂದ್ರಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು.

ಒಕ್ಕಲಿಗರ ಸಂಘದ ನಗರಾಧ್ಯಕ್ಷ ಶ್ರೀಧರ್, ಸ್ವಾಭಿಮಾನಿ ಒಕ್ಕಲಿಗ ಸಂಘದ ಅಧ್ಯಕ್ಷ ದೇವರಾಜು, ಸಿ. ಸ್ವಾಮಿಗೌಡ, ಲಕ್ಷ್ಮಿ ನಾರಾಯಣ, ಬೆಳಗೊಳ ಸುನೀಲ್, ಸಿದ್ದರಾಜು, ಟಿ.ಎಂ. ಹೊಸೂರು ಮಹದೇವು, ರುಕ್ಮಾಂಗದ, ಚಂದನ್, ಶಿವನಂಜು, ರಕೇಶ್, ಮಹೇಶ್, ಗಣಂಗೂರು ಸತೀಶ್, ಕೆಜೆ ಲೋಕೇಶ್, ಸೇರಿದಂತೆ ವಿವಿಧ ಗ್ರಾಮಗಳಿಂದ ನೂರಾರು ಮಂದಿ ಒಕ್ಕಲಿಗ ಮುಖಂಡರು ನೂತನ ಅಧ್ಯಕ್ಷರನ್ನು ಅಭಿನಂಧಿಸಿದರು.

ಅಮೀನರಿಗೆ ಖಾರದಪುಡಿ ಎರಚಿದ ಆರೋಪಿ ಪತ್ನಿ

ಕಿಕ್ಕೇರಿ, ಸೆ.7– ನ್ಯಾಯಾಲಯದ ನೋಟಿಸ್ ನೀಡಲು ಮನೆಗೆ ಬಂದ ಅಮಿನರಿಗೆ ಆರೋಪಿಯ ಪತ್ನಿ ಖಾರದ ಪುಡಿ ಎರಚಿದ ಘಟನೆ ಕಿಕ್ಕೇರಿ ಹೋಬಳಿಯಲ್ಲಿ ಸಂಭವಿಸಿದೆ.

ಕೆ.ಆರ್.ಪೇಟೆ ನ್ಯಾಯಾಲಯದ ಅಮೀನ ಶಂಕರೇಗೌಡ ಎಂಬವರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟೀಸ್ ನೀಡಲು ಹೋದಾಗ ಈ ಸಂಗತಿ ನಡೆದಿದೆ.

ಚಿಕ್ಕಮಗಳೂರಿನಲ್ಲಿ ನಡೆಯುತ್ತಿದ್ದ ಅಪಘಾತ ಪ್ರಕರಣದ ಮೊಕದ್ದಮೆ ಈಗ ಕೆ.ಆರ್.ಪೇಟೆ ನ್ಯಾಯಾಲಯಕ್ಕೆ ವರ್ಗಾವಣೆಯಾಗಿತ್ತು. ಈ ಮೊಕದ್ದಮೆಯಲ್ಲಿ ಪ್ರತಿವಾದಿಯಾಗಿದ್ದ ಕಾಳೇನಹಳ್ಳಿಯ ಚಿಕ್ಕಈರೇಗೌಡನ ಮನೆಗೆ ನೋಟಿಸ್ ನೀಡಲು ವಾಹನ ಮಾಲೀಕನ ಜೊತೆಯಲ್ಲಿ ನೇರವಾಗಿ ಗ್ರಾಮಕ್ಕೆ ತೆರಳಿದ್ದಾರೆ. ನೋಟೀಸ್ ನೀಡಲು ಮನೆ ಬಳಿ ಹೋದಾಗ ಚಿಕ್ಕ ಈರೇಗೌಡನ ಪತ್ನಿ ಸಾಕಮ್ಮ ಅಮೀನ ಶಂಕರೇಗೌಡರ ಕಣ್ಣಿಗೆ ಖಾರದ ಪುಡಿ ಎರಚಿ ಓಡಿ ಹೋಗಿ ದ್ದಾರೆ ಎನ್ನಲಾಗಿದೆ. ಇದು ಮೊಬೈಲ್‌ನಲ್ಲಿ ಸೆರೆ ಆಗಿ ವೈರಲ್ ಕೂಡ ಆಗಿತ್ತು. ಪೊಲೀಸರಿಗೆ ಗಮನಕ್ಕೆ ತಾರದೆ ಅಮೀನ ಮನೆಗೆ ನೋಟಿಸ್ ನೀಡಲು ತೆರಳಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಕಿಕ್ಕೇರಿ ಪೊಲೀಸರು ಭಾನುವಾರ ದೂರು ದಾಖಲಿ ಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ

ಭಾರತೀನಗರ, ಸೆ.7– ಸಮೀಪದ ಯಡಗನಹಳ್ಳಿ ಗ್ರಾಮದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ನಡೆಸಿರುವ ಘಟನೆಯೊಂದು ನಡೆದಿದೆ.

ಗ್ರಾಮದ ಸಿದ್ದರಾಮು (65) ಎಂಬಾತನೇ ಅತ್ಯಾಚಾರ ನಡೆಸಿದವನೆನ್ನಲಾಗಿದ್ದು, ಕೂಲಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ 4ನೇ ತರಗತಿ ಓದುತ್ತಿರುವ ತಮ್ಮ ಮಗಳಿಗೆ ಒಬ್ಬಟ್ಟು ಕೊಡುವುದಾಗಿ ಪುಸಲಾಯಿಸಿ ಮನೆಗೆ ಕರೆದೊಯ್ದು ಅತ್ಯಾಚಾರ ನಡೆಸಿದ್ದಾನೆ ಎಂದು ಗ್ರಾಮದ ದೊಡ್ಡಕುಳ್ಳಯ್ಯನ ಮಗ ರಾಜು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ

ಕೆಲಸ ಮುಗಿಸಿ ಮನೆಗೆ ಬಂದಾಗ ಮಗಳು ಅಳುತ್ತಿದ್ದು, ಅಳುತ್ತಿದ್ದ ಬಗ್ಗೆ ವಿಚಾರಿಸಿದಾಗ ನಡೆದ ಸಂಗತಿಯನ್ನು ತಿಳಿಸಿದ್ದಾಳೆ. ಹಾಗಾಗಿ ಸಿದ್ದರಾಮು ಮೇಲೆ ಕ್ರಮ ಕೈಗೊಳ್ಳಬೇಕೆಂದು ತಾಯಿ ಪೊಲೀಸರಿಗೆ ಹೇಳಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಆರೋಪಿಯ ಶೋಧನೆಯಲ್ಲಿ ತೊಡಗಿದ್ದಾರೆ

ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ

ಪಾಂಡವಪುರ: ಕೇಂದ್ರ ಸರ್ಕಾರದ ಆದೇಶದಂತೆ ಬೀದಿ ನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಆಸಕ್ತ ಗುತ್ತಿಗೆದಾರರು, ಏಜೆನ್ಸಿಯವರು ಅಥವಾ ಎನ್‌ಜಿಒಗಳು ಸೆ.15 ಮಧ್ಯಾಹ್ನ 2 ಗಂಟೆಯೊಳಗೆ ಟೆಂಡರ್‌ನಲ್ಲಿ ಭಾಗವಹಿಸಬಹುದೆಂದು ಪುರಸಭೆ ಮುಖ್ಯಾಧಿಕಾರಿ ಸತೀಶ್‌ಕುಮಾರ್ ತಿಳಿಸಿದರು.

ಸೆ.13, ಪಾಂಡವಪುರದಲ್ಲಿ ಸ್ವರಾಜ್ ಉತ್ಸವ

ಹಳ್ಳಿಗಳ ಸಮಗ್ರ ಬೆಳವಣಿಗೆಗಾಗಿ ವಿಶೇಷ ಕಾರ್ಯಕ್ರಮ



ಶಾಸಕ ದರ್ಶನ್ ಪುಟ್ಟಣ್ಣಯ್ಯ

ಮಂಡ್ಯ, ಸೆ.7– ಮಹಾತ್ಮ ಗಾಂಧೀಜಿ ಅವರ ಸ್ವರಾಜ್ಯದ ಚಳುವಳಿಯಂತೆ ಸ್ವರಾಜ್ ಉತ್ಸವವನ್ನು ಸೆ.13ರಂದು ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ.

ಹಳ್ಳಿಗಳ ಪ್ರಗತಿ, ಸಮಗ್ರ ಬೆಳವಣಿಗೆಗಾಗಿ ವಿಶೇಷ ಕಾರ್ಯಕ್ರಮ ಆಯೋಜನೆ ಮಾಡಿದ್ದು, ಸ್ವರಾಜ್ ಉತ್ಸವದಲ್ಲಿ 11 ವಿಷಯಗಳ ಕುರಿತು ಪ್ರದರ್ಶನ, ಸಂವಾದ ಹಾಗೂ ಪ್ರಾತ್ಯಕ್ಷಿಕೆ ನಡೆಯಲಿದೆ. ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಡೆಯಲಿರುವ ಉತ್ಸವದಲ್ಲಿ 30ಕ್ಕೂ ಹೆಚ್ಚು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸರ್ಕಾರೇತರ ಸಂಸ್ಥೆಗಳು ಭಾಗಿಯಾಗಲಿದ್ದು, ರೈತ ನಾಯಕ ಮಾಜಿ ಶಾಸಕ ದಿ.ಪುಟ್ಟಣ್ಣಯ್ಯ ಫೌಂಡೇಷನ್ ಮತ್ತು ರಾಜ್ಯ ರೈತ ಸಂಘದಿಂದ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಸ್ವರಾಜ್ ಉತ್ಸವದಲ್ಲಿ ಕೃಷಿ, ಆರೋಗ್ಯ, ಆರ್ಥಿಕ ಸ್ವಾವಲಂಬನೆ, ಯುವಜನ ಅಭಿವೃದ್ಧಿ, ತಂತ್ರಜ್ಞಾನ, ಉದ್ಯಮಶೀಲತೆ, ಶಿಕ್ಷಣ ಮುಂತಾದ ವಿಷಯಗಳ ಕುರಿತು ನಡೆಯಲಿರುವ ಪ್ರದರ್ಶನ, ಪ್ರಾತ್ಯಕ್ಷಿಕೆ ನಡೆಯಲಿದ್ದು, ಜನರಲ್ಲಿ ಜಾಗೃತಿ ಹಾಗೂ ಅರಿವು ಮೂಡಿಸುವ ಸಲುವಾಗಿ ಆಯೋಜಿಸಲಾಗಿದೆ. ಮೇಲುಕೋಟೆ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಸೌಂದರ್ಯ ಉಳಿಸಿ ಪ್ರವಾಸೋದ್ಯಮ ಉತ್ತೇಜಿಸುವ ನಿಟ್ಟಿನಲ್ಲೂ ಸಹ ಉತ್ಸವವನ್ನು ಕೈಗೆತ್ತಿಕೊಂಡಿದ್ದು, ನಮ್ಮ ಹಳ್ಳಿ ನಮ್ಮ ಹೆಮ್ಮೆ, ನಮ್ಮ ಬದುಕು ಸ್ವರಾಜ್ಯ, ಗ್ರಾಮದೆಡೆಗೆ ಎಂಬ ಘೋಷಣೆಯಡಿ ಕಾರ್ಯಕ್ರಮ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಸದುಪಯೋಗ ಪಡಿಸಿಕೊಳ್ಳಲು ಮನವಿ ಮಾಡಿದರು.

ಈ ಸಹಯೋಗದ ಮೂಲ ಉದ್ದೇಶ ಸ್ವರಾಜ್ ಎಂಬ ಆಲೋಚನೆಯ ಸುತ್ತ ಅಂದರೆ ಬಲಿಷ್ಠ ಸ್ಥಳೀಯ ಆಡಳಿತ, ಸ್ವಾವಲಂಬಿ ಹಾಗೂ ಶಾಶ್ವತ ವಲಯ ಆಧಾರಿತ ಆರ್ಥಿಕತೆ, ಸಾಮಾಜಿಕ ಸಮಾನತೆ ಮತ್ತು ಪ್ರದೇಶದ ಪರಿಸರ ಸಂಪನ್ಮೂಲಗಳ ಪುನರುಜ್ಜೀವನಕ್ಕೆ ಆದ್ಯತೆ ನೀಡುವುದಾಗಿದೆ ಮೇಲುಕೋಟೆ ಐತಿಹಾಸಿಕ ಶಿಲ್ಪಕಲಾ ಧಾರ್ಮಿಕ ಚಾರಿತ್ರ್ಯವುಳ್ಳ ಪ್ರದೇಶವಾಗಿದೆ. ಇದರ ಪಾವಿತ್ರತೆಯನ್ನು ಸೌಂದರ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ಮೇಲುಕೋಟೆ ಹಾಗೂ ಸುತ್ತಮುತ್ತಲಿನ ಬೆಟ್ಟಗಾಡುಗಳ ಪ್ರವಾಸೋದ್ಯಮವನ್ನು ಆಕರ್ಷಿಸಬೇಕಾಗಿದೆ.

ಈ ಸ್ವರಾಜ್ ಉತ್ಸವವು ಮೇಲುಕೋಟೆ ಅಭಿವೃದ್ಧಿ ಮತ್ತು ಪ್ರಗತಿಗೆ ಒಗ್ಗಟ್ಟಿನ ದೃಷ್ಟಿಕೋನವನ್ನು ರೂಪಿಸುವುದಾಗಿದೆ. ಇದು ಸಮುದಾಯದ ಆಸೆ ಆಕಾಂಕ್ಷೆಗಳನ್ನು ಆಲಿಸುವುದಕ್ಕೂ ಅದರ ಶಕ್ತಿಗಳನ್ನು ಒತ್ತಿ ತೋರಿಸುವುದಕ್ಕೂ ಭವಿಷ್ಯದ ಸಾಮೂಹಿಕ ದೃಷ್ಟಿಕೋನವನ್ನು ರೂಪಿಸುವುದಕ್ಕೂ ವಿಶೇಷವಾಗಿ ನಿರ್ಮಿತವಾದ ಒಂದು ಬಹುಮುಖ, ಬಹುದೊಡ್ಡ ಜನರಿಗಾಗಿಯೇ ನಿರ್ಮಿತವಾಗಿರುವ ವೇದಿಕೆಯಾಗಿದೆ ಎಂದು ತಿಳಿಸಿದರು.

ಒಂದನೇ ಪುಟದಿಂದ

ವೀರಶೈವ- ಲಿಂಗಾಯತ ಎಂದೇ ಬರೆಸಿ

ಎಲ್ಲಾ ಜಾತಿ, ಸಮುದಾಯಕ್ಕೂ ನ್ಯಾಯ ದೊರಕುವ ರೀತಿಯಲ್ಲಿ ಸಮೀಕ್ಷೆಯನ್ನು ನಡೆಸುವಂತೆ ಸಭಾ ಸರ್ಕಾರಕ್ಕೆ ಮನವಿ ಮಾಡಿದೆ. ಅದೇ ರೀತಿ ಎಲ್ಲಾ ಪರಮ ಪೂಜ್ಯ ಸ್ವಾಮೀಜಿಗಳಿಗೂ ಈ ಸಂಬಂಧ ಏಕಮತ್ಯದಿಂದ ಮತ್ತು ಒಕ್ಕೊರಲಿನಿಂದ ಸಮೀಕ್ಷೆಯಲ್ಲಿ ನೈಜವಾದ ಜಾತಿ ಹೆಸರು ಬರೆಸುವಂತೆ ಸಭಾ ಮನವಿ ಮಾಡಿದೆ ಎಂದು ತಿಳಿಸಿದರು.

ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಮಾತನಾಡಿ, ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿ ಗತಿಯ ಸಮೀಕ್ಷೆ ಆಧಾರದಲ್ಲಿ ಸಮುದಾಯದ ಹಿಂದುಳಿದಿರುವಿಕೆ ಗುರುತಿಸಿ ಅವರಿಗೆ ಸೌಲಭ್ಯ ಕಲ್ಪಿಸುತ್ತದೆ. ಈ ಹಿಂದಿನ ಸಮೀಕ್ಷೆಗಳಲ್ಲಿ ವೀರಶೈವ ಮತ್ತು ಲಿಂಗಾಯತರನ್ನು ಒಂದು ಜಾತಿ ಎಂದು ಪರಿಗಣಿಸಲಾಗಿದೆ. ಪ್ರತ್ಯೇಕ ಧರ್ಮದ ಮಾನ್ಯತೆಯನ್ನು ಅಧಿಕೃತವಾಗಿ ನೀಡಿಲ್ಲ. ಅದನ್ನು ಪರಿಗಣಿಸುವ ಅಗತ್ಯವಿದೆ ಎಂದರು.

ನಮ್ಮ ಸಮಾಜದಲ್ಲಿ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ಅತ್ಯಂತ ಹಿಂದುಳಿದವರಿದ್ದಾರೆ. ಹೀಗಾಗಿ ಪಾರದರ್ಶಕವಾಗಿ ವಿವಿಧ ವೃತ್ತಿಯನ್ನು ಮಾಡುವ ಬಡವ ಮತ್ತು ಕಡು ಬಡವರಿಗೆ ಪ್ರಾಮಾಣಿಕವಾಗಿ ಅಂಕ ನೀಡಿ, ಸೂಕ್ತ ಪ್ರವರ್ಗಕ್ಕೆ ಸೇರಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ಕಾರ್ಯದರ್ಶಿ ರೇಣುಕ ಪ್ರಸನ್ನ ಮತ್ತು ವೀಣಾ ಕಾಶೆಪ್ಪನವರ್ ಪಾಲ್ಗೊಂಡಿದ್ದರು.

ಕ್ರೈಸ್ತ ಧರ್ಮಕ್ಕೆ ಮತಾಂತರ ಹುನ್ನಾರ

ನೀಡಬೇಕಾದರೆ ಕುಲಶಾಸ್ತ್ರ ಅಧ್ಯಯನ ಸೇರಿ ದಂತೆ ಇತರೆ ನಿಯಮ ಪಾಲನೆ ಮಾಡಬೇಕು. ಆ ಜಾತಿಯ ಸಾಮಾಜಿಕ ಸ್ಥಿತಿಗತಿ ಅರಿಯಬೇಕು. ಆದರೆ ಈ ಯಾವುದೇ ನಿಯಮ ಪಾಲನೆ ಮಾಡದ ಸರ್ಕಾರ ಹಿಂದೂ ಧರ್ಮದ ಬೇರನ್ನು ಕಿತ್ತೆಸೆಯುವ ಕುತಂತ್ರ ರೂಪಿಸಿದೆ ಎಂದು ಆಪಾದಿಸಿದರು.

ಕ್ರೈಸ್ತ ಹಣೆಪಟ್ಟಿ ಕಟ್ಟಿ ಹಿಂದೂ ಧರ್ಮಿಯ ರನ್ನು ಮತಾಂತರ ಮಾಡುವ ಷಡ್ಯಂತ್ರವನ್ನು ಸರ್ಕಾರ ಕೈ ಬಿಡಬೇಕು. ಇಲ್ಲದಿದ್ದರೆ ಮಠಾಧೀಶರ ಬೆಂಬಲ ಪಡೆದು ರಾಜ್ಯಾದ್ಯಂತ ತೀವ್ರ ರೀತಿಯ ಹೋರಾಟ ಮಾಡುತ್ತೇವೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸದಿದ್ದರೆ ನಮ್ಮ ಹೋರಾಟ ಕ್ರಾಂತಿಯ ಸ್ವರೂಪ ಪಡೆಯಬಹುದು ಎಂದು ರಘು ಕೌಟಿಲ್ಯ ಸರ್ಕಾರವನ್ನು ಎಚ್ಚರಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಅವರು, ರಾಜ್ಯ ಸರ್ಕಾರ ಹಾಗೂ ರಾಜ್ಯ ಹಿಂದುಳಿದ ಶಾಶ್ವತ ಆಯೋಗ ಜಾತಿಗಳನ್ನು ಒಡೆದು ಆಳುವ ನೀತಿ ಅನುಸರಿಸಿದೆ. ಹಿಂದೂ ಧರ್ಮದ ಜಾತಿಗಳನ್ನು ವಿಂಗಡಣೆ ಮಾಡಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಸುತ್ತಿದೆ ಎಂದು ಆಪಾದಿಸಿದರು.

ವಿವಿಧ ಸಮುದಾಯದ ಮುಖಂಡರಾದ ಪ್ರಶಾಂತ್ ಗೌಡ, ಯಶಸ್ವಿ ಸೋಮಶೇಖರ್, ಚನ್ನಕೇಶವ ಶೆಟ್ಟಿ, ವಿದ್ಯಾಸಾಗರ ಕದಂಬ, ಲೋಕೇಶ್ ಮಾದಶೆಟ್ಟಿ, ಪ್ರವೀಣ ಶೆಟ್ಟಿ ಮಹೇಂದ್ರ ಪ್ರಕಾಶ್, ಸತೀಶ್‌ಕುಮಾರ್, ರಾಜು, ಮಂಜುನಾಥ್, ಪುರುಷೋತ್ತಮ, ಜಗ ದೀಶ್ ಮಣಿರತ್ನಂ, ಎಸ್.ಎಸ್. ನಟರಾಜ್, ಸಂತೋಷ್ ಕುಮಾರ್, ಕೆ. ಹರೀಶ್, ಯಶವಂತ್ ಸಿಂಗ್, ಮಹೇಶ್ ರಾಜೇ ಅರಸ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಆರತಿ ಕೃಷ್ಣ, ಜಕ್ಕಪ್ಪನವರ್ ನೇಮಕ

ಎಫ್.ಎಚ್.ಜಕ್ಕಪ್ಪನವರ್ ಅವರನ್ನು ನಾಮನಿರ್ದೇಶನ ಮಾಡಿ ಸರ್ಕಾರ ಭಾನುವಾರ ಅಧಿಕೃತ ಆದೇಶ ಹೊರಡಿಸಿದೆ. ಏಳು ತಿಂಗಳ ಹಗ್ಗ ಜಗ್ಗಾಟದ ಬಳಿಕ ಕಾಂಗ್ರೆಸ್ ಈ ನಾಲ್ವರನ್ನು ವಿಧಾನ ಪರಿ ಷತ್‌ಗೆ ನಾಮನಿರ್ದೇಶನ ಮಾಡಿದೆ. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾ ರಣೆಗಳ ಸಚಿವಾಲಯ ಅಧಿಕೃತ ಪ್ರಕಟಣೆ ಹೊರಡಿಸಿದೆ. ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್‌ಬಾಬು, ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಅಧ್ಯಕ್ಷೆ ಆರತಿ ಕೃಷ್ಣ, ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯ ದರ್ಶಿ ಜಕ್ಕಪ್ಪನವರ್, ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರ ಆಪ್ತರೂ ಆದ ಮೈಸೂರಿನ ಪತ್ರಕರ್ತ ಶಿವಕುಮಾರ್ ಅವರಿಗೆ ಅವಕಾಶ ಒಲಿದಿದೆ. ಸರ್ಕಾರದಿಂದ ನಾಮನಿರ್ದೇಶನಗೊಂಡಿದ್ದ ಕಾಂಗ್ರೆಸ್‌ ಯು.ಬಿ. ವೆಂಕಟೇಶ್ ಮತ್ತು ಪ್ರಕಾಶ್ ಕೆ. ರಾಥೋಡ್ ಅವರ ಅವಧಿ 2024ರ ಅಕ್ಟೋಬರ್‌ನಲ್ಲಿ ಮತ್ತು ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಅವಧಿ 2025ರ ಜನವರಿ ವೇಳೆಗೆ ಮುಕ್ತಾಯಗೊಂಡಿತ್ತು. ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಸಿ.ಪಿ. ಯೋಗೇಶ್ವರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಸ್ಥಾನಗಳು ಖಾಲಿಯಾಗಿದ್ದವು.

ಜಾತಿವಾರು ಲೆಕ್ಕಾಚಾರ: ನಾಮನಿರ್ದೇಶನಗೊಂಡಿರುವ ನಾಲ್ವರ ಪೈಕಿ ಆರತಿ ಕೃಷ್ಣ ಅವರು ಒಕ್ಕಲಿಗ, ರಮೇಶ್ ಬಾಬು ಅವರು ಹಿಂದುಳಿದ ವರ್ಗ, ಜಕ್ಕಪ್ಪನವರ್ ಹಾಗೂ ಶಿವಕುಮಾರ್ ಅವರು ದಲಿತ ಬಲಗೈ ಸಮುದಾಯಕ್ಕೆ ಸೇರಿದವರು.

9 ಕೋಟಿಗೆ ಖರೀದಿ ಮಾಡಿರುವವರು ಇವರೆ

ಚದರಡಿಗೆ 33,333 ರೂಪಾಯಿಯಂತೆ ಖರೀದಿ ಮಾಡಿದ್ದರು. ಆದರೆ ಈ ನಿವೇಶನ ಖರೀದಿ ಮಾಡಿರುವವರು ತಮ್ಮ ತಾಯಿಯ ನಿಧನದ ಕಾರಣದಿಂದ ಮೂರು ದಿನಗಳ ಗಡುವಿನಲ್ಲಿ ಶೇಕಡ 25 ರಷ್ಟು ಬಿಡ್ ಮೊತ್ತ ಪಾವತಿ ಮಾಡಲು ಸಾಧ್ಯವಾಗಿಲ್ಲ. ಬಿಡ್ ಮೊತ್ತ ಪಾವತಿ ಮಾಡಲು ನಾಳೆವರೆಗೆ (ಸೆಪ್ಟಂಬರ್ 8) ಅವಕಾಶ ಕೇಳಿದ್ದಾರೆ.

ಆದರೆ ನಿಯಮಗಳ ಪ್ರಕಾರ ಬಿಡ್ ಪಾವತಿಗೆ ಕಾಲಾವಕಾಶ ನೀಡಲು ಸಾಧ್ಯವಾಗಿಲ್ಲ. ಆದರೂ ಎಂಡಿಎ ಆಯುಕ್ತರು ವಿನಾಯಿತಿ ನೀಡುವ ವಿವೇಚನೆ ಹೊಂದಿದ್ದಾರೆ. ಬಿಡ್ ದಾರರ ತಾಯಿ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಮಾನವೀಯತೆ ದೃಷ್ಟಿಯಲ್ಲಿ ಆಯುಕ್ತರು ಅವಕಾಶ ನೀಡಬಹುದು.

ದುಬಾರಿ ಬೆಲೆಗೆ ಎರಡು ನಿವೇಶನ ಮಾರಾಟವಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಎಂಡಿಎ ಆಯುಕ್ತ ರಕ್ಷಿತ್ ಅವರು, ಇ- ಹರಾಜಿನಲ್ಲಿ ದುಬಾರಿ ಬೆಲೆಗೆ ನಿವೇಶನ ಖರೀದಿ ಮಾಡಿರುವ ಪ್ರಕರಣ ಪ್ರತ್ಯೇಕವಾಗಿಲ್ಲ. ತೀವ್ರ ಸ್ಪರ್ಧೆಯ ಕಾರಣದಿಂದ ಮಾರುಕಟ್ಟೆಯ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಗೆ ಹರಾಜಾಗಿದೆ. ಆದರೆ ಕೆಸರೆ ಮತ್ತು ರಾಜೀವ್ ನಗರದಲ್ಲಿನ ಪ್ರದೇಶದಲ್ಲಿ ಬಿಡ್‌ಗಳು ಮೂಲ ಮಾರುಕಟ್ಟೆ ದರಗಳಿಗೆ ಮಾತ್ರ ಹರಾಜಾಗುತ್ತದೆ ಎಂದರು. ಉಳಿದಿರುವ 90 ನಿವೇಶನಗಳನ್ನು ಮುಂದಿನ ಇ- ಹರಾಜಿನಲ್ಲಿ ಮಾರಾಟಕ್ಕಿಡಲಾಗುವುದು ಎಂದು ಮಾಹಿತಿ ನೀಡಿದರು.

ಬಿಡ್‌ದಾರರು ಪೂರ್ಣ ಮೊತ್ತ ಪಾವತಿ ಮಾಡಿದ ನಂತರ ಅವರಿಗೆ ಎಂಡಿಎ ನಿಂದ ಟೈಟಲ್ ಡೀಡ್, ಖಾತೆ ಸೇರಿದಂತೆ ಇತರೆ ದಾಖಲೆ ನೀಡಿ, ನಿವೇಶನ ವನ್ನು ಅವರ ಮಾಲೀಕತ್ವಕ್ಕೆ ನೀಡಲಾಗುವುದು. ಈ ನಿವೇಶನಗಳನ್ನು ಮರು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ಷರತ್ತುಗಳಿರುವುದಿಲ್ಲ. ಬಿಡ್ ದಾರರು ನಿವೇಶನದ ಪೂರ್ಣ ಹಣವನ್ನು ನೇರವಾಗಿ ಎಂಡಿಎ ಗೆ ಪಾವತಿಸಿರುವ ಹಿನ್ನೆಲೆಯಲ್ಲಿ ಲಾಕ್– ಇನ್ ಅವಧಿ ಅನ್ವಯ ಆಗುವುದಿಲ್ಲ ಎಂದು ರಕ್ಷಿತ್ ತಿಳಿಸಿದರು.

ಪ್ರಾಧಿಕಾರಕ್ಕೆ 120 ಕೋಟಿ ಆದಾಯ

ಇದು ಉಳಿದ ನಿವೇಶನಗಳ ಮೇಲೆ ಪರಿಣಾಮ ಬೀರಿತು. ಉಳಿದಿರುವ ಈ ನಿವೇಶನಗಳನ್ನು ಮರು ಹರಾಜು ಮಾಡಲಾಗುವುದು ಎಂದು ಸ್ಪಷ್ಟನೆ ನೀಡಿದರು. ಇ–ಹರಾಜಿನಲ್ಲಿ ಪಾಲ್ಗೊಂಡು ಬಿಡ್ ಮಾಡಿರುವವರು ಬಿಡ್ ಮೊತ್ತದ ಶೇ.25 ಮೊತ್ತವನ್ನು ಎಂಡಿಎಗೆ ಪಾವತಿ ಮಾಡಬೇಕು. ಇದಕ್ಕೆ ಮೂರು ದಿನಗಳ ಕಾಲಾವಕಾಶ ನೀಡಲಾಗಿತ್ತು. ಈ ಸಮಯದಲ್ಲಿ 110 ನಿವೇಶನಗಳನ್ನು ಖರೀದಿ ಮಾಡಿದ ಬಿಡ್ ದಾರರು ನಿಗದಿತ ಅವದಿಯಲ್ಲಿ ಶೇಕಡ 25 ರಷ್ಟು ಬಿಡ್ ಹಣ ಪಾವತಿ ಮಾಡಿ ನಿಯಮ ಪಾಲಿಸಿದ್ದರು ಎಂದು ರಕ್ಷಿತ್ ತಿಳಿಸಿದರು.


ದೀಪಾಲಂಕಾರ ಅವಧಿ 15 ದಿನ ವಿಸ್ತರಣೆ

ದೀಪಾಲಂಕಾರ ಮುಂದುವರೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯ ಮೇರೆಗೆ ತೀರ್ಮಾನಿಸಲಾಗಿದೆ.

ದಸರಾ ಹಿನ್ನೆಲೆಯಲ್ಲಿ ಕರ್ನಾಟಕ ಮಾತ್ರವಲ್ಲದೆ, ಹೊರ ರಾಜ್ಯ ಮತ್ತು ವಿದೇಶದಿಂದಲೂ ಪ್ರವಾಸಿಗರು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಲಿದ್ದು, ದಸರಾ ಮುಗಿದ ನಂತರವೂ ಮೈಸೂರು ನಗರಕ್ಕೆ ಪ್ರವಾಸಿಗರನ್ನು ಸೆಳೆಯಲು ಕಾರ್ಯಕ್ರಮ ರೂಪಿಸುವ ದೃಷ್ಟಿಕೋನದೊಂದಿಗೆ ಜಂಬೂಸವಾರಿಯ ನಂತರದ 15 ದಿನ ಮುಂದುವರೆಸಲಾಗುತ್ತಿದೆ. ಇದರಿಂದ ದೀಪಾಲಂಕಾರ ನೋಡಲು ವಿವಿಧೆಡೆಯಿಂದ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುವುದರೊಂದಿಗೆ ಇಲ್ಲಿನ ಪ್ರವಾಸೋದ್ಯಮ ಗರಿಗೆದರಲಿದೆ.

ಸಿಎಂ ಸೂಚನೆ ಮೇರೆಗೆ...

"ಈ ಬಾರಿ ದಸರಾ ದೀಪಾಲಂಕಾರವನ್ನು ಸೊಗಸಾಗಿ ಆಯೋಜಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಸೆಸ್ಕ್ ವತಿಯಿಂದ ಮೈಸೂರು ನಗರಕ್ಕೆ ಮಾಡುವ ದೀಪಾಲಂಕಾರ ಜನಾಕರ್ಷಣೀಯವಾಗಲಿದೆ. ಜನರನ್ನು ಆಕರ್ಷಿಸುವ ನಿಟ್ಟಿನಲ್ಲಿ ಕೋಲ್ಕತ್ತಾ ಸೇರಿದಂತೆ ಹೊರ ರಾಜ್ಯಗಳಿಂದ ರನ್ನಿಂಗ್ ಲೈಟ್‌ಗಳನ್ನು ತಂದು ದೀಪಾಲಂಕಾರಕ್ಕೆ ಬಳಸಲಾಗುತ್ತಿದೆ. ಸೆ.22ರಿಂದ ಅ.2ರವರೆಗೆ ದಸರಾ ಮಹೋತ್ಸವ ಜರುಗಲಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯ ಮೇರೆಗೆ ದೀಪಾಲಂಕಾರವನ್ನು ಜಂಬೂ ಸವಾರಿ ಮೆರವಣಿಗೆ ನೆರವೇರಿದ ನಂತರ 15 ದಿನ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ.



- **ಮುನಿಗೋಪಾಲರಾಜು,**
ಕಾರ್ಯನಿರ್ವಾಹ ನಿರ್ದೇಶಕ, ಸೆಸ್ಕ್

ಗ್ರಾಮ ಸಾಗುವಳಿಗೆ ಆಗ್ರಹಿಸಿ ಅ.20 ರಂದು ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ)ಯಿಂದ ಬೃಹತ್ ಸಮಾವೇಶ



ಗ್ರಾಮ ಸಾಗುವಳಿ ಅದಾಲತ್ ಜಾರಿಗೆ ಆಗ್ರಹಿಸಿ ಬೃಹತ್ ಸಮಾವೇಶ ನಡೆಸುವ ಸಂಬಂಧ ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಣ್ಣ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಮೈಸೂರು, ಸೆ.7– ಗ್ರಾಮ ಸಾಗುವಳಿ ಅದಾಲತ್‌ಗೆ ಆಗ್ರಹಿಸಿ ಅ.20ರಂದು ಮೈಸೂರಿನಲ್ಲಿ ಬೃಹತ್ ಸಮಾವೇಶ ನಡೆಸಲು ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ನಿರ್ಧರಿಸಿದ್ದು, ಈ ಸಂಬಂಧ ಖಾಸಗಿ ಹೋಟೆಲ್‌ನಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ (ರೈತಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಮಾತನಾಡಿ, ತಹಶೀಲ್ದಾರ್ ನೇತೃತ್ವದ ದರ್ಕಾಸ್ ಕಮಿಟಿ ಗ್ರಾಮಗಳಿಗೆ ಭೇಟಿ ನೀಡಿ, ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಸ್ಥಳದಲ್ಲೇ ಸಾಗುವಳಿ ಮಂಜೂರು ಮಾಡಲು ಗ್ರಾಮ ಸಾಗುವಳಿ ಅದಾಲತ್ ಕಾರ್ಯಕ್ರಮ ಜಾರಿಗೆ ತರುವಂತೆ ಸರ್ಕಾರವನ್ನು ಆಗ್ರಹಿಸುವ ಉದ್ದೇಶದಿಂದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಆರೇಳು ದಶಕಗಳಿಂದ ದರಖಾಸ್ತು ಜಮೀನಲ್ಲಿ ಉಳುಮೆ ಮಾಡಿಕೊಂಡು ಬರುತ್ತಿರುವ ರೈತರು, ಅಕ್ರಮ–ಸಕ್ರಮದಡಿ ಸಾಗುವಳಿ ಮಂಜೂರು ಮಾಡಬೇಕೆಂಬ ಸರ್ಕಾರದ ಆದೇಶದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಅಧಿನಿಯಮ ಸೆಕ್ಷನ್ 53 ಮತ್ತು 57ರ ಅಡಿ ಅರ್ಜಿ ಸಲ್ಲಿಸಿದ್ದಾರೆ. ದರ್ಕಾಸ್ ಕಮಿಟಿಯವರು ಲಕ್ಷಾಂತರ ಹಣ ನೀಡುವವರಿಗೆ ಮಾತ್ರ ಸಾಗುವಳಿ ಮಂಜೂರು ಮಾಡುವ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿರುವುದು ವಿಷಾಧನೀಯ. ಇದರಿಂದ ಹಲವು ವರ್ಷಗಳಿಂದ ಅರ್ಜಿ ಹಾಕಿ ಕಾದಿರುವ ಬಡ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು.

ಸಭೆಯಲ್ಲಿ ಪಾರ್ಟಿಯ ಮೈಸೂರು ಜಿಲ್ಲಾಧ್ಯಕ್ಷ ಪಿ.ಕುಮಾರಸ್ವಾಮಿ, ರಾಜ್ಯ ಯುವ ಮಹಿಳಾ ಘಟಕದ ಅಧ್ಯಕ್ಷೆ ಕುಮಾರಿ ಆರ್ಯ, ಮೈಸೂರು ಜಿಲ್ಲಾ ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಮಂಜುಳಾ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಶ್ರೀಮತಿ ಭಾಗ್ಯಮ್ಮ, ರಾಜ್ಯ ಮಾಧ್ಯಮ ವಕ್ತಾರ ಸೂರ್ಯವರ್ಧನ್, ಮೈಸೂರು ಜಿಲ್ಲಾ ಸಂಚಾಲಕ ಸಿಂಧುವಳ್ಳಿ ಶಿವಕುಮಾರ್, ಯುವ ಮುಖಂಡರಾದ ಚಂದ್ರಶೇಖರ್, ಬೋರೇಗೌಡ, ಎನ್.ಎಂ.ಕುಮಾರ್ ಹಾಗೂ ಭರತ್ ಭಾಗವಹಿಸಿದ್ದರು.

ಟಿಕೆಟ್ ಆನ್‌ಲೈನ್‌ನಲ್ಲಿ ಬಿಡುಗಡೆ

ಮಾಡಬಹುದಾಗಿದೆ. ಅಲ್ಲದೇ ಅರಮನೆ ಆವರಣದಲ್ಲಿ ಜಂಬೂ ಸವಾರಿ ಮೆರವಣಿಗೆ, ಪಂಜಿನ ಕವಾಯಿತು ಅನ್ನು ವೀಕ್ಷಣೆಗೂ ಅವಕಾಶವಿದೆ. ಡ್ರೋನ್ ಶೋ ಅನ್ನು ಯಾವ ದಿನ ವೀಕ್ಷಣೆ ಮಾಡಬಹುದು ಎಂದು ಗೋಲ್ಡ್ ಕಾರ್ಡ್ ಹಿಂಭಾಗ ನಮೂದಿಸಲಾಗಿರುತ್ತದೆ.

ಈ ಗೋಲ್ಡ್ ಕಾರ್ಡ್ ಪಡೆದಿರುವವರು ಜಂಬೂ ಸವಾರಿ ವೀಕ್ಷಣೆ, ಪಂಜಿನ ಕವಾಯತು ವೀಕ್ಷಣೆ ಹಾಗೂ ಡ್ರೋನ್ ಶೋ ವೀಕ್ಷಣೆಗೆ ಬರಲು ನಿರ್ಧಿಷ್ಟ ಗೇಟ್‌ಗಳಿಂದಲೇ ಬರುವಂತೆ ಸೂಚನೆ ನೀಡಲಾಗಿದೆ ಗೋಲ್ಡ್ ಕಾರ್ಡ್ ಹೊಂದಿರುವವರಿಗೆ ಜಂಬೂಸವಾರಿ ಮೆರವಣಿಗೆಯಲ್ಲಿ ಪುಷ್ಪಾ ರ್ಚನೆ ಮಾಡುವುದನ್ನು ಕಣ್ತುಂಬಿಕೊಳ್ಳಲು ಎದುರು ಭಾಗದಲ್ಲಿ ಆಸನದ ವ್ಯವಸ್ಥೆ ಮಾಡಲಾಗಿರುತ್ತದೆ.

ಈ ಕುರಿತು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ದಸರಾ ಮಹೋತ್ಸವದ ಗೋಲ್ಡ್‌ಕಾರ್ಡ್, ಜಂಬೂಸವಾರಿ, ಟಾರ್ಚ್‌ಲೈಟ್ ಪರೇಡ್ ವೀಕ್ಷಣೆಗೆ ಟಿಕೆಟ್ ಬಿಡುಗಡೆ ಮಾಡಿದೆ. ಜಿಲ್ಲಾಡಳಿತ ಇಂತಿಷ್ಟೇ ಟಿಕೆಟ್ ಅಥಾ ಗೋಲ್ಡ್‌ಕಾರ್ಡ್ ಖರೀದಿಸಬೇಕೆಂಬ ನಿರ್ಬಂಧ ಹೇರಿಲ್ಲ. ಅ.1ರವರೆಗೆ ಟಿಕೆಟ್ ಮತ್ತು ಗೋಲ್ಡ್‌ಕಾರ್ಡ್ ಖರೀದಿಗೆ ಲಭ್ಯವಿದ್ದು, ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ದೊಡ್ಡಮಟ್ಟದ ಸಂಖ್ಯೆಯಲ್ಲಿ ಗೋಲ್ಡ್ ಕಾರ್ಡ್ ಮತ್ತು ಟಿಕೆಟ್ ಖರೀದಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಈ ಬಾರಿ ಜಿಲ್ಲಾಡಳಿತ ಓಟಿಪಿ ಮತ್ತು ಇ–ಮೇಲ್ ಖಚಿತತೆ ಮಾಡಿಕೊಳ್ಳುವ ವ್ಯವಸ್ಥೆ ಜಾರಿ ಗೊಳಿಸಲಾಗಿದೆ. ಈ ವ್ಯವಸ್ಥೆಯು ಪರಿಣಾಮಕಾರಿಯಾಗಿದ್ದು, ಕಾಳಸಂತೆಯಲ್ಲಿ ಮಾರಾಟ ಮಾಡುವುದಕ್ಕೆ ಒಬ್ಬರೆ ಹೆಚು ಟಿಕೆಟ್, ಗೋಲ್ಡ್ ಕಾರ್ಡ್ ಖರೀದಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಜನಸಾಮಾನ್ಯರಿಗೂ ನ್ಯಾಯಯುತವಾಗಿ ಟಿಕೆಟ್ ಹಾಗೂ ಗೋಲ್ಡ್‌ಕಾರ್ಡ್ ದೊರೆಯುವಂತೆ ಹೊಸ ಸಹಕಾರಿಯಾಗಿದೆ. ಟಿಕೆಟ್ ಖರೀದಿಸುವವರ ವೈಯಕ್ತಿಕ ವಿವರವೂ ನಮೂಸು ಮಾಡಬೇ ಕಾಗಿರುವುದರಿಂದ ಈ ಬಾರಿ ಟಿಕೆಟ್‌ಗಳು ಕಾಳಸಂತೆಯಲ್ಲಿ ಮಾರಾಟವಾಗಲು ಸಾಧ್ಯವಿಲ್ಲ ಎಂದರು.

ಬೇಡಿಕೆಗೆ ಅನುಗುಣವಾಗಿ ಟಿಕೆಟ್ ಮುದ್ರಿಸಿ ಮಾರಾಟಕ್ಕೆ ಬಿಡುಗಡೆ ಮಾಡಲಾಗಿದೆ. ಗೋಲ್ಡ್ ಕಾರ್ಡ್ ಯಾರ ಹೆಸರಲ್ಲಿ ಖರೀದಿಸುತ್ತಾರೋ, ಅವರು ಯಾವುದಾದರೂ ಗುರುತಿನ ಚೀಟಿ ಹಾಜರುಪಡಿಸಬೇಕು. ಬೇರೊಬ್ಬರು ಖರೀದಿಸಿದ ಗೋಲ್ಡ್ ಕಾರ್ಡ್ ಅನ್ನು ಮತ್ತೊಬ್ಬರು ಬಳಸುವುದಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರವೇಶ ರದ್ದು

ಬನ್ನಿಮಂಟಪದ ಟಾರ್ಚ್ ಲೈಟ್ ಮೈದಾನದ ಏರ್ ಶೋ ನಲ್ಲಿ ಯಾವುದೇ ಯಾವುದೇ ರೀತಿಯ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಏರ್ ಶೋನಲ್ಲಿ ಸಹಸ್ರಾರು ಜನರು ಭಾಗವಹಿಸುತ್ತಾರೆ. ಆ ವೇಳೆ ಜನಸಂದಣಿಯಿಂದ ಕಾಲ್ತುಳಿತದಂತಹ ಅಹಿತಕರ ಘಟನೆ ಸಂಭವಿಸದಂತೆ ಏರ್ ಶೋಗೆ ಪ್ರವೇಶ ದರ ನಿಗದಿ ಮಾಡಲಾಗಿದೆ. ಟಿಕೆಟ್ ದರ ಸೇರಿದಂತೆ ಇತರೆ ವಿವರವನ್ನು ಶೀಘ್ರದಲ್ಲೆ ಪ್ರಕಟಿಸಲಾಗುವುದು ಎಂದು ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

2023 ರ ಅಕ್ಟೋಬರ್ 22 ಮತ್ತು 23 ರಂದು ಸಂಜೆ 4 ರಿಂದ 4.45 ಗಂಟೆವರೆಗೆ ಏರ್ ಶೋ ನಡೆದಿತ್ತು. ಅಕ್ಟೋಬರ್ 22 ರಂದು ನಡೆದ ಏರ್ ಶೋ ತಾಲೀಮು ವೀಕ್ಷಣೆಗೆ ಉಚಿತ ಪ್ರವೇಶವಿತ್ತು. ಅಕ್ಟೋಬರ್ 23 ರಂದು ನಡೆದ ಏರ್ ಶೋಗೆ ಪಾಸ್ ವಿತರಣೆ ಮಾಡಲಾಗಿತ್ತು ಆದರೆ ಈ ಬಾರಿ ಏಸ್ ಶೋ ವೀಕ್ಷಣೆಗೆ ಪ್ರವೇಶ ದರ ನಿಗದಿ ಮಾಡಲಾಗುತ್ತಿದೆ.

ಕಾಫಿ, ಕೃಷಿ ಫಸಲು ಹಾನಿ ಬಗ್ಗೆ ತಲೆಕೆಡಿಸಿಕೊಳ್ಳದ ಸರ್ಕಾರ

ನಾಳೆಯಿಂದ ಮಳೆ ಹಾನಿ ಪ್ರದೇಶಗಳಿಗೆ ಬಿಜೆಪಿ ಭೇಟಿ ನೀಡಿ ಸಮೀಕ್ಷೆ


ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡುತ್ತಿರುವುದು.

ಮಡಿಕೇರಿ,ಸೆ.7– ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ವ್ಯಾಪಕ ಮಳೆಯಿಂದ ಕಾಫಿಯನ್ನು ಒಳಗೊಂಡಂತೆ ಕೃಷಿ ಫಸಲುಗಳಿಗೆ ಅಪಾರ ಹಾನಿಯಾಗಿದ್ದರೂ ರಾಜ್ಯದ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಕನಿಷ್ಠ ಕಾಳಜಿಯನ್ನು ತೋರಿಲ್ಲ ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾ ಬಿಜೆಪಿಯಿಂದ ಸೆ.9ರಂದು ಮಳೆಯಿಂದ ಹಾನಿಗೊಳಗಾದ ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಬೆಳೆ ಹಾನಿ ಸಮೀಕ್ಷೆಯನ್ನು ನಡೆಸಲಾಗುತ್ತದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ವಿವಿಧ ಭಾಗಗಳಿಗೆ ಬಿಜೆಪಿ ಪಕ್ಷದ ತಂಡ ಭೇಟಿ ನೀಡಿ ಅಲ್ಲಿ ಕಾಫಿಯನ್ನು ಒಳಗೊಂಡಂತೆ ವಿವಿಧ ಕೃಷಿಗೆ ಆಗಿರುವ ಹಾನಿಯನ್ನು ಪರಿಶೀಲಿಸಿ ವರದಿ ಸಿದ್ಧಪಡಿಸಿ ಸಂಸದರ ಮೂಲಕ ಕೇಂದ್ರ ಸರ್ಕಾರಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಿದೆ ಎಂದು ತಿಳಿಸಿದರು. ಅತೀ ಹೆಚ್ಚು ಮಳೆಯಾಗಿರುವ ತೋಳೂರು ಶೆಟ್ಟಳ್ಳಿ, ಶಾಂತಳ್ಳಿ, ಬೆಟ್ಟದಳ್ಳಿ, ಹಮ್ಮಿಯಾಲ, ಮುಟ್ಲು, ಮುಕ್ಕೋಡ್ಲು, ಕಾಲೂರು, ಗಾಳಿಬೀಡು, ಬೆಟ್ಟಗೇರಿ, ಚೇರಂಬಾಣೆ, ಚೆಟ್ಟಿಮಾನಿ, ಭಾಗಮಂಡಲ, ಬಲ್ಲಮಾವಟಿ, ಕಕ್ಕಬ್ಬೆ ವಿಭಾಗಗಳಿಗೆ ಪಕ್ಷದ ಸಮೀಕ್ಷಾ ತಂಡ ಅಂದು ಭೇಟಿ ನೀಡಿ ಪರಿಶೀಲನೆ ನಡೆಸಲಿದೆ ಎಂದು ವಿವರಿಸಿದರು.

2 ಲಕ್ಷ ಪರಿಹಾರ ಒದಗಿಸಲಿ: ಭಾರೀ ಮಳೆಯಿಂದ ಜಿಲ್ಲೆಯ ಪ್ರಮುಖ ಕೃಷಿಯಾದ ಕಾಫಿಗೆ ಅಪಾರ ಹಾನಿಯಾಗಿದೆ. ಅರೇಬಿಕಾ ಕಾಫಿ ಫಸಲು ಅಧಿಕ ಮಳೆಯಿಂದ ಕೊಳೆತು ಉದುರಿದ್ದರೆ ರೋಬಸ್ಟಾ ಕಾಫಿಯೂ ಕೊಳೆ ರೋಗದ ಸಮಸ್ಯೆಗೆ ತುತ್ತಾಗಿದ್ದು ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ. ಹೀಗಿದ್ದರೂ ಈ ಬಗ್ಗೆ ಜಿಲ್ಲೆಯ ಶಾಸಕರಾಗಲಿ, ಉಸ್ತುವಾರಿ ಸಚಿವರಾಗಲಿ ಹೆಚ್ಚಿನ ಕಾಳಜಿ ವಹಿಸಿಲ್ಲ ಎಂದು ಆರೋಪಿಸಿದರು. ಪ್ರಸ್ತುತ ಪರಿಸ್ಥಿತಿಗಳ ನಡುವೆ ಬೆಳೆಗಾರರಿಗೆ ತಲಾ 2 ಲಕ್ಷ ಪರಿಹಾರವನ್ನು ನೀಡಬೇಕೆಂದು ಆಗ್ರಹಿಸಿದರು. ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಸತತ 3 ವರ್ಷ ಬೆಳೆಗಾರರಿಗೆ ಪರಿಹಾರವನ್ನು ವಿತರಿಸಲಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಚಿಕ್ಕಾಸು ಪರಿಹಾರವನ್ನು ಒದಗಿಸಿಲ್ಲ ಎಂದು ಆರೋಪಿಸಿದರಲ್ಲದೇ ಇದೀಗ ಬೆಳೆಹಾನಿ ಸಮೀಕ್ಷಾ ತಂಡವನ್ನು ಜಿಲ್ಲಾಡಳಿತ ರಚಿಸಿದೆ. ಇದು ಸಮೀಕ್ಷೆ ಮಾಡುವುದರ ಒಳಗಾಗಿ ಕೊಳೆತು ಉದುರಿ ಹೋಗಿರುವ ಕಾಫಿ ಕರಗಿ ಹೋಗಿರುತ್ತದೆ. ಬೆಳೆ ಹಾನಿಯ ನಿಖರ ಮಾಹಿತಿ ದೊರಕಲಾರದು ಎಂದು ಹೇಳಿದರು.

ಜನಪರವಾಗಿ ಜಿಎಸ್‌ಟಿ ಬದಲಾವಣೆ: ಜಿಎಸ್‌ಟಿ ತೆರಿಗೆಯನ್ನು ಕೇಂದ್ರ ಸರ್ಕಾರ ಜನಪರವಾಗಿ ಬದಲಾವಣೆ ಮಾಡಿದೆ. ಮೊದಲು ಇದ್ದ 4 ವಿಭಾಗಗಳನ್ನು ಪ್ರಸ್ತುತ ಶೇ.5 ಮತ್ತು ಶೇ.18ರ ವಿಭಾಗಗಳನ್ನಾಗಿ ಸರಳೀಕೃತಗೊಳಿಸಿರುವುದು ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲತೆಯನ್ನು ಉಂಟು ಮಾಡಿದೆ ಎಂದು ತಿಳಿಸಿದರು.

ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ, ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ಜಿಲ್ಲೆಯ ಬೆಳೆಗಾರರಿಗೆ ಕ್ರಮವಾಗಿ 38 ಕೋಟಿ, 66 ಕೋಟಿ ಮತ್ತು 140 ಕೋಟಿ ಪರಿಹಾರವನ್ನು ಒದಗಿಸಿದೆ. ಇದು ಸುಮಾರು 55 ಸಾವಿರ ಬೆಳೆಗಾರರಿಗೆ ಅನುಕೂಲತೆಯನ್ನು ಒದಗಿಸಿತ್ತು. ಇಂದಿನ ಕಾಂಗ್ರೆಸ್ ಸರ್ಕಾರ ಜಿಲ್ಲೆಯ ಕಾಫಿ ಬೆಳೆಗಾರರಿಗೆ ಕಿಂಚಿತ್ತು ಪರಿಹಾರ ನೀಡಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕಾಳಜಿ ಇಲ್ಲದ ವರ್ತನೆ: ಮಾಜಿ ವಿಧಾನ ಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಭಾರೀ ಮಳೆಯಿಂದ ಕೃಷಿಗೆ ಹಾನಿಯಾಗಿರುವಾಗ ಸರ್ವೆ ಕಾರ್ಯವನ್ನು ನಡೆಸುವಲ್ಲಿ ಜಿಲ್ಲೆಯ ಶಾಸಕರು ಮತ್ತು ಉಸ್ತುವಾರಿ ಸಚಿವರು ಕನಿಷ್ಟ ಕಾಳಜಿಯೂ ಇಲ್ಲದಂತೆ ವರ್ತಿಸಿದ್ದಾರೆ. ಕಳೆದ 3 ವರ್ಷಗಳ ಅವಧಿಯಲ್ಲಿ ಎನ್‌ಡಿಆರ್‌ಎಫ್ ಅಡಿ ಜಿಲ್ಲೆಯ ಮಳೆಹಾನಿಗೆ ಸಂಬಂಧಿಸಿದಂತೆ ಸಾಕಷ್ಟು ಅನುದಾನ ಬಂದಿದೆ. ಎಸ್‌ಡಿಆರ್‌ಎಫ್‌ನಲ್ಲಿ ಕೇಂದ್ರದ ಶೇ.75ರಷ್ಟು ಮತ್ತು ರಾಜ್ಯದ ಶೇ.25 ಅನುದಾನವಿದೆ. ಈ ಹಣವನ್ನು ಎಸ್‌ಡಿಆರ್‌ಎಫ್‌ನ ನಿಯಮಗಳನ್ನು ಮೀರಿ ಕಾಂಗ್ರೆಸ್ ಕಾರ್ಯಕರ್ತರ ಮನೆ ಮನೆಗೆ ರಸ್ತೆ ಮಾಡಲಾಗಿದೆ ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೊಡಗಿನಲ್ಲಿ ಪಂಚ ಗ್ಯಾರಂಟಿಯೊಂದನ್ನು ಬಿಟ್ಟರೆ ಮತ್ತಾವ ಅಭಿವೃದ್ಧಿಯೂ ನಡೆದಿಲ್ಲ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ರಸ್ತೆಗಳ ನಿರ್ವಹಣೆ ಮಾಡಬೇಕಿತ್ತು ದರು ಅದನ್ನು ಮಾಡದಿರುವುದರಿಂದ ಜಿಲ್ಲೆಯ ರಸ್ತೆಗಳೆಲ್ಲ ಹದಗೆಟ್ಟು ಹೋಗಿವೆ. ಲೋಕೋಪಯೋಗಿ ಇಲಾಖೆಗೆ ವರ್ಷಂಪ್ರತಿ ರಸ್ತೆಗಳ ನಿರ್ವಹಣೆಗೆ ಪ್ರತಿ ಕಿ.ಮೀಗೆ 60 ಸಾವಿರ ರೂ. ನಿಗದಿಯಾಗಿದೆ. ಆದರೂ ಯಾವುದೇ ಕೆಲಸಗಳು ನಡೆದಿಲ್ಲ ಎಂದು ಟೀಕಿಸಿದರು.

ಚಾಮುಂಡಿಬೆಟ್ಟ ಚಲೋ: ಮೈಸೂರು ದಸರಾ ಉತ್ಸವಕ್ಕೆ ಚಾರಿತ್ರಿಕವಾದ ಮತ್ತು ಧಾರ್ಮಿಕವಾದ ಹಿನ್ನೆಲೆ ಇದೆ. ಇಂತಹ ದಸರಾ ಮಹೋತ್ಸವದ ಬಗ್ಗೆ ಮತ್ತು ಕನ್ನಡದ ಬಗ್ಗೆ ನಕಾರಾತ್ಮಕವಾಗಿ ಮಾತನಾಡಿರುವ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದು ಶ್ರೀ ಚಾಮುಂಡೇಶ್ವರಿಗೆ ಮಾಡಿರುವ ಅಪಚಾರವಾಗಿದೆ. ಈ ಹಿನ್ನೆಲೆ ಹಿಂದೂ ಜಾಗರಣ ವೇದಿಕೆಯಿಂದ ಸೆ.9 ರಂದು 'ಚಾಮುಂಡಿಬೆಟ್ಟ ಚಲೋ' ಜಾಥಾವನ್ನು ಆಯೋಜಿಸಲಾಗಿದೆ. ಇದರಲ್ಲಿ ಜಿಲ್ಲೆಯಿಂದ ಸಾಕಷ್ಟು ಕಾರ್ಯಕರ್ತರು ತೆರಳಲಿದ್ದಾರೆ ಎಂದು ಹೇಳಿದರು. ಬೂಕರ್ ಪ್ರಶಸ್ತಿ ಮೊದಲಾಗಿ ಅನುವಾದಕರಿಗೆ ನೀಡುವ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿ ಪಡೆದ ಲೇಖಕಿ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವ ರಾಜ್ಯ ಸರ್ಕಾರ, ಅನುವಾದಕಿ ದೀಪಾ ಬಾಸ್ತಿ ಅವರನ್ನು ಏಕೆ ಆಹ್ವಾನಿಸಿಲ್ಲ? ಎಂದು ಕೆ.ಜಿ. ಬೋಪಯ್ಯ ಪ್ರಶ್ನಿಸಿದರು.

ಅವರಿಗೆ ಎಲ್ಲವೂ ತಿಳಿದಿದೆ: ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಸ್ಕ್ ಮ್ಯಾನ್ ಚಿನ್ನಯ್ಯ, ಮಟ್ಟಣ್ಣನವರ್, ತಿಮರೋಡಿ ಅವರನ್ನು ಬಂಧಿಸಿ, ತನಿಖೆ ಒಳಪಡಿಸಿ, ಅವರಿಗೆ ಎಲ್ಲದರ ಹಿಂದಿನ ಆಗುತಿತ್ತು ಎನ್ನುವ ವಿಚಾರಗಳನ್ನು ಬಹಿರಂಗಪಡಿಸಿ ನ್ಯಾಯ ಒದಗಿಸಬೇಕು ಎನ್ನುವುದೆ ಬಿಜೆಪಿ ನಿಲುವಾಗಿದೆ. ಈ ಬಗ್ಗೆ ತನಿಖೆ ನಡೆಸುತ್ತಿರುವ ಎಸ್‌ಐಟಿಗೆ ಎಲ್ಲದರ ಅರಿವಿದ್ದರೂ ಬಾಯಿ ಬಿಡುತ್ತಿಲ್ಲ ಎಂದರು.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಎಸ್‌ಐಟಿ ಅದರ ನಿಬಂಧನೆಗಳನ್ನು ಮೀರಿ ಸೌಜನ್ಯ ಪ್ರಕರಣವನ್ನು ನೀಡಬಾರದೆ. ಆಕೆಯ ಸಾವಿಗೆ ನ್ಯಾಯ ದೊರಕಬೇಕೆನ್ನುವ ಧ್ವನಿಯ ಈ ಬಗ್ಗೆ ಯಾವ ತಕರಾರಿಲ್ಲ. ಆದರೆ, ಇಂತಹ ಪ್ರಕರಣಗಳನ್ನು ಬಿಟ್ಟು ಧಾರ್ಮಿಕ ಶ್ರದ್ಧಾ ಕೇಂದ್ರಗಳ ಮೇಲೆ ಇಂದು ವ್ಯವಸ್ಥಿತ ಷಡ್ಯಂತ್ರಗಳು ನಡೆಯುತ್ತಿರುವುದನ್ನು ಖಂಡಿಸುವುದಾಗಿ ಹೇಳಿದರು.


ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಬಿಜೆಪಿ ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಜಿಲ್ಲಾ ವಕ್ತಾರ ಬಿ.ಕೆ.ಅರುಣ್ ಕುಮಾರ್ ಉಪಸ್ಥಿತರಿದ್ದರು.

ಸೆಂಥಿಲ್ ಅವರನ್ನು ಬಂಧಿಸಿ

ಧಾರ್ಮಿಕ ಕೇಂದ್ರ ಧರ್ಮಸ್ಥಳದ ಮೇಲಿನ ಅಪಪ್ರಚಾರಗಳ ಹಿಂದೆ ರಾಜ್ಯದಲ್ಲಿ ಈ ಹಿಂದೆ ಜಿಲ್ಲಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದ ಈಗಿನ ತಮಿಳುನಾಡಿನ ಸಂಸದ ಸಸಿಕಾಂತ್ ಸೆಂಥಿಲ್ ಕುಮ್ಮಕ್ಕು ಇದೆ. ಅವರನ್ನು ಬಂಧಿಸಬೇಕೆಂದು ಒತ್ತಾಯಿಸಿದ ಅಪ್ಪಚ್ಚು ರಂಜನ್ ಕಳೆದ 2 ವರ್ಷಗಳಿಂದಲೂ ಧಾರ್ಮಿಕ ಕೇಂದ್ರದ ವಿರುದ್ಧ ಷಡ್ಯಂತ್ರ ರೂಪುಗೊಳ್ಳುತ್ತಿತ್ತು ಎನ್ನುವುದು ತಿಳಿದು ರಾಜ್ಯ ಸರ್ಕಾರ ಮೌನವಾಗಿರುವುದು ಸರಿಯಲ್ಲ ಎಂದು ತಿಳಿಸಿದರು. ಸೆಂಥಿಲ್ ಅವರ ಕುಟುಂಬಸ್ಥರ ಖಾತೆಗೆ 10 ಕೋಟಿಯಷ್ಟು ಹಣ ಬಂದಿದೆ ಎನ್ನುವುದಾದರೆ, ಈ ಬಗ್ಗೆ ಆಳ್ತ ತನಿಖೆ ನಡೆಯಬೇಕು. ಒಟ್ಟು ಪ್ರಕರಣವನ್ನು ಕೇಂದ್ರೀಯ ತನಿಖಾ ಸಂಸ್ಥೆಗೆ ವಹಿಸುವುದರೊಂದಿಗೆ ಇ.ಡಿ. ಇಂದಲು ತನಿಖೆ ನಡೆಯುವುದು ಅಗತ್ಯವೆಂದು ಹೇಳಿದರು.

ಕಾರು, ಜೀಪ್, ಜೆಸಿಬಿ, ಇಟಾಚಿ ಚಲಾಯಿಸುವ ಚಂದನ್‌ಗೆ

ಯು.ಎನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿ ಪ್ರದಾನ



ಮಡಿಕೇರಿ,ಸೆ.7– ಕಾರು, ಜೀಪ್, ಜೆಸಿಬಿ, ಇಟಾಚಿ ಸೇರಿದಂತೆ ವಿವಿಧ ವಾಹನಗಳನ್ನು ಲೀಲಾಜಾಲವಾಗಿ ಚಲಾಯಿಸುವ 11 ವರ್ಷದ ಕಾವೇರಿಮನೆ ಚಂದನ್ ಯು.ಎನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿಯನ್ನು ಪಡೆದಿದ್ದಾನೆ.

ನಾಪೋಕ್ಲುವಿನ ಶ್ರೀರಾಮ ಟ್ರಸ್ಟ್ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಚಂದನ್ ಮಡಿಕೇರಿ ತಾಲೂಕಿನ ಅಯ್ಯಂಗೇರಿ ಗ್ರಾಮದ ಕಾವೇರಿಮನೆ ಭರತ್ ಹಾಗೂ ಯೋಗಿತಾ ದಂಪತಿ ಪುತ್ರನಾಗಿದ್ದಾನೆ. ಯು.ಎನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿ ಹಾಗೂ ನಗದು ಬಹುಮಾನವನ್ನು ಇದೇ ಸೆ.12ರಂದು ಮೈಸೂರಿನಲ್ಲಿ ಪ್ರದಾನ ಮಾಡಲಾಗುತ್ತದೆ.



ಪೂವಪ್ಪ ರಾಮಯ್ಯ ನಿಧನ

ನಾಪೋಕ್ಲು; ಇಲ್ಲಿಗೆ ಸಮೀಪದ ಕಕ್ಕಬೆ ಕುಂಜಿಲ ಗ್ರಾಮದ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ ಕೈಬಿಲಿರ ಎಂ.ಪೂವಪ್ಪ ರಾಮಯ್ಯ(77) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆಯು ಶನಿವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಶ್ರೀಯುತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂದು ಭಾಂದವರನ್ನು ಅಗಲಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯನವರ 60ನೇ ಪುಣ್ಯಸ್ಮರಣೆ

ನಮ್ಮನ್ನು ಸುರಕ್ಷಿತವಾಗಿಟ್ಟಿರುವ ಸೈನಿಕರು ದೇವರಿಗೆ ಸಮಾನ: ನಂದಾ ಕಾರ್ಯಪ್ಪ

ಮಡಿಕೇರಿ,ಸೆ.7– ಭಾರತ–ಪಾಕಿಸ್ತಾನ ನಡುವೆ 1965ರ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ(ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ. ದೇವಯ್ಯ ಅವರ 60ನೇ ಪುಣ್ಯಸ್ಮರಣೆ ಮಡಿಕೇರಿಯಲ್ಲಿ ಅರ್ಥಪೂರ್ಣವಾಗಿ ನಡೆಯಿತು.

ಕೊಡವ ಮಕ್ಕಡ ಕೂಟ, ಅಜ್ಜಮಾಡ ಕುಟುಂಬಸ್ಥರು ಹಾಗೂ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಟ್ರಸ್ಟ್‌ನ ಸಹಯೋಗದಲ್ಲಿ ಸ್ಕ್ವಾ.ಲೀ.ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ನಿವೃತ್ತ ಸೇನಾಧಿಕಾರಿಗಳು, ಯೋಧರು, ಜನಪ್ರತಿನಿಧಿಗಳು, ಕೊಡವ ಸಮಾಜದ ಪ್ರತಿನಿಧಿಗಳು ಹಾಗೂ ವಿವಿಧಸಂಘ, ಸಂಸ್ಥೆಗಳ ಪ್ರಮುಖರು ವೀರ ಸೇನಾನಿಗೆ ಗೌರವ ಅರ್ಪಿಸಿದರು.

ಸ್ಕ್ವಾ.ಲೀ.ಅಜ್ಜಮಾಡ ಬಿ.ದೇವಯ್ಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಏರ್ ಮಾರ್ಷಲ್ ಕೊಡಂದೇರ ನಂದಾ ಕಾರ್ಯಪ್ಪ ದೇಶ ಹಾಗೂ ದೇಶದ ಪ್ರಜೆಗಳನ್ನು ರಕ್ಷಿಸುತ್ತಿರುವ ವೀರ ಯೋಧರನ್ನು ಸ್ಮರಿಸುವುದು ನಮ್ಮ ಜವಾಬ್ದಾರಿಯಾಗಿದೆ ನಮ್ಮನ್ನು ದೇವರು ರಕ್ಷಿಸುತ್ತಾರೆ ಎಂದು ನಾವು ಸದಾ ದೇವರನ್ನು ಸ್ಮರಿಸುತ್ತೇವೆ. ನಮ್ಮನ್ನು ಸುರಕ್ಷಿತವಾಗಿಟ್ಟಿರುವ ಸೈನಿಕರು ಕೂಡ ದೇವರಿಗೆ ಸಮಾನರಾಗಿದ್ದು, ನಮಗಾಗಿ ಜೀವ ಕೊಟ್ಟ ಹುತಾತ್ಮರ ಸ್ಮರಣೆ ನಮ್ಮ ಕರ್ತವ್ಯವಾಗಿದೆ ಎಂದರು.

ದೇವಯ್ಯ ಅವರು ದೇಶದ ರಕ್ಷಣೆಗಾಗಿ ಹುತಾತ್ಮರಾಗುವ ಮೂಲಕ ಯುವ ಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ. ಇವರ ಆದರ್ಶವನ್ನು ಯುವ ಸಮೂಹ ಮೈಗೂಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರುವ ಮೂಲಕ ದೇಶ ಸೇವೆಗೆ ಮುಂದಾಗಬೇಕು ಎಂದು ಕರೆ ನೀಡಿದರು. ಪ್ರತಿವರ್ಷ ವೀರ ಯೋಧರ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸುತ್ತಿರುವ ಕೊಡವ ಮಕ್ಕಡ ಕೂಟ ಸಂಘಟನೆ ಇತರರಿಗೆ ಮಾದರಿಯಾಗಿದೆ ಎಂದು ಏರ್ ಮಾರ್ಷಲ್ ಕೊಡಂದೇರ ನಂದಾ ಕಾರ್ಯಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನಸಭೆಯ ಮಾಜಿ ಅಧ್ಯಕ್ಷಕೆ.ಜಿ.ಬೋಪಯ್ಯ ಮಾತನಾಡಿ ಭಾರತ–ಪಾಕ್ ನಡುವೆ ನಡೆದ ಯುದ್ಧದಲ್ಲಿ ಶತ್ರುಗಳ ವಿಮಾನವನ್ನು ಹೊಡೆದುರುಳಿಸಿ ದೇಶಕ್ಕಾಗಿ ವೀರ ಮರಣವನ್ನಪ್ಪಿದ ದೇವಯ್ಯ ಅವರು ದೇಶಪ್ರೇಮದಲ್ಲಿ ಎಲ್ಲರಿಗೂ ಮಾದರಿಯಾಗಿದ್ದಾರೆ. ತಮ್ಮ ಜೀವದ ಹಂಗನ್ನು ತೊರೆದು ಶತ್ರುಗಳೊಂದಿಗೆ ಹೋರಾಡಿ ದೇಶ ಪ್ರೇಮವನ್ನು ಮೆರೆದಿದ್ದಾರೆ ಎಂದು ಸ್ಮರಿಸಿದರು. ನಿವೃತ್ತ ಸೇನಾಧಿಕಾರಿ ಬಾಳೆಯಡ ಮಂದಪ್ಪ ಮಾತನಾಡಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ಕೆಎಸ್.ತಿಮ್ಮಯ್ಯ ಫೋರಂನ ಪ್ರಮುಖರಾದ ಉಳ್ಳಿಯಡ ಪೂವಯ್ಯ ಮಾತನಾಡಿ, ದೇಶಕ್ಕಾಗಿ ಬಲಿದಾನಗೈದ ದೇವಯ್ಯ ಅವರ ಪುಣ್ಯಸ್ಮರಣೆಯನ್ನು ಪ್ರತಿ ವರ್ಷ ಸೆ.7ರಂದು ರಾಜ್ಯವ್ಯಾಪಿ ಆಚರಿಸುವಂತಾಗಬೇಕು ಎಂದರು. ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತಕೆ.ಟಿ.ಬೇಬಿ ಮ್ಯಾಥ್ಯು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಸೈನಿಕರು ತಮ್ಮ ಜೀವದ ಹಂಗು ತೊರೆದು ದೇಶಸೇವೆಯಲ್ಲಿ ತೊಡಗಿರುವುದರಿಂದ ನಾವುಗಳು ಸುರಕ್ಷಿತರಾಗಿದ್ದೇವೆ. ಆದರೆ ದೇಶವನ್ನು ರಕ್ಷಿಸಿ ನಿವೃತ್ತರಾಗಿ ಬರುವ ಯೋಧರಿಗೆ ಇಂದು ಜೀವನ ಭದ್ರತೆ ಮತ್ತು ಗೌರವ ಇಲ್ಲದಾಗಿದೆ. ಸರಕಾರ ನಿವೃತ್ತ ಯೋಧರ ಬಗ್ಗೆ ಹೆಚ್ಚಿನ ಕಾಳಜಿ ತೋರಬೇಕುಎಂದರು.

ಕೊಡವ ಮಕ್ಕಡ ಕೂಟದ ಕಾರ್ಯದರ್ಶಿ ಪುತ್ತರಿರ ಕರುಣ್ ಕಾಳಯ್ಯ, ನಿರ್ದೇಶಕಿ ತೆನ್ನಿರ ಟೀನಾ, ಸಲಹೆಗಾರರಾದ ಐಚಂಡ ರಶ್ಮಿ ಮೇದಪ್ಪ, ಅಜ್ಜಮಾಡ ಒಕ್ಕದ ಅಧ್ಯಕ್ಷ ಲವ ಕುಶಾಲಪ್ಪ ಪ್ರಮುಖರಾದ ಅಜ್ಜಮಾಡ ಬೋಪಯ್ಯ, ಅಜ್ಜಮಾಡ ಚಂಗಪ್ಪ, ಅಜ್ಜಮಾಡ ಬೆಳ್ಯಪ್ಪ, ಅಜ್ಜಮಾಡ ರಮೇಶ್, ಅಜ್ಜಮಾಡ ಅಯ್ಯಣ್ಣ, ಅಜ್ಜಮಾಡ ಮಂಜುನಾಥ್, ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನ ಸ್ಥಾನಿಕ ಆಯುಕ್ತ ಹೆಚ್.ಆರ್.ಮುತ್ತಪ್ಪ ಜಿಲ್ಲಾ ತರಬೇತಿ ಆಯುಕ್ತ ಕೆ.ಯು.ರಂಜಿತ್, ಮಡಿಕೇರಿ ಕೊಡವ ಸಮಾಜದ ಉಪಾಧ್ಯಕ್ಷ ಕೇಕಡ ವಿಜು ದೇವಯ್ಯ, ಜಂಟಿ ಕಾರ್ಯದರ್ಶಿ ನಂದಿನೆರವಂಡ ದಿನೇಶ್, ಮಣವಟ್ಟಿರ ಚಿಣ್ಣಪ್ಪ ಹಾಜರಿದ್ದು ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಅವರಿಗೆ ಪುಷ್ಪನಮನ ಸಲ್ಲಿಸಿದರು.


ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ.

2200ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ, 61 ಮಂದಿಯಿಂದ ರಕ್ತದಾನ


ಚಾಮರಾಜನಗರದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ಚಾಮರಾಜನಗರ, ಸೆ.7– ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಅಂಗವಾಗಿ ನಗರದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತ ದಾನ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ನಗರದ ಅನುಭವ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ, ಜೆಎಸ್‌ಎಸ್ ಸಮುಚ್ಚಯ ಶಿಕ್ಷಣ ಸಂಸ್ಥೆಗಳು, ಚಾಮರಾಜನಗರ, ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆ, ಮೈಸೂರು ಹಾಗೂ ಕಿದ್ವಾಯಿ ಸ್ಮಾರಕ ಆಸ್ಪತ್ರೆ, ಬೆಂಗಳೂರು ಇವರು ಸಂಯುಕ್ತಾಶ್ರಯದಲ್ಲಿ ಜಗದ್ಗುರು ರಾಜಗುರು ತಿಲಕ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವದ ಅಂಗವಾಗಿ ನಡೆಸಿದ ಬೃಹತ್ ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರದಲ್ಲಿ 2200ಕ್ಕೂ ಹೆಚ್ಚು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಯುವ ಘಟಕದ ವತಿಯಿಂದ ನಡೆದ ರಕ್ತದಾನ ಶಿಬಿರದಲ್ಲಿ 61 ಮಂದಿ ರಕ್ತದಾನ ಮಾಡಿದರು. ಶಿಬಿರದಲ್ಲಿ ಅಗತ್ಯವಿರುವವರಿಗೆ ಉಚಿತ ಔಷಧಿ ವಿತರಿಸಲಾಯಿತು.

ಶ್ರೀಗಳ ಭಾವಚಿತ್ರಕ್ಕೆ ವಿವಿಧ ಮಠಾಧೀಶರು ಪುಷ್ಪಾರ್ಚನೆ ಮಾಡಿದರು. ನಂತರ ಮಠಾಧೀಶರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿದರು. ಹರವೆ ಮಠದ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಅಂಗವಾಗಿ ನಗರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ, ಜೆಎಸ್ ಎಸ್ ಸಮುಚ್ಚಯ ಶಿಕ್ಷಣ ಸಂಸ್ಥೆಗಳು, ಚಾಮರಾಜನಗರ, ಜೆಎಸ್ ಎಸ್ ವೈದ್ಯಕೀಯ ಸಂಸ್ಥೆ, ಮೈಸೂರು ಹಾಗೂ ಕಿದ್ವಾಯಿ ಸ್ಮಾರಕ ಆಸ್ಪತ್ರೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಸಣಾ ಮತ್ತು ರಕ್ತದಾನ ಶಿಬಿರ ಬಹಳ ಯಶಸ್ವಿಯಾಗಿ ನಡೆದಿದೆ ಎಂದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ವಿರಕ್ತ ಮಠದ ಚನ್ನಬಸವಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಮೂಡುಗೂರು ವಿರಕ್ತ ಮಠದ ಇಮ್ಮಡಿ ಉದ್ದಾನಸ್ವಾಮೀಜಿ, ಕಬ್ಬಹಳ್ಳಿ ಮಠದ ಗುರುಸಿದ್ದಸ್ವಾಮಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಯುವ ಘಟಕದ ಜಿಲ್ಲಾಧ್ಯಕ್ಷ ವಿ.ಗುರುಪ್ರಸಾದ್ ಸೋಮವಾರಪೇಟೆ, ಜೆಎಸ್ ಎಸ್ ಕಾಲೇಜಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ.ಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಗಾಯಿತ್ರಿ, ಉಪಾಧ್ಯಕ್ಷ ಮುರುಡೇಶ್ವರಸ್ವಾಮಿ, ಕೊಡಸೋಗೆ ಬಸವಣ್ಣ, ನಿರ್ದೇಶಕಿ ರತ್ನಮ್ಮ, ಗೀತಾ, ತಾಲೂಕು ಅಧ್ಯಕ್ಷ ಬಾಲಚಂದ್ರಮೂರ್ತಿ, ನಾಗೇಂದ್ರ, ಟಿ.ಗುರು ಮುಖಂಡರಾದ ಕೊಡಸೋಗೆ ಶಿವಬಸಪ್ಪ, ಬಿ.ಕೆ.ರವಿ ಕುಮಾರ್, ಪದಾಧಿಕಾರಿಗಳು ಹಾಜರಿದ್ದರು.

ರೈತರ ಕ್ಷಮೆಯಾಚನೆಗೆ ಆಗ್ರಹಿಸಿ ಡಿಕೆಶಿ ವಿರುದ್ಧ ಹೆದ್ದಾರಿ ತಡೆದು ರೈತರ ಪ್ರತಿಭಟನೆ



ರೈತರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಸೆ.7– ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರೊಂದಿಗೆ ಅಸಭ್ಯವಾಗಿ ವರ್ತಿಸಿ, ಗೂಂಡಾವರ್ತನೆ ಪ್ರದರ್ಶಿಸಿರುವುದನ್ನ ಖಂಡಿಸಿ ಭಾನುವಾರ ಕೆಲಕಾಲ ರಸ್ತೆ ತಡೆದು ಪ್ರತಿಭಟಿಸಲಾಯಿತು.

ತಾಲ್ಲೂಕಿನ ಸತ್ತೇಗಾಲ ಹೆದ್ದಾರಿ ಸರ್ಕಲ್‌ನಲ್ಲಿ ಜಮಾಯಿಸಿದ್ದ ರೈತ ಮುಖಂಡರುಗಳು ಡಿ.ಕೆ.ಶಿವಕುಮಾರ್ ವಿರುದ್ಧ ಧಿಕ್ಕಾರ ಕೂಗಿ, ರೈತರ ಕ್ಷಮೆಯಾಚನೆಗೆ ಆಗ್ರಹಿಸಿ ಕೆಲಕಾಲ ರಸ್ತೆ ತಡೆದು ಪ್ರತಿಭಟಿಸಿದರು. ಕೂಡಲೇ ಡಿ.ಕೆ. ಶಿವಕುಮಾರ್ ರೈತರ ಕ್ಷಮೆ ಕೇಳಬೇಕು ಎಂದರು.

ರೈತ ಈನಾಡಿನ ಅನ್ನದಾತ. ಅವರ ಬಗ್ಗೆ ಲಘುವಾಗಿ ಮಾತನಾಡುವುದು, ಗೂಂಡಾವರ್ತನೆ ತೋರುವುದು ಸರಿಯಲ್ಲ. ಇದು ಖಂಡನೀಯ ಎಂದು ತರಾಟೆಗೆ ತೆಗೆದುಕೊಂಡರು. ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾಸ್ಕರ್, ಜಿಲ್ಲಾ ಖಾಯಂ ಸದಸ್ಯ ರವಿನಾಯ್ಡು, ಜಿಲ್ಲಾ ಮಹಿಳಾ ಅಧ್ಯಕ್ಷರು ಮಾದಮ್ಮ, ತಾಲ್ಲೂಕು ಉಪಾಧ್ಯಕ್ಷರು ಚಾರ್ಲಿ, ಸತ್ತೇಗಾಲ ಗ್ರಾಮ ಘಟಕ ಅಧ್ಯಕ್ಷರು ಮಹದೇವ, ಚಿಕ್ಕಲ್ಲೂರು ಗ್ರಾಮಘಟಕ ಕಾರ್ಯದರ್ಶಿ ಕುಮಾರ್, ಇಕಡಹಳ್ಳಿ ಮಹದೇವಪ್ಪ, ಶಿವಕುಮಾರ್, ದಿವ್ಯ ಕುಮಾರ್, ರುಕ್ಕಿಬಾಯಿ, ಯುವ ಘಟಕ ಸಂಚಾಲಕ ಗುಣ, ಜೋಸೆಫ್, ಸೇಸುರಾಜ್, ಶಿವಲಿಂಗ, ಕೃಷ್ಣಪ್ಪ, ನಾಗಣ್ಣ, ನಂಜನಾಯಕ, ರಾಮೇಗೌಡ, ಪುಟ್ಟೇಗೌಡ ಇನ್ನಿತರು ಹಾಜರಿದ್ದರು.

ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮಕ್ಕೆ ಸೂಚನೆ

ಹನೂರು: ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿಯಲ್ಲೂ ಸಮಸ್ಯೆಯಾಗದಂತೆ ಪ್ರತಿಯೊಬ್ಬರೂ ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ತಹಸೀಲ್ದಾರ್ ಕೆ.ಎನ್. ಚೈತ್ರಾ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದ ಸಭಾಂಗಣದಲ್ಲಿ ಕುಡಿಯುವ ನೀರು ಸಂಬಂಧ ಆಯೋಜಿಸಿದ್ದ ಅಧಿಕಾರಿಗಳ ಸಭೆಯಲ್ಲಿ ಮಾಹಿತಿ ಪಡೆದು ಮಾತನಾಡಿದರು.

ಮೊಬೈಲ್‌ನಿಂದ ಮಕ್ಕಳಿಗೆ ಬಾಲ್ಯದಲ್ಲೆ ಕಣ್ಣಿನ ಸಮಸ್ಯೆ

ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಪುರಸಭೆ ಮುಖ್ಯಾಧಿಕಾರಿ ಕಳವಳ


ಗುಂಡ್ಲುಪೇಟೆ ಪಟ್ಟಣದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಪುರಸಭೆ ಮುಖ್ಯಾಧಿಕಾರಿ ಶರವಣ ಉದ್ಘಾಟಿಸಿದರು.

ಗುಂಡ್ಲುಪೇಟೆ, ಸೆ.7– ಇತ್ತೀಚಿನ ದಿನಗಳಲ್ಲಿ ಎಲ್ಲರಿಗೂ ಕಣ್ಣಿನ ಸಮಸ್ಯೆಗಳು ಹೆಚ್ಚಾಗುತ್ತಿದ್ದು ಕಾಲಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಗಮನಹರಿಸಬೇಕಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಶರವಣ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಭವನದ ಆವರಣದಲ್ಲಿ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಅನುಗ್ರಹ ಫೌಂಡೇಷನ್ ಮತ್ತು ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ದಿನಗಳಲ್ಲಿ ಊಟ ತಿಂಡಿ ಮಾಡಲು ನಿರಾಕರಿಸುವ ಮಕ್ಕಳಿಗೆ ಆಕಾಶದಲ್ಲಿ ಚಂದ್ರನನ್ನು ತೋರಿಸುತ್ತಿದ್ದರು. ಆದರೆ ಇತ್ತೀಚೆಗೆ ಪಾಲಕರು ತಮ್ಮ ಮಕ್ಕಳ ಕೈಗೆ ಮೊಬೈಲ್ ಕೊಡುತ್ತಿರುವುದರಿಂದ ಮಕ್ಕಳಿಗೆ ಬಾಲ್ಯದಲ್ಲಿಯೇ ಕಣ್ಣಿನ ಸಮಸ್ಯೆಗಳು ಉಂಟಾಗುತ್ತಿವೆ. ಅದ್ದರಿಂದ ಮಕ್ಕಳು ಎಷ್ಟೇ ಹಠ ಮಾಡಿದರೂ ಮೊಬೈಲ್ ಕೊಡದೆ ಅವರ ಕಣ್ಣಿನ ಆರೋಗ್ಯದ ಬಗ್ಗೆ ಗಮನಹರಿಸಬೇಕು.ಇತ್ತೀಚಿನ ದಿನಗಳಲ್ಲಿ ಕಣ್ಣಿನ ಚಿಕಿತ್ಸೆ ದುಬಾರಿಯಾಗುತ್ತಿದ್ದು ಸ್ವಯಂಸೇವಾ ಸಂಸ್ಥೆಗಳು ಶಿಬಿರಗಳನ್ನು ಆಯೋಜಿಸುವ ಮೂಲಕ ಉತ್ತಮ ಕಾರ್ಯ ಮಾಡುತ್ತಿವೆ. ಇದು ಇನ್ನೂ ಹೆಚ್ಚಿನ ಜನರಿಗೆ ತಲುಪಿಸುವಂತಾಗಬೇಕು. ಸಾರ್ವಜನಿಕರು ಇಂಥಾ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಅರವಿಂದ ಕಣ್ಣಾಸ್ಪತ್ರೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ವಿಜಯಕಾಂತ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಣ್ಣಿನ ಮೇಲೆ ಅತಿಯಾದ ಒತ್ತಡ ಬೀಳುತ್ತಿರುವುದರಿಂದ ಸಮಸ್ಯೆ ಹೆಚ್ಚಾಗುತ್ತಿದ್ದು, ಕಾಲಕಾಲಕ್ಕೆ ತಮ್ಮ ಕಣ್ಣುಗಳ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು. ಸಕ್ಕರೆ ಕಾಯಿಲೆಯು ಮನುಷ್ಯರ ಕಣ್ಣಿನ ದೃಷ್ಟಿಯ ಮೇಲೆ ತುಂಬಾ ಪರಿಣಾಮ ಬೀರುತ್ತಿದ್ದು ಡಯಾಬಿಟಿಕ್ ರೆಟಿನೋಪತಿಯಿಂದ ಕಣ್ಣಿನ ನರಗಳು ದುರ್ಬಲವಾಗುತ್ತವೆ. 40 ವರ್ಷ ಮೇಲ್ಪಟ್ಟ ಎಲ್ಲರೂ ಕನಿಷ್ಟ ವರ್ಷಕ್ಕೊಮ್ಮೆಯಾದರೂ ಕಣ್ಣಿನ ಆರೋಗ್ಯ ತಪಾಸಣೆಗೆ ಒಳಗಾಗಬೇಕು ಎಂದರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್. ನಾಗೇಂದ್ರ, ಶಿಬಿರದ ಪ್ರಾಯೋಜಕರಾದ ಸಂತೋಷ್, ಸುನಿಲ್, ಮಲ್ಲೇಶ್, ಪಿಕಾರ್ಡ್ ಬ್ಯಾಂಕ್‌ನ ಎನ್.ನಾಗೇಂದ್ರ, ಎಂ.ಸಿ.ಶಿವಪ್ರಸಾದ್, ಶಂಕರನಾರಾಯಣ ಜೋಯಿಸ್, ಸುಬ್ಬುರಾವ್, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಜಿಲ್ಲಾ ಸಂಚಾಲಕ ರಾ. ಬಾಬು, ತಾಲೂಕು ಅಧ್ಯಕ್ಷ ಕೆ.ಎನ್.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಭೈರೇಶ್ ಗಾಣಿಗ್, ಖಜಾಂಚಿ ಎಂ.ಮಲ್ಲು, ನಿರ್ದೇಶಕರಾದ ವೀರಭದ್ರಪ್ಪ, ಸುರೇಶ್, ಸಿದ್ದಪ್ಪ, ಅನುಗ್ರಹ ಫೌಂಡೇಶನ್‌ನ ಕೆ.ರಮೇಶ್, ಪುಟ್ಟಮ್ಮ ಇದ್ದರು.

ಈ ಶಿಬಿರದಲ್ಲಿ ಡಾ. ಪ್ರವೀಣಾ, ಡಾ. ದೀಪಿಕಾ, ಡಾ.ವರ್ಗೀಸ್ ಅವರ ತಂಡ 90ಕ್ಕೂ ಹೆಚ್ಚಿನ ಹೊರರೋಗಿಗಳನ್ನು ತಪಾಸಣೆಗೊಳಪಡಿಸಿ ಶಸ್ತ್ರಚಿಕಿತ್ಸೆ ಅಗತ್ಯವಿದ್ದ 26 ಜನರನ್ನು ಕೊಯಮತ್ತೂರಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು.

ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ


ಚಾಮರಾಜನಗರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಸಭೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು.

ಚಾಮರಾಜನಗರ. ಸೆ.7– 2021–22ನೇ ಸಾಲಿನ ನಮೂನೆ–57ನೇ ಕಾಲಂ ನಡಿ ಮೊದಲನೇ ಹಂತದಲ್ಲಿ ಕಡತಗಳ ಪರಿಶೀಲನೆ ನಗರದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹರದನಹಳ್ಳಿ ಹೋಬಳಿಯಲ್ಲಿ 10 ಅರ್ಜಿಗಳು ಸಲ್ಲಿಕೆಯಾಗಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಪರಿಶೀಲಿಸಿ ಸಾಗುವಳಿ ಚೀಟಿ ಪಡೆಯಲು ಅನುಮೋದಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಇದೇ ವೇಳೆ ಮಾತನಾಡಿ, 10 ಮಂದಿ ಅರ್ಜಿದಾರರಿಗೆ ಸಕಾಲಕ್ಕೆ ಹಣಪಾವತಿಸಿ ಸಾಗುವಳಿಪತ್ರ ಪಡೆಯಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಫಲಾನುಭವಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು. ಸಾಗುವಳಿ ಸಕ್ರಮೀಕರಣ ಸಮಿತಿ ಸದಸ್ಯರಾದ ಬಿಸಲವಾಡಿರವಿ, ಮಲ್ಲಿಕ್ ಚನ್ನೇಗೌಡ, ಮಹಾಲಿಂಗು, ತಹಸೀಲ್ದಾರ್ ಗಿರಿಜಾ, ಆರ್‌ಐ. ಗ್ರಾಮ ಆಡಳಿತಾಧಿಕಾರಿಗಳು ಹಾಜರಿದ್ದರು.

ಮಂಗಳಮ್ಮ, ಮಹದೇವಯ್ಯ ಚಾರಿಟಬಲ್ ಟ್ರಸ್ಟ್‌ನಿಂದ ಮಕ್ಕಳಿಗೆ ನೋಟ್‌ಪುಸ್ತಕ ವಿತರಣೆ

ಚಾಮರಾಜನಗರ, ಸೆ.7– ತಾಲೂಕಿನ ಹರವೆ ಗ್ರಾಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಂಗಳಮ್ಮ ಮತ್ತು ಮಹದೇವಯ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

ಗ್ರಾಮ ಪಂಚಾಯತಿ ಕಚೇರಿಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಗ್ರಾಪಂ ಸದಸ್ಯ ಗಿರೀಶ್ ಮಾತನಾಡಿ, ಪೊಲೀಸ್ ನಾಗೇಂದ್ರ ತಂದೆ–ತಾಯಿ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ಸಮಾಜಮುಖಿ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದದ್ದು ನಾಗೇಂದ್ರ ಅವರು ಇನ್ನು ಉತ್ತಮ ಮಟ್ಟದಲ್ಲಿ ಬೆಳೆದು ಮತ್ತಷ್ಟು ಸಮಾಜಸೇವೆ ಮಾಡುವಂತಾಗಲಿ ಎಂದು ಶುಭ ಆಶಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಮಹದೇವಯ್ಯ ಗ್ರಾಪಂ ಮಾಜಿ ಅಧ್ಯಕ್ಷೆ ಮಂಗಳಮ್ಮ, ಅನುಷಾ, ಅನಿತಾ, ಅಧ್ಯಕ್ಷ ನಾಗಪ್ಪ, ಸದಸ್ಯರಾದ ಮಹದೇವಸ್ವಾಮಿ, ನಾಗೇಶ್, ಗಿರೀಶ್, ಇತರರು ಹಾಜರಿದ್ದರು.


ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

ಮೈಸೂರು ಮಿತ್ರ

ಸೋಮವಾರ 8 ಸೆಪ್ಟೆಂಬರ್ 2025

ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 8.68 ಲಕ್ಷ ಲಾಭ

ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ



ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಉದ್ಘಾಟಿಸಿದರು.

ತಿ.ನರಸೀಪುರ, ಸೆ.7– ಷೇರುದಾರರು ಹಾಗೂ ರೈತರ ಸಹಕಾರದಿಂದ 10 ವರ್ಷಗಳ ನಂತರ ಸಹಕಾರ ಸಂಘ 8,68,385 ರೂ. ನಿವ್ವಳ ಲಾಭಗಳಿಸಿ ಅಭಿವೃದ್ಧಿ ಪಥದತ್ತ ಮುನ್ನಡೆದಿದೆ ಎಂದು ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 10 ವರ್ಷಗಳ ಹಿಂದೆ ಸಂಘದ ಅಧ್ಯಕ್ಷನಾದಾಗ ಸಂಘ 85 ಲಕ್ಷ ರೂ. ಸುಸ್ತಿ ಹಾಗೂ 45 ಲಕ್ಷ ರೂ. ನಷ್ಟದಲ್ಲಿತ್ತು. ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರ ಸತತ ಪರಿಶ್ರಮದಿಂದ ಸುಸ್ತಿ ಶೂನ್ಯವಾಗಿ, ಸಂಘ ಲಾಭದತ್ತ ಮುನ್ನಡೆದಿದೆ. ಪ್ರಸ್ತುತ 10 ಲಕ್ಷ ಠೇವಣಿ ಇಡಲಾಗಿದ್ದು, 10 ಮಳಿಗೆಗಳನ್ನು ನಿರ್ಮಿಸಲಾಗಿದೆ ಎಂದರು.

ಸಹಕಾರ ಸಂಘದ ಚುನಾವಣೆಯಲ್ಲಿ ನನಗೆ 3ನೇ ಬಾರಿಗೆ ಅಧ್ಯಕ್ಷ ಸ್ಥಾನ ದೊರಕಿಸಿಕೊಟ್ಟ ಎಲ್ಲಾ ಸಹಕಾರಿ ಬಂಧುಗಳಿಗೆ ಋಣಿಯಾಗಿದ್ದೇನೆ. ಸಂಘದಲ್ಲಿ 'ಎ' ತರಗತಿಯ 1346 ಮಂದಿ ಷೇರುದಾರರಿದ್ದು, 82,16,416 ಲಕ್ಷ ರೂ. ಷೇರು ಬಂಡವಾಳ ಹೊಂದಲಾಗಿದೆ. ಕೆಸಿಸಿ ಕಬ್ಬು ಬೆಳೆ ಸಾಲವಾಗಿ 530 ರೈತರಿಗೆ 5,66,97,000 ರೂ. ವಿತರಿಸಲಾಗಿದೆ ಎಂದರು.

> ಸಂಘ ಲಾಭದಲ್ಲಿ ಮುನ್ನಡೆಯಲು ಷೇರುದಾರರು ಹಾಗೂ ಸಾಲ ಪಡೆದವರ ಸಹಕಾರ ಅಗತ್ಯ. ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿಸಿದರೆ ಸಂಘ ಅಭಿವೃದ್ಧಿ ಕಾಣಲು ಸಾಧ್ಯ. ಸಂಘದಿಂದ ಕೆಸಿಸಿ ಸಾಲ ಪಡೆದ 16 ರೈತರು 16 ಲಕ್ಷ ರೂ.ಗಳಿಗೆ ಸುಸ್ತಿದಾರರಾಗಿದ್ದು, ಸಾಲ ವಸೂಲಾತಿಗೆ ಜಿಲ್ಲಾ ಬ್ಯಾಂಕ್ ಆದೇಶದ ಮೇರೆಗೆ ವಕೀಲರಿಂದ ನೋಟೀಸ್ ಕಳುಹಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಹೀಗಾಗಿ ರೈತರು ಕೋರ್ಟ್ ಕಚೇರಿ ಎಂದು ಅಲೆಯದೇ ಪಡೆದ ಸಾಲ ಮರುಪಾವತಿಸಿ. – ಮಲ್ಲಣ್ಣ, ಕಸಬಾ ಪಿಎಸಿಎಸ್ ಅಧ್ಯಕ್ಷ.

545 ಸದಸ್ಯರಿಂದ ಕೆಸಿಸಿ ಕಬ್ಬು ಸಾಲದ ಬಾಬ್ತು 5,82,91,000 ಬರಬೇಕಿದೆ. ಐವರಿಂದ ಮಧ್ಯಮಾವಧಿ ಸಾಲ 1,97,840 ರೂ., 40 ಮಂದಿಯಿಂದ ಎಸ್‌ಎಚ್‌ಜಿ ಸಾಲ 1,35,97,074 ರೂ. ಹಾಗೂ 13 ಮಂದಿ ಸ್ವಂತ ಬಂಡವಾಳ ಸಾಲ 8,36,950 ರೂ., ಪಿಗ್ಮಿ ಠೇವಣಿ ಸಾಲವಾಗಿ 18,13,040 ರೂ.ಗಳ ಬಾಕಿ ಬರಬೇಕಿದ್ದು, ಒಟ್ಟಾರೆ 626 ಸದಸ್ಯರಿಗೆ 7,49,48,604 ರೂ. ಸಾಲ ವಿತರಿಸಲಾಗಿದೆ ಎಂದರು.

ಹಣ ದುರುಪಯೋಗ ಪಡಿಸಿಕೊಂಡ ಹಿನ್ನೆಲೆಯಲ್ಲಿ ಮಾಜಿ ಸಿಇಓ ಟಿ.ಎನ್. ಕಿರಣ್ ಮೇಲೆ ಸಹಕಾರ ಸಂಘಗಳ ನಿಬಂಧಕ ಕಾಯ್ದೆಯನ್ವಯ ಸಿವಿಲ್ ಮೊಕದ್ದಮೆ ದಾಖಲಿಸಬೇಕಾಗಿದ್ದು, ಆತನಿಂದ ಬರಬೇಕಾದ 13,50,658 ರೂ. ವಸೂಲಾತಿಗೆ ಆತನ ನಿವೇಶನ ಮುಟ್ಟುಗೋಲು ಹಾಕಿಕೊಳ್ಳಲು ನೋಟೀಸ್ ಜಾರಿ ಮಾಡಲಾಗಿದೆ ಎಂದರು.

ಮುಂದಿನ ಆರ್ಥಿಕ ವರ್ಷದಲ್ಲಿ 15 ಕೋಟಿ ರೂ. ಕೆಸಿಸಿ ಸಾಲ ವಿತರಿಸುವ ಗುರಿ ಹೊಂದಲಾಗಿದ್ದು, ಇದಕ್ಕೆ ಸರ್ವ ಸದಸ್ಯರ ಸಹಕಾರ ಅಗತ್ಯ. ಮಹಿಳಾ ಸಂಘಗಳಿಗೂ 5 ಕೋಟಿ ಸಾಲ ನೀಡುವ ಜೊತೆಗೆ ಸಹಕಾರ ಸಂಘದ ಹಿಂದಿನ ಖಾಲಿ ಜಾಗದಲ್ಲಿ ಗೋದಾಮು ನಿರ್ಮಾಣ ಮಾಡುವ ಸಂಬಂಧ ಮುಂದಿನ ಆಡಳಿತ ಮಂಡಳಿಯಲ್ಲಿ ಚರ್ಚಿಸುವುದಾಗಿ ತಿಳಿಸಿದರು.

ಸಂಘ ಸ್ಥಾಪನೆಯಾಗಿ ಮುಂದಿನ ಆರ್ಥಿಕ ವರ್ಷಕ್ಕೆ 50 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ರೈತ ಮುಖಂಡರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಸಾಧನೆ ತೋರಿದ ಷೇರುದಾರರು ಮತ್ತು ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್, ನಿರ್ದೇಶಕರಾದ ಎಂ.ನಾಗರತ್ನ, ಎನ್.ಶೇಖರ್, ಮಹಾಲಿಂಗಪ್ಪ, ನಾಗಮ್ಮ, ಬಿ.ಸುಂದರಸ್ವಾಮಿ, ಬಸವರಾಜು, ಎಂ.ಮಹದೇವಯ್ಯ, ಬಿ.ಎಂ.ಮಹದೇವಸ್ವಾಮಿ, ಬಿ.ರಾಘವೇಂದ್ರ, ಪ್ರಕಾಶ್ ಕುಮಾರ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್, ಪ್ರಭಾರ ಸಿಇಓ ಡಿ.ಎಂ.ಶಿವಕುಮಾರ್, ದಿವ್ಯಶ್ರೀ, ಸುಮಿತ್ರ, ಎನ್.ಲೋಕೇಶ್, ಫ್ಯಾನ್ಸಿ ಮೋಹನ್, ಸಿ.ಮಹದೇವು, ತಿರುಮಕೂಡಲು ಲಕ್ಷ್ಮಣ್, ಟಿ.ಎಂ.ನಾಗಣ್ಣ, ಸಾಲೂರು ಸ್ವಾಮಿ, ಟಿಎಪಿಸಿಎಂಎಸ್ ಕಾರ್ಯದರ್ಶಿ ರಘುನಂದನ್ ಸೇರಿದಂತೆ ಷೇರುದಾರರು, ಸದಸ್ಯರು ಹಾಜರಿದ್ದರು.

ರೈತರು ಸಕಾಲಕ್ಕೆ ಸಾಲ ಮರುಪಾವತಿಸಿ

ಹೆಗ್ಗಡಹಳ್ಳಿ ಪಿಎಸಿಎಸ್ ಅಧ್ಯಕ್ಷ ಹೆಚ್.ಬಿ.ರೇವಣ್ಣ ಮನವಿ



ಸಂಘದ ಅಧ್ಯಕ್ಷ ಹೆಚ್.ಬಿ.ರೇವಣ್ಣ ಮಾತನಾಡಿದರು.

ನಂಜನಗೂಡು, ಸೆ.7– ಸಹಕಾರ ಸಂಘ ಲಾಭದತ್ತ ಮುನ್ನಡೆಯಲು ರೈತರು ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರು ಪಾವತಿಸಬೇಕು ಎಂದು ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಬಿ. ರೇವಣ್ಣ ಮನವಿ ಮಾಡಿದರು.

ತಾಲೂಕಿನ ಹೆಗ್ಗಡಹಳ್ಳಿ ಪಿಎಸಿಎಸ್ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಈ ಬಾರಿ ಸಂಘ, ಲಕ್ಷ ನಷ್ಟದಲ್ಲಿದ್ದು, ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಅನುಷ್ಠಾನಕ್ಕೆ ಬಾರದ ಹಿನ್ನೆಲೆಯಲ್ಲಿ ಹೊಸದಾಗಿ ಸಾಲ ಮಂಜೂರಾತಿ ಆಗಿಲ್ಲ. ಬ್ಯಾಂಕ್ ಆಡಳಿತ ಮಂಡಳಿ ಅನುಷ್ಠಾನಕ್ಕೆ ಬಂದ ನಂತರ ಸುಮಾರು 50 ಲಕ್ಷ ಬೆಳೆ ಸಾಲ ವಿತರಿಸಲು ಉದ್ದೇಶಿಸಲಾಗಿದೆ. ಅಲ್ಲದೇ ಮೋಟರ್ ರಿಪೇರಿ ಸೇರಿದಂತೆ ವಿವಿಧ ಖರ್ಚುಗಳಿಗೆ ರೈತರಿಗೆ ನೆರವಾಗಲು 70 ಲಕ್ಷ ಅಲ್ಪಾವಧಿ ಸಾಲ ವಿತರಿಸಲು ಉದ್ದೇಶಿಸಲಾಗಿದೆ. ಹೈನುಗಾರಿಕೆ ಉತ್ತೇಜಿಸುವ ಸಲುವಾಗಿ 100 ಮಂದಿಗೆ 14 ಲಕ್ಷ ಹೈನುಗಾರಿಕೆ ಸಾಲ ಕೊಡಲು ತೀರ್ಮಾನಿಸಲಾಗಿದೆ. ಈಗಾಗಲೇ ಸಂಘದಿಂದ 696 ಫಲಾನುಭವಿಗಳಿಗೆ 4.31 ಕೋಟಿ ರೂ. ಸಾಲ ವಿತರಿಸಲಾಗಿದೆ. ಸರ್ಕಾರ ಬಡ್ಡಿ ಮನ್ನಾ ಮಾಡಿರುವುದರಿಂದ ರೈತರು ಸಕಾಲದಲ್ಲಿ ಸಾಲ ಪಾವತಿಸಬೇಕು. ಆಗ ಮಾತ್ರ ಸಹಕಾರ ಸಂಘಗಳು ಆರ್ಥಿಕವಾಗಿ ಲಾಭದಲ್ಲಿ ಮುನ್ನಡೆಯಲು ಸಾಧ್ಯ ಎಂದರು.

ಸಂಘದ ಉಪಾಧ್ಯಕ್ಷ ಬಸವಶೆಟ್ಟಿ, ನಿರ್ದೇಶಕರಾದ ಕೆ.ವಿ.ಶಿವಬಸಪ್ಪ, ಹೆಚ್.ಎಂ.ಮಲ್ಲೇಶ್, ಶಿವಪ್ರಕಾಶ್, ಮಹದೇವಸ್ವಾಮಿ, ಚಿಕ್ಕನಿಂಗಯ್ಯ, ವೆಂಕಟೇಶ್, ಕಮಲಮ್ಮ, ನಾಗಮ್ಮ, ನಿರಂಜನ್, ಸಿಇಓ ಹೆಚ್.ಎಸ್. ರವಿ, ಅರ್ಪಿತ ಸೇರಿದಂತೆ ಸಂಘದ ಸದಸ್ಯರು ಹಾಗೂ ಹಲವರಿದ್ದರು.

ಸರಗೂರಲ್ಲಿ ನಾರಾಯಣ ಗುರು ಜಯಂತಿ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸರಗೂರು, ಸೆ.7– ಜಾತಿ ಆಧಾರಿತ ತಾರತಮ್ಯ ನಿಲ್ಲಲು ನಾರಾಯಣ ಗುರುಗಳ ಕೊಡುಗೆ ಅಪಾರ ಎಂದು ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಭಾನುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ನಾರಾಯಣ ಗುರು ಜಯಂತಿಯಲ್ಲಿ ಮಾತನಾಡಿದ ಅವರು, ನಾರಾಯಣ ಗುರುಗಳು ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಬಗ್ಗೆ ಅಸಮಾಧಾನ ಹೊಂದಿದ್ದರು. ಅಲ್ಲದೇ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಿದ್ದರು. ನಾರಾಯಣ ಗುರುಗಳು ಜಾತಿ, ಧರ್ಮದ ಭೇದವಿಲ್ಲದೆ ಪ್ರತಿಯೊಬ್ಬರೂ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಹಕ್ಕಿದೆ ಎಂದು ಪ್ರತಿಪಾದಿಸಿದರು.

ನಂತರದ ವರ್ಷಗಳಲ್ಲಿ ಅವರು ಕೇರಳದ ವಿವಿಧೆಡೆ ಕ್ರಾಂತಿಕಾರಿ ಬದಲಾವಣೆಗಳಿಗೆ ಹಲವು ದೇವಾಲಯಗಳನ್ನು ಒಳಪಡಿಸಿದರು. ಸಾಮಾಜಿಕ ಸ್ತರದ ವಿದ್ಯಾರ್ಥಿಗಳಿಗೆ ಶಾಲೆ ಸ್ಥಾಪಿಸಿದರು ಮತ್ತು ಅವರ ಜಾತಿ ಲೆಕ್ಕಿಸದೆ ಉಚಿತ ಶಿಕ್ಷಣ ನೀಡಿದರು ಎಂದರು.

ಪಪಂ ಅಧ್ಯಕ್ಷೆ ರಾಧಿಕಾ ಮಾತನಾಡಿ, ಕೇರಳದಲ್ಲಿ ಕಮ್ಯೂನಿಸ್ಟರ ನಡುವೆ ಸನಾತನ ಸಂಸ್ಕೃತಿ ಪಸರಿಸಿದ ಕೀರ್ತಿ ನಾರಾಯಣ ಗುರುಗಳಿಗೆ ಸಲ್ಲುತ್ತದೆ. ಕರಾವಳಿ ಭಾಗದಲ್ಲೂ ಬಡ ಜನರ ಉದ್ಧಾರಕ್ಕೆ ಭದ್ರ ಬುನಾದಿ ಹಾಕಿದವರಲ್ಲಿ ನಾರಾಯಣ ಗುರುಗಳು ಮೊದಲಿಗರು ಎಂದರು.

ವರ್ತಕರ ಮಂಡಳಿ ಮಾಜಿ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ, ಸರಗೂರು ಪಿಯು ಕಾಲೇಜಿನ ಉಪನ್ಯಾಸಕ ಹಾಲಪ್ಪ ಹಾಗೂ ಹಳಿಯೂರು ಸರ್ಕಾರಿ ಶಾಲೆ ಶಿಕ್ಷಕ ರಂಗನಾಥ್ ಮಾತನಾಡಿದರು.

ಇದಕ್ಕೂ ಮುನ್ನ ತಹಸೀಲ್ದಾರ್ ಪರಶಿವಮೂರ್ತಿ ಹಾಗೂ ಗಣ್ಯರು ಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಪಪಂ ಸದಸ್ಯರಾದ ನೂರಳಸ್ವಾಮಿ, ಚೈತ್ರ, ಚೆಲುವಕೃಷ್ಣ, ಕಾರ್ಯಾಧ್ಯಕ್ಷ ತಿಮ್ಮೇಗೌಡ, ಸಮಾಜದ ಯಜಮಾನ ವೆಂಕಟೇಶ್, ಅಧ್ಯಕ್ಷ ಎಸ್.ಎನ್. ನಾಗರಾಜು, ಖಜಾಂಚಿ ಟಿ.ಕರಿಯಪ್ಪ, ಮುಖಂಡರಾದ ರವಿಗೌಡ, ಲೋಕನಾಥ್, ಬಸವರಾಜು, ಎಸ್.ಎನ್.ಕೃಷ್ಣಪ್ಪ, ದಾಸೇಗೌಡ, ಎಸ್.ಎನ್.ರಾಮಚಂದ್ರ, ವಕೀಲರಾದ ಮಂಜುಳ, ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಶ್ರೀನಾಥ್, ಕ್ರೈಂ ಬ್ರಾಂಚ್ ಇನ್ಸ್‌ಪೆಕ್ಟರ್ ಗೋಪಾಲ್, ರವಿಚಂದ್ರನ್, ಮುಜೀಬ್, ಷರೀಫ್, ಕುಮಾರ್, ಸುಷ್ಮಿತಾ ಇನ್ನಿತರರಿದ್ದರು.

ಹೋಬಳಿ ಮಟ್ಟದ ಕ್ರೀಡಾಕೂಟ

ಭೇರ್ಯ ಸರ್ಕಾರಿ ಶಾಲೆಗೆ ಸಮಗ್ರ ಪ್ರಶಸ್ತಿ



ಶಾಲೆ ವತಿಯಿಂದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಭೇರ್ಯ, ಸೆ.7– ಸತತ ಐದಾರು ವರ್ಷದಿಂದ ಹೋಬಳಿ ಮಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಶಾಲೆ ವಿದ್ಯಾರ್ಥಿಗಳು ಗೆಲುವು ಸಾಧಿಸಿ ಸಮಗ್ರ ಪಾರಿತೋಷಕ ಪ್ರಶಸ್ತಿ ಪಡೆದು, ಶಾಲೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ ಎಂದು ಭೇರ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಶಿವಪ್ಪ ತಿಳಿಸಿದರು.

ಪಟ್ಟಣದ ಶ್ರೀಕೃಷ್ಣರಾಜೇಂದ್ರ ಕ್ರೀಡಾಂಗಣದಲ್ಲಿ ನಡೆದ 2025–26ನೇ ಸಾಲಿನ ಹೋಬಳಿ ಮಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಭಾಗವಹಿಸಿ ಸಮಗ್ರ ಪಾರಿತೋಷಕ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಕ್ರೀಡಾಕೂಟದ 10ಕ್ಕೂ ಹೆಚ್ಚು ಸ್ಪರ್ಧೆಯಲ್ಲಿ ನಮ್ಮ ಶಾಲೆ ಮಕ್ಕಳು ಭಾಗವಹಿಸಿದ್ದರು. ಈ ಪೈಕಿ ಬಾಲಕಿಯರ ವಿಭಾಗದಲ್ಲಿ 5 ಪ್ರಥಮ ಹಾಗೂ ಏಕೈಕ ದ್ವಿತೀಯ ಸ್ಥಾನ ಪಡೆದರೇ, ಬಾಲಕರ ವಿಭಾಗದಿಂದ 4 ಪ್ರಥಮ ಹಾಗೂ 3 ದ್ವಿತೀಯ ಸ್ಥಾನ ಪಡೆದು ಸಮಗ್ರ ಪಾರಿತೋಷಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ದೈಹಿಕ ಶಿಕ್ಷಕಿ ಪುಷ್ಪಲತಾ ಮಾತನಾಡಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳು ಮುಖ್ಯ. ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವವಿದೆ ಎಂದರು.


ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ಗೆಲುವು ಸಾಧಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುವುದು ಸಂತಸ ತಂದಿದೆ. ಮಂಗಳವಾರ ನಡೆಯುವ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದು ವಿಜೇತರಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಾಲಕರ ವಿಭಾಗ: ಗುಂಡು ಎಸೆತ– ನಂದನ್ ಪ್ರಥಮ, ತಟ್ಟೆ ಎಸೆತ– ಮಹಮ್ಮದ್ ಫಿರೋಜ್ ದ್ವಿತೀಯ, ಉದ್ದ ಜಿಗಿತ– ಜೈನ್ ದ್ವಿತೀಯ, ಎತ್ತರ ಜಿಗಿತ– ವಿಜಯ್ ಪ್ರಥಮ, 100ಮೀ ಓಟ– ಜೈನ್ ಪ್ರಥಮ, 400 ಮೀ. ಓಟ– ಸಂಜಯ್ ದ್ವಿತೀಯ, 400 ಮೀ. ರೀಲೆ ಓಟ: ಪ್ರಥಮ, ಥ್ರೋ ಬಾಲ್ ಪ್ರಥಮ ಹಾಗೂ **ಬಾಲಕಿಯರ ವಿಭಾಗ**: ಉದ್ದ ಜಿಗಿತ– ಪಲ್ಲವಿ ದ್ವಿತೀಯ, ಥ್ರೋ ಬಾಲ್ ಪ್ರಥಮ, 100 ಮೀ ಓಟ ಪಲ್ಲವಿ ಪ್ರಥಮ, ತಟ್ಟೆ ಎಸೆತ– ಪಲ್ಲವಿ ಪ್ರಥಮ, ಗುಂಡು ಎಸೆತ– ಸಂಶಿನ್ ಹೆಚ್.ಎಂ. ಪ್ರಥಮ ಸ್ಥಾನ ಪಡೆದು ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಇದೇ ವೇಳೆ ಕ್ರೀಡೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಶಾಲೆಯಿಂದ ಅಭಿನಂದಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ರೇವಣ್ಣ ಶಿಕ್ಷಕರಾದ ಮಾನಸ, ವಿಜಯಕುಮಾರಿ, ವನಿತಾಬಾಯಿ, ರೇಖಾ, ಕಾವ್ಯಶ್ರೀ, ಅರ್ಪಿತಾ ಮೂರ್ತಿ, ಅಸ್ಮೀಯಭಾನು ಇತರರಿದ್ದರು.

ಕೋಟೆಯಲ್ಲಿ ಜೆಡಿಎಸ್ ಸಂಘಟನೆಗೆ ಶ್ರಮಿಸುತ್ತೇನೆ

ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ



ಜೆಡಿಎಸ್ ಮುಖಂಡ ಕೃಷ್ಣನಾಯಕ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಸೆ.7– ಜೆಡಿಎಸ್ ಪಕ್ಷ ಸಂಘಟಿಸುವ ನಿಟ್ಟಿನಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೇವೆ ಎಂದು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಮಾಗುಡಿಲು ಗ್ರಾಮಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಜೆಡಿಎಸ್ ಸಂಘಟಿಸುವ ನಿಟ್ಟಿನಲ್ಲಿ ಪಕ್ಷದ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡಗಳ ಸಮ್ಮುಖದಲ್ಲಿ ವಿವಿಧ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೇನೆ ಎಂದ ಅವರು, ಕೋಟೆಗೆ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗಮಿಸಲಿದ್ದು, ಬೃಹತ್ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗುವುದು. ಕಾರ್ಯಕ್ರಮದಲ್ಲಿ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಗೊಳ್ಳಲಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಸಂಘಟಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ಕೃಷ್ಣನಾಯಕ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ಯುವ ಮುಖಂಡ ಚರಣ್, ಗ್ರಾಮದ ಯಜಮಾನರಾದ ನಾಗೇಂದ್ರ, ಗಂಗಾಧರ ಗೌಡ, ಶಿವಲಿಂಗೇಗೌಡ, ಬೆಟ್ಟನಾಯಕ, ವಾಲ್ಮೀಕಿ ಸಿದ್ದರಾಜು, ಪಂಚಾಯಿತಿ ಸದಸ್ಯ ರವಿ, ರಾಮಚಂದ್ರ, ಮಾಜಿ ಅಧ್ಯಕ್ಷ ಸೋಮಯ್ಯ, ಶಿವುಕುಮಾರ್, ಪ್ರಸಾದ್, ಕುಮಾರ್, ಸುಧೀರ್, ವಕೀಲರಾದ ಯೋಗೇಶ್, ಇಂದ್ರನಾಯಕ, ತಿಮ್ಮನಾಯಕ, ಕುಮಾರ, ವೆಂಕಟನಾಯಕ, ಗ್ರಾಪಂ ಸದಸ್ಯ ಚೆನ್ನನಾಯಕ, ಚಂದ್ರ ನಾಯಕ, ಕಾಳಸ್ವಾಮಿ, ಪುಟ್ಟ ಸಿದ್ದನಾಯ್ಕ, ಹಂಪಾಪುರ, ಹೊಸ ಬಿದರಹಳ್ಳಿ, ಬಸಾಪುರ, ಎನ್.ಬೇಗೂರು, ಮಾಗುಡಿಲು, ಹಲಸೂರು, ಬೀರಂಬಳ್ಳಿ, ದೇವಲಾಪುರ, ಇನ್ನು ವಿವಿಧ ಗ್ರಾಮಗಳ ಎಲ್ಲಾ ಸಮಾಜದ ಮುಖಂಡರು ಹಾಜರಿದ್ದರು.

ಹೆಮ್ಮರಗಾಲದಲ್ಲಿ ಜಿಲ್ಲಾ ಮಟ್ಟದ ಕಬಡಿ ಪಂದ್ಯಾವಳಿಗೆ ಚಾಲನೆ



ಪಂದ್ಯಾವಳಿಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಕುಮಾರ್ ಉದ್ಘಾಟಿಸಿದರು.

ನಂಜನಗೂಡು, ಸೆ.7– ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಿ, ಕ್ರೀಡಾಪಟುಗಳಿಗೆ ಅವಕಾಶ ಕಲ್ಪಿಸಲು ಕಬಡಿ ಪಂದ್ಯಾವಳಿ ಅವಶ್ಯಕ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಕುಮಾರ್ ತಿಳಿಸಿದರು.

ತಾಲೂಕಿನ ಹೆಮ್ಮರಗಾಲ ಗ್ರಾಮದ ಗ್ರಾಮದೇವತೆ ಮಾಲರಸಮ್ಮ ಹಬ್ಬದ ಅಂಗವಾಗಿ ವಿಸ್ಮಯ ಕಬಡಿ ತಂಡ ಹಾಗೂ ಹೆಮ್ಮರಗಾಲ ಸೋಮಣ್ಣ ಸ್ನೇಹ ಬಳಗದಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕಬಡಿ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಕ್ರೀಡೆಗಳು ನಶಿಸುತ್ತಿರುವ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರೋತ್ಸಾಹ, ನೆರವು ದೊರೆಯುತ್ತಿರುವ ಹಿನ್ನೆಲೆಯಲ್ಲಿ ಕಬಡಿ ಕ್ರೀಡೆ ತನ್ನ ವೈಭವ ಉಳಿಸಿಕೊಂಡಿದೆ. ಗ್ರಾಮೀಣ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಕಬಡಿ ಪಂದ್ಯಾವಳಿಗಳನ್ನು ಆಯೋಜಿಸಬೇಕಿದೆ ಎಂದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿ, ಕ್ರೀಡಾಪಟುಗಳು ಕ್ರೀಡಾ ಮನೋಭಾವ ಬೆಳೆಸಿಕೊಂಡು, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದರು.

ಬಿಜೆಪಿ ಮುಖಂಡ ಸೋಮಣ್ಣ ಮಾತನಾಡಿ, ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ ಗ್ರಾಮದೇವತೆ ಮಾಲರಸಮ್ಮ ಹಬ್ಬದ ಅಂಗವಾಗಿ ಪ್ರತಿ ವರ್ಷ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗುತ್ತಿದೆ. ಈ ಬಾರಿ 4ನೇ ವರ್ಷದ ಕಬಡಿ ಪಂದ್ಯಾವಳಿ ನಡೆಯುತ್ತಿದ್ದು, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಿಂದ ಕ್ರೀಡಾ ತಂಡಗಳು ಆಗಮಿಸಿವೆ. ಪಂದ್ಯಾವಳಿ 3 ದಿನಗಳ ಕಾಲ ನಡೆಯಲಿದ್ದು, ಕ್ರೀಡಾಪಟುಗಳು ಕ್ರೀಡಾ ಮನೋಭಾವ ಬೆಳೆಸಿಕೊಂಡು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾಸ್ಫೂರ್ತಿ ಮೆರೆಯಬೇಕು ಎಂದರು.

ಈ ವೇಳೆ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಮುಖಂಡರಾದ ರಾಜು, ಮಲ್ಲೇಶ್, ಮಂಜುನಾಥ್, ಮಹೇಶ್, ರಂಗನಾಥ್, ನಾಗರತ್ನ, ರಾಮಶೆಟ್ಟಿ, ಕಾಳಪ್ಪ, ವರದನಾಯಕ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕೃಷ್ಣ, ತಾಪಂ ಮಾಜಿ ಸದಸ್ಯ ಬಿ.ಎಸ್. ರಾಮು, ರಂಗಸ್ವಾಮಿ, ಮಣಿಕಂಠ, ರಾಜು, ಸಿದ್ದು, ಧನಂಜಯ, ರಾಜೇಶ್ ಸೇರಿದಂತೆ ಹಲವರಿದ್ದರು.

ಆರ್. ಹರೀಶಗೆ ಪಿಹೆಚ್.ಡಿ



ಮೈಸೂರು, ಸೆ.7– ಡಾ. ಕೈಸರ್ ಜಹಾನ್ ಬೇಗಂ ಅವರ ಮಾರ್ಗದರ್ಶನದಲ್ಲಿ ಆರ್. ಹರೀಶ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಸ್.ಜಿ. ಶಿವಣ್ಣೇಗೌಡ



ಮೈಸೂರು, ಸೆ.7–ಡಾ.ಎಸ್.ಮದಿಅಲಗನ್ ಅವರ ಮಾರ್ಗದರ್ಶನದಲ್ಲಿ ಎಸ್.ಜಿ. ಶಿವಣ್ಣೇಗೌಡ ಅವರು ದೈಹಿಕ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಾವಿನಹಳ್ಳಿ ಎಸ್.ಸಿದ್ದೇಗೌಡರಿಗೆ ಸನ್ಮಾನ



60ನೇ ಹುಟ್ಟುಹಬ್ಬ ಆಚರಿಸಿಕೊಂಡ ಮೈಮುಲ್ ಮಾಜಿ ಅಧ್ಯಕ್ಷ, ಹಿರಿಯ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಎಸ್.ಸಿದ್ದೇಗೌಡರನ್ನು ಸಿದ್ದೇಗೌಡರ ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು.

ವರಸಿದ್ಧಿ ವಿನಾಯಕ ಗೆಳೆಯರ ಬಳಗದಿಂದ ಗೌರಿ–ಗಣೇಶೋತ್ಸವ



ತಿ.ನರಸೀಪುರದ ದಾಸ ನಾಯಕರ ಬೀದಿಯಲ್ಲಿ ವರಸಿದ್ಧಿ ವಿನಾಯಕ ಗೆಳೆಯರ ಬಳಗದಿಂದ ನಡೆದ 8ನೇ ವರ್ಷದ ಗೌರಿ–ಗಣೇಶೋತ್ಸವದಲ್ಲಿ ಅನ್ನ ಸಂತರ್ಪಣೆ ಆಯೋಜಿಸಲಾಗಿತ್ತು. ಈ ವೇಳೆ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಗೆಳೆಯರ ಬಳಗದ ರಂಗನಾಥ್, ಮನು, ಶ್ರೇಯಸ್, ಭೈರವ, ಪುನೀತ್, ಬಸವ, ಪುರುಷೋತ್ತಮ್, ಬೃಂಗೇಶ್ ನಾಯಕ್, ಗುರುಪ್ರಸಾದ್, ಮಹದೇವಸ್ವಾಮಿ, ಚೇತನ್, ಚರಣ್, ಹರ್ಷ, ಮನೋಜ್, ಪವನ್, ಮುದ್ದು ಮಹದೇವ, ಭಾಸ್ಕರ್, ದರ್ಶನ್, ಪೂಜಾರಿ ರಂಗನಾಥ್ ಮತ್ತಿತರರಿದ್ದರು.

ಹನಗೋಡಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಹನಗೋಡಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹುಣಸೂರು, ಸೆ.7– ಮೈಸೂರಿನ ಸಿದ್ದಗಂಗಮ್ಮ ಚಾರಿಟಬಲ್ ಟ್ರಸ್ಟ್, ಐಎಫ್‌ಎಲ್‌ಐ ರಾಜೇಶ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ತಾಲೂಕಿನ ಹನಗೋಡು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಎಸ್‌ಬಿಐ ವ್ಯವಸ್ಥಾಪಕ ಅನಿಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಇಂತಹ ಶಿಬಿರಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಿದ್ದಗಂಗಮ್ಮ ಟ್ರಸ್ಟ್ ಅಧ್ಯಕ್ಷ ಹರೀಶ್ ಮಾತನಾಡಿದರು. ಇದೇ ವೇಳೆ 350 ಮಂದಿ ಶಿಬಿರದಲ್ಲಿ ತಪಾಸಣೆಗೆ ಒಳಗಾದರು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ದಾ.ರಾ.ಮಹೇಶ್, ಡಾ.ಚಿರಂಜೀವಿ, ಡಾ.ಭೂಮಿಕಾ, ಪ್ರಾಂಶುಪಾಲ ರಾಜೇಶ್, ಟ್ರಸ್ಟ್ ಮಹೇಶ್, ಶೀಲಾ, ರುದ್ರೇಶ್, ರವಿಕಿರಣ್, ಕೃಷ್ಣಮೂರ್ತಿ, ರೂಪ, ವನ್ಯಜೀವಿ ಛಾಯಾಚಿತ್ರಗಾರರಾದ ಛಾಯ, ಸಿಡಿಸಿ ಸದಸ್ಯರಾದ ಮಂಜು, ದೀಪು ಈ ವೇಳೆ ಉಪಸ್ಥಿತರಿದ್ದರು.

ಮುಂಬರುವ ದಿನಗಳಲ್ಲಿ

ವಿಶ್ವಕರ್ಮ ಯುವ ಬ್ರಿಗೇಡ್‌ಗೆ ಸಿಎ ನಿವೇಶನ ಮಂಜೂರು

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಭರವಸೆ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಸೆ.7– ವಿಶ್ವಕರ್ಮ ಸಮುದಾಯದವರು ವಾಸಿಸುವ ಗ್ರಾಮಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ ಎಂದು ಶಾಸಕ ಅನಿಲ್ ತಿಳಿಸಿದರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್‌ನಿಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ 3ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ವಿಶ್ವಕರ್ಮ ಸಮುದಾಯದವರು ವಾಸಿಸುವ ಗ್ರಾಮಗಳಲ್ಲಿ 25 ಲಕ್ಷದಿಂದ 2 ಕೋಟಿ ರೂ. ವರೆಗೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಅಲ್ಲದೇ ಪಟ್ಟಣದಲ್ಲಿ 2.5 ಕೋಟಿ ರೂ. ವೆಚ್ಚದಲ್ಲಿ ವಿಶ್ವಕರ್ಮ ಸಮುದಾಯ ಭವನ ಕಾಮಗಾರಿ ಆರಂಭಿಸಲಾಗಿದೆ. ವಿಶ್ವಕರ್ಮ ಯುವ ಬ್ರಿಗೇಡ್ ಸಂಘ ನಿವೇಶನ ಕೋರಿದ್ದು, ಮುಂದಿನ ದಿನಗಳಲ್ಲಿ ಸಿಎ ನಿವೇಶನ ನೀಡುವುದಾಗಿ ಭರವಸೆ ನೀಡಿದರು.

ವಿಶ್ವಕರ್ಮ ಸಮಾಜದವರು ಹುಟ್ಟಿನಿಂದಲೇ ವಿಶೇಷ ಜ್ಞಾನ ಪಡೆದಿರುತ್ತಾರೆ. ತಂತ್ರಜ್ಞಾನ ಇಲ್ಲದ ಕಾಲದಲ್ಲೇ ಮನೆ ನಿರ್ಮಾಣ, ಚಿನ್ನದ ಕುಸುರಿ ಕೆಲಸ, ದೇವಸ್ಥಾನ ವಿಗ್ರಹ ಕೆತ್ತನೆ ಸೇರಿದಂತೆ ಇತರೆ ಎಲ್ಲಾ ಕೆಲಸಗಳಲ್ಲಿ ನೈಪುಣ್ಯತೆ ಪಡೆದುಕೊಂಡಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಖ್ಯಾತ ಹೃದ್ರೋಗ ತಜ್ಞ ಡಾ.ವಿ. ಕೇಶವಮೂರ್ತಿ ಮಾತನಾಡಿದರು. ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ಅಧ್ಯಕ್ಷ ದಾಸಾಚಾರಿ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಇದೇ ವೇಳೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಹೈಕೋರ್ಟ್ ಹಿರಿಯ ವಕೀಲ ಎ.ರಾಜೇಶ್, ವಿಶ್ವಕರ್ಮ ಸೇವಾ ಸಮಾಜದ ಅಧ್ಯಕ್ಷ ರಾಜು, ವಿಶ್ವಕರ್ಮ ಸಮಾಜ ಅಧ್ಯಕ್ಷ ವೆಂಕಟೇಶ್, ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕಿ ವಿಜಯ ರವಿಕುಮಾರ್, ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಎ.ಈ.ರಘು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಎಸಿಎಫ್ ಮಧುರ ಮೂರ್ತಿ, ಕೌಶಲ್ಯಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕ ಕೆ.ನಾರಾಯಣ ಮೂರ್ತಿ, ಛಾಮೀಸ್ ಗ್ರೂಪ್ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್, ಕಬಿನಿ ಎಇಇ ಗಣೇಶ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಪಬ್ಲಿಕ್ ವಾಯ್ಸ್ ಮುಖ್ಯಸ್ಥ ರಾಜು, ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್ ಕಾರ್ಯದರ್ಶಿ ನಿಂಗರಾಜ ಬಿ.ಆಚಾರ್, ಖಜಾಂಚಿ ವಸಂತಕುಮಾರ್, ನಿರ್ದೇಶಕರಾದ ಕಿರಣ್, ಎನ್.ಲೋಕೇಶ್, ಬಿ.ಕೆ.ಸಿದ್ದಪ್ಪಾಜಿ, ರಾಜಾಚಾರಿ, ಪ್ರದೀಪ್ ಕುಮಾರ್, ರವಿಕುಮಾರ್, ಗೋವಿಂದರಾಜ್, ವಿಜಯಕುಮಾರ್, ನಾಗೇಶ್, ಶೇಖರ್, ನಾಗೇಂದ್ರ ವಿನೋದ್ ಕುಮಾರ್, ಜನಾರ್ಧನ್, ಚಂದನ್, ವೆಂಕಟೇಶ್ ಸೇರಿದಂತೆ ವಿಶ್ವಕರ್ಮ ಸಮುದಾಯದವರಿದ್ದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಮರ್ಪಕ ಮೂಲಸೌಕರ್ಯ ಕಲ್ಪಿಸಲು ಆದ್ಯತೆ

ಹೂಟಗಳ್ಳಿ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಅಭಿಮತ


ಮೈಸೂರಿನ ಹೂಟಗಳ್ಳಿ ಹೆಚ್.ಕೆ.ಫಂಕ್ಷನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು.

ಮೈಸೂರು, ಸೆ.7– ಹೂಟಗಳ್ಳಿ ನಗರಸಭೆ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳನ್ನೊಳಗೊಂಡ ವಿಸ್ತಾರವಾದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಮರ್ಪಕ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಲಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಹೂಟಗಳ್ಳಿ ನಗರಸಭೆ ವತಿಯಿಂದ ಮೂಲಸೌಕರ್ಯ ಹಾಗೂ ನಿತ್ಯ ನಿರ್ವಹಣೆ ಕುರಿತು ಹೂಟಗಳ್ಳಿಯ ಹೆಚ್.ಕೆ.ಫಂಕ್ಷನ್ ಹಾಲ್‌ನಲ್ಲಿ ಭಾನುವಾರ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರು ಸರಬರಾಜು, ತ್ಯಾಜ್ಯ ನಿರ್ವಹಣೆ, ಒಳಚರಂಡಿ ಹಾಗೂ ಬೀದಿದೀಪ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವುದರ ಜೊತೆಗೆ ಬೀದಿ ನಾಯಿಗಳ ಹಾವಳಿ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರವು 18 ಗ್ರಾಮ ಪಂಚಾಯಿತಿ, ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯ್ತಿ ಹಾಗೂ ನಗರಪಾಲಿಕೆಂಯು ಐದು ವಾರ್ಡ್‌ಗಳನ್ನು ಒಳಗೊಂಡ ರಾಜ್ಯದ ದೊಡ್ಡ ಕ್ಷೇತ್ರವಾಗಿದೆ. ಈ ಕ್ಷೇತ್ರವು ಮೈಸೂರು ನಗರದ ಸುತ್ತಲೂ ವ್ಯಾಪಿಸಿದೆ. ನಗರಕ್ಕೆ ಹೊಂದಿಕೊಂಡಿರುವುದರಿಂದ ಖಾಸಗಿ ಬಡಾವಣೆಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದು, ನಿರ್ವಹಣೆ ಹಾಗೂ ಅಭಿವೃದ್ಧಿ ಸವಾಲಾಗಿದೆ. ಆದಾಗ್ಯೂ ಸಮರ್ಪಕ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತಿದ್ದೇನೆ ಎಂದರು.

ಯುದ್ಧೋಪಾದಿಯಲ್ಲಿ ಪ್ರಯತ್ನಿಸಿದ್ದೆ: ನಗರದ ರಿಂಗ್ ರಸ್ತೆ ಅಕ್ಕಪಕ್ಕದ ಗ್ರಾಪಂಗಳು, ಬಡಾವಣೆಗಳು, ವಿಜಯನಗರ ಮೂರನೇ ಹಂತ, ನಾಲ್ಕನೇ ಹಂತವನ್ನು ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ಸೇರಿಸಲು ಸಮರೋಪಾದಿಯಲ್ಲಿ ಪ್ರಯತ್ನ ಮಾಡಿದ್ದೆ. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪಾಲಿಕೆ ಕೌನ್ಸಿಲ್ ನಿರ್ಣಯಕ್ಕೆ ಮಂಡಿಸಿದಾಗ ಎಲ್ಲಾ ಪಕ್ಷದ ಸದಸ್ಯರು ವಿರೋಧ ವ್ಯಕ್ತಪಡಿಸಿ, ಸರ್ಕಾರದಿಂದ ಐದು ಸಾವಿರ ಕೋಟಿ ಅನುದಾನ ನೀಡಿದರೆ ಮಾತ್ರ ಪಾಲಿಕೆಗೆ ಸೇರ್ಪಡೆ ಪ್ರಕ್ರಿಯೆ ನಡೆಸಲು ನಿರ್ಣಯ ಕೈಗೊಂಡರು. ಇದರಿಂದಾಗಿ ಅಪಮಾನವಾಗಿ ಸಭೆಯಿಂದ ಹೊರಬಂದೆ. ನಂತರ ಅಂದಿನ ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಸಮಾಲೋಚಿಸಿದಾಗಲೂ ಗ್ರಾಪಂಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸುವುದು ಕಷ್ಟ, ಬಡಾವಣೆಗಳಲ್ಲಿ ನಿರ್ವಹಣೆ ಇಲ್ಲ, ಖಾತೆ ಕಂದಾಯವಾಗುತ್ತಿಲ್ಲ, ಮುಡಾ ಬಡಾವಣೆಗಳಲ್ಲೂ ನಿರ್ವಹಣೆ ಆಗುತ್ತಿಲ್ಲ ಎಂಬ ಹಲವು ಅಂಶಗಳು ಅಡ್ಡಿಯಾದವು. ಒಟ್ಟಾರೆ ಪ್ರಯತ್ನ ಕೈಗೂಡದಿದ್ದಾಗ ನಾಲ್ಕು ಪಟ್ಟಣ ಪಂಚಾಯ್ತಿ ಹಾಗೂ ಒಂದು ನಗರಸಭೆ ರಚನೆಯಾದವು ಎಂದು ಹೇಳಿದರು.

ಮುಡಾ(ಈಗಿನ ಎಂಡಿಎ)ದಿಂದ ಖಾಸಗಿ ಬಡಾವಣೆಗಳ ಅಭಿವೃದ್ಧಿಗೆ ಅನುದಾನ ಕಲ್ಪಿಸಲಾಗುತ್ತಿತ್ತು. ಆದರೆ, ಸರ್ಕಾರ ನಿಧಿ–1, ನಿಧಿ–2 ಎಂದು ವಿಂಗಡಿಸಿದ ನಂತರ ಹತ್ತಾರು ವರ್ಷಗಳ ಹಿಂದೆ ರಚನೆಯಾಗಿರುವ ಬಡಾವಣೆಗಳ ನಿರ್ವಹಣೆ ಹೊರತುಪಡಿಸಿ, ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಳಸದಂತಾಯಿತು. ಇದರಿಂದ ತುಂಬಾ ಸಮಸ್ಯೆ ಎದುರಾದವು. ಹಾಗಾಗಿ ಗ್ರಾಪಂಗಳನ್ನು ಮೇಲ್ದರ್ಜೆಗೇರಿಸಲು ಹಗಲು–ರಾತ್ರಿ ವಿಧಾನಸೌಧದಲ್ಲಿ ಅಲೆದಾಡಿ ಅನುಮೋದನೆ ಕೊಡಿಸಿದ್ದರಿಂದಾಗಿ ಇಂದು ಅನುಕೂಲವಾಯಿತು ಎಂದರು.

ನಿರ್ವಹಣೆಗೆ ಅನುಕೂಲ: ಖಾಸಗಿ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆಯೇ ಹೊರತು ರಸ್ತೆ, ನೀರು, ಚರಂಡಿ, ಬೀದಿದೀಪ ಸೇರಿದಂತೆ ಮೂಲಸೌಕರ್ಯ ಕಲ್ಪಿಸಿಲ್ಲ. ನಿವೇಶನ ಖರೀದಿಸಿದವರು ಮನೆ ನಿರ್ಮಿಸಿಕೊಂಡು ವಾಸ ಮಾಡಲಾರಂಭಿಸಿದ ನಂತರ ಮೂಲಸೌಕರ್ಯಕ್ಕಾಗಿ ಅಲೆದಾಡುವಂತಾಯಿತು. ಕಷ್ಟಪಟ್ಟು ನಿವೇಶನ ಕೊಂಡು ಮನೆ ಕಟ್ಟಿದರೂ ನೆಮ್ಮದಿಯಾಗಿ ವಾಸಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಯಿತು. ಜನರ ಸಮಸ್ಯೆಯನ್ನು ನಿರಂತರವಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೆ. ಸದ್ಯ ಪಟ್ಟಣ ಪಂಚಾಯ್ತಿ, ನಗರಸಭೆ ರಚನೆಯಾಗಿದ್ದರಿಂದ ವ್ಯವಸ್ಥಿತ ನಿರ್ವಹಣೆ ಸಾಧ್ಯವಾಗಿದೆ ಎಂದು ಹೇಳಿದರು.

ಕೈಗಾರಿಕಾ ಪ್ರದೇಶದಿಂದ ತೆರಿಗೆ ಬರುತ್ತಿಲ್ಲ: ಹಿಂದೆ ಕೈಗಾರಿಕಾ ಪ್ರದೇಶಗಳಿಂದ ವಾರ್ಷಿಕ 25 ರಿಂದ 30 ಕೋಟಿ ರೂ. ತೆರಿಗೆ ಬರುತ್ತಿತ್ತು. ಆದರೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ರಚನೆ ನಂತರ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ನಿಂತು ಹೋಗಿದೆ. ಇದರಿಂದಾಗಿ ಅನೇಕ ಕಾಮಗಾರಿಗಳು ಸ್ಥಗಿತಗೊಂಡಿವೆ. ಗ್ರಾಪಂಗಳು ಬಾಕಿ ಉಳಿಸಿರುವ ವಿದ್ಯುತ್ ಬಿಲ್ ಅನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದಿಂದ ಪಾವತಿಸುವಂತೆ ಕ್ರಮ ವಹಿಸಲಾಗುತ್ತಿದೆ. ಕಬಿನಿ ಎರಡನೇ ಹಂತ ಹಾಗೂ ಉಂಡುವಾಡಿ ಯೋಜನೆಯಿಂದ ದಿನದ 24 ಗಂಟೆ ನೀರು ಒದಗಿಸುವ ಕಾರ್ಯ ನಡೆದಿದೆ. ಸರ್ಕಾರದಿಂದ ಅನುದಾನ ತಂದು ರಸ್ತೆ, ಚರಂಡಿ ಇನ್ನಿತರ ಸೌಕರ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ನೀರಿನ ಟ್ಯಾಂಕ್ ಪರಿಶೀಲನೆ: ಸಭೆಯ ಬಳಿಕ ಶಾಸಕ ಜಿಟಿಡಿ, ವಿಜಯನಗರ 4ನೇ ಹಂತಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವ ಜಲ ಸಂಗ್ರಹಾಗಾರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್, ವಾಣಿವಿಲಾಸ ನೀರು ಸರಬರಾಜು ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರ ಧನುಷ್, ನಗರಸಭೆ ಎಇಇಗಳಾದ ಮಧು, ಗಿರಿಜಾ ಹಾಜರಿದ್ದರು.

> **ಕಸ ಹಾಕಿದರೆ ದಂಡ ಹಾಕಿ**
> ರಿಂಗ್ ರಸ್ತೆ ಬದಿಯಲ್ಲಿ ಕಸ, ಕಟ್ಟಡ ಹಾಗೂ ಕೋಳಿ ತ್ಯಾಜ್ಯ ಸುರಿಯುವವರನ್ನು ಪತ್ತೆಮಾಡಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸುವುದರ ಜೊತೆಗೆ ಭಾರಿ ದಂಡ ವಿಧಿಸಬೇಕು. ಅವರ ವಾಹನಗಳನ್ನು ಜಪ್ತಿ ಮಾಡಬೇಕು.
> -ಜಿ.ಟಿ.ದೇವೇಗೌಡ, ಶಾಸಕ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮದ್ರಾಸಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮದರಾಸಿ(ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರುಧಿರಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತ+ತೆ)	2+2 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ನಮೋ ವೆಂಕಟೇಶ(ಕ) + ಬ್ಯಾಡ್‌ಗರ್ಲ್(ತ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರುಧಿರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೋಟೆಲ್ ಮಾಲೀಕರಿಂದ ಧರ್ಮಸ್ಥಳ ಚಲೋ


ಮೈಸೂರು ಹೋಟೆಲ್ ಮಾಲೀಕರ ಸಂಘದ ನೇತೃತ್ವದಲ್ಲಿ 'ಧರ್ಮಸ್ಥಳ ಚಲೋ' ಮೂಲಕ ಧರ್ಮಸ್ಥಳಕ್ಕೆ ತೆರಳಿದ್ದ ಹೋಟೆಲ್ ಮಾಲೀಕರು, ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಿ, ಆಶೀರ್ವಾದ ಪಡೆದರು.

ಮೈಸೂರು, ಸೆ.7– ಮೈಸೂರು ಹೋಟೆಲ್ ಮಾಲೀಕರ ಸಂಘದ ನೇತೃತ್ವದಲ್ಲಿ 'ಧರ್ಮಸ್ಥಳ ಚಲೋ' ನಡೆಸಿ, ಶ್ರೀ ಧರ್ಮಸ್ಥಳ ಕ್ಷೇತ್ರ ರಕ್ಷಣೆಗೆ ಬದ್ಧವಾಗಿರುವುದಾಗಿ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ವಾಗ್ದಾನ ನೀಡಲಾಯಿತು.

ಸಂಘದ ವತಿಯಿಂದ ಹೋಟೆಲ್, ವಸತಿ ಗೃಹ, ರೆಸ್ಟೋರೆಂಟ್, ಸ್ವೀಟ್ಸ್ ಮತ್ತು ಬೇಕರಿ ಮಾಲೀಕರು ಹಾಗೂ ಅವರ ಕುಟುಂಬದವರು ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಮೈಸೂರಿನಿಂದ ಶನಿವಾರ ಧರ್ಮಸ್ಥಳಕ್ಕೆ ತೆರಳಿ, ಶ್ರೀ ಮಂಜುನಾಥನ ದರ್ಶನ ಪಡೆದ ನಂತರ ಧರ್ಮಾಧಿಕಾರಿಗಳನ್ನು ಭೇಟಿಯಾಗಿ ಕ್ಷೇತ್ರದ ರಕ್ಷಣೆಗೆ ತಮ್ಮ ಜೊತೆ ಇರುವುದಾಗಿ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳದಿಂದ ದೊರೆಯುತ್ತಿರುವ ಧಾರ್ಮಿಕ ಹಾಗೂ ಸಾಮಾಜಿಕ ಕೊಡುಗೆ ಮಹತ್ವ ಎಲ್ಲರಿಗೂ ತಿಳಿದಿದೆ. ಆದಾಗ್ಯೂ ಷಡ್ಯಂತರ ನಡೆಸಿ ಈ ಕ್ಷೇತ್ರದ ಬಗ್ಗೆ ಅಪಪ್ರಚಾರ ನಡೆಸುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ವಿನಾಕಾರಣ ಆಪಾದನೆ ಮುಂದುವರೆಸಿದರೆ ನಾವೂ ಸೇರಿದಂತೆ ಇಡೀ ಸಮಾಜ ಸಹಿಸುವುದಿಲ್ಲ. ಪರ್ಯಾಯ ಸರ್ಕಾರದ ಮಾದರಿಯಲ್ಲಿ ಸಮಾಜಕ್ಕೆ ಸೇವೆ ನೀಡುತ್ತಿರುವ ಧರ್ಮಸ್ಥಳ ಕ್ಷೇತ್ರದೊಂದಿಗೆ ಮೈಸೂರು ಹೋಟೆಲ್ ಮಾಲೀಕರ ಸಂಘ ಇದ್ದೇ ಇರುತ್ತದೆ ಎಂದು ಪತ್ರದ ಮೂಲಕ ಬೆಂಬಲ ಸೂಚಿಸಿದ್ದಾಗಿ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ತುಂತುರು ಮಳೆ ನಡುವೆಯೂ ಧನಂಜಯ ಆನೆಗೆ ಭಾರ ಹೊರುವ ತಾಲೀಮು


ದಸರಾ ಗಜಪಡೆಯ ಧನಂಜಯ ಆನೆಗೆ ಭಾನುವಾರ ಸಂಜೆ ಭಾರ ಹೊರುವ ತಾಲೀಮು ನಡೆಸಲಾಯಿತು.

ಮೈಸೂರು, ಸೆ.7(ಎಂಟಿವೈ)– ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಜಪಡೆಗೆ ತಾಲೀಮು ಬಿರುಸಾಗಿ ನಡೆಸುತ್ತಿದ್ದು, ಭಾನುವಾರ ಧನಂಜಯ ಆನೆಗೆ ಭಾರ ಹೊರುವ ತಾಲೀಮನ್ನು ತುಂತುರು ಮಳೆ ನಡುವೆಯೂ ಯಶಸ್ವಿಯಾಗಿ ನಡೆಸಲಾಯಿತು.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ಭಾನುವಾರ ಸಂಜೆ ಧನಂಜಯ ಆನೆಗೆ ಗಾದಿ, ನಮ್ದಾ, ತೊಟ್ಟಿಲು ಕಟ್ಟಿ, ಅದರ ಮೇಲೆ ಮರಳು ಮೂಟೆ ಇಟ್ಟು ಕುಮ್ಕಿ ಆನೆಗಳಾಗಿ ರೂಪ ಮತ್ತು ಲಕ್ಷ್ಮೀ ಆನೆಯೊಂದಿಗೆ ತಾಲೀಮಿಗೆ ಕೋಟೆ ಆಂಜನೇಯಸ್ವಾಮಿ ದೇವಾಲಯ ಜಯರಾಮ ದ್ವಾರದವರೆಗೂ ಕರೆತರಲಾಯಿತು. ಸಂಜೆ 4 ಗಂಟೆಗೆ ಸಾಲಾಗಿ ಅರಮನೆಯಿಂದ ಹೊರಬಂದ ಗಜಪಡೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ ವೃತ್ತ, ಆರ್‌ಎಂಸಿ ವೃತ್ತ ಬಂಬೂಬಜಾರ್, ಹೈವೇ ವೃತ್ತದ ಮೂಲಕ ನೆಲ್ಸನ್ ಮಂಡೇಲ ರಸ್ತೆಯಲ್ಲಿ ಸಾಗಿ 5.15ಕ್ಕೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು.

ಬಳಿಕ ಪಂಜಿನ ಕವಾಯತು ಮೈದಾನದಲ್ಲಿರುವ ರಾಟೆಯಿಂದ ಕಾರ್ಯನಿರ್ವಹಿಸುವ ಕ್ರೇನ್ ಬಳಿ ಕರೆತಂದು ಮರಳು ಮೂಟೆಯನ್ನು ಕೆಳಗೆ ಇಳಿಸಿ, ಧನಂಜಯ ಆನೆಗೆ ವಿಶ್ರಾಂತಿ ನೀಡಲಾಯಿತು. ನಂತರ ಬನ್ನಿಮಂಟಪದಿಂದ ಅರಮನೆಯತ್ತ ಹೊರಟ ಗಜಪಡೆ ಸಂಜೆ 7.15ರ ವೇಳೆಗೆ ಅರಮನೆ ಆವರಣ ಪ್ರವೇಶಿಸಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ಭಾರ ಹೊತ್ತ ಧನಂಜಯ ಆನೆ ಕುಮ್ಕಿ ಆನೆಗಳಾದ ರೂಪ ಮತ್ತು ಲಕ್ಷ್ಮೀ ಆನೆಯೊಂದಿಗೆ ಸೊಂಡಿಲು ಎತ್ತಿ ಸೆಲ್ಯೂಟ್ ಹೊಡೆಯುತ್ತಿರುವುದು.

ಗಣೇಶ ವಿಗ್ರಹ ವಿಸರ್ಜನೆ: ಮಹಾರಾಷ್ಟ್ರದಲ್ಲಿ ನಾಲ್ವರು ನೀರುಪಾಲು, 13 ಮಂದಿ ನಾಪತ್ತೆ

ಮಹಾರಾಷ್ಟ್ರ: ಮಹಾರಾಷ್ಟ್ರದ ವಿವಿಧ ಜಿಲ್ಲೆಗಳಲ್ಲಿ ಗಣೇಶ ವಿಗ್ರಹ ವಿಸರ್ಜನೆ ಸಂದರ್ಭದಲ್ಲಿ ಕನಿಷ್ಠ ನಾಲ್ವರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, 13 ಜನರು ಕಾಣೆಯಾಗಿದ್ದಾರೆ ಎಂದು ಪೊಲೀಸರು ಭಾನುವಾರ ದೃಢಪಡಿಸಿದ್ದಾರೆ.

ಪುಣೆಯ ಚಕನ್ ಪ್ರದೇಶದಲ್ಲಿ ಹಲವಾರು ದುರಂತಗಳು ವರದಿಯಾಗಿವೆ. ವಾಕಿ ಖುರ್ದ್‌ನಲ್ಲಿ ಭಾಮಾ ನದಿಯಲ್ಲಿ ಇಬ್ಬರು ಪುರುಷರು ಕೊಚ್ಚಿ ಹೋಗಿದ್ದಾರೆ, ಶೆಲ್ ಪಿಂಪಾಲ್‌ಗಾಂವ್‌ನಲ್ಲಿ ಇನ್ನೊಬ್ಬ ವ್ಯಕ್ತಿ ನೀರು ಪಾಲಾಗಿದ್ದಾರೆ. ಬಿರ್ವಾಡಿಯಲ್ಲಿ ಮತ್ತೊಬ್ಬ ವ್ಯಕ್ತಿ ಬಾವಿಗೆ ಜಾರಿ ಬಿದ್ದಿದ್ದಾರೆ. ಇಲ್ಲಿಯವರೆಗೆ ಇಬ್ಬರ ಶವಗಳು ಪತ್ತೆಯಾಗಿವೆ. ಉಳಿದ ಇಬ್ಬರಿಗಾಗಿ ಶೋಧ ಕಾರ್ಯಾಚರಣೆ ಮುಂದುವರೆದಿದೆ.

ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನದ ಲೋಗೋ ಅನಾವರಣ


ಅ.14 ರಂದು ನಡೆಯುವ ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನದ 'ಲೋಗೋ'ವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನಾವರಣಗೊಳಿಸಿದರು

ಮೈಸೂರು, ಸೆ.7(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅ.14 ರಂದು ನಡೆಯುವ ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನದ 'ಲೋಗೋ'ವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅನಾವರಣಗೊಳಿಸಿದರು.

ಕರ್ನಾಟಕ ಸರ್ವ ಬೌದ್ಧ ಸಂಘಗಳ ಒಕ್ಕೂಟ ಹಾಗೂ ಕರ್ನಾಟಕ ಸರ್ವ ಬಿಕ್ಕು ಸಂಘದ ಸಹಕಾರದೊಂದಿಗೆ ಭಗವಾನ್ ಬುದ್ಧರ ತತ್ವ–ಆದರ್ಶ ಮತ್ತು ಚಿಂತನೆಗಳನ್ನು ಎಲ್ಲೆಡೆ ಪ್ರಚುರಪಡಿಸುವ ನಿಟ್ಟಿನಲ್ಲಿ 'ಬುದ್ಧ ಫಸ್ಟ್–2025' ಶೀರ್ಷಿಕೆಯಡಿ ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನವನ್ನು ನಡೆಸಲಾಗುತ್ತಿದೆ. ಅಲ್ಲದೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿ 70 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಬೌದ್ಧ ಸಮ್ಮೇಳನ ಮಹತ್ವ ಪಡೆದಿದ್ದು, ದೇಶಾದ್ಯಂತ ಎಲ್ಲಾ ಚಿಂತಕರನ್ನು ಒಗ್ಗೂಡಿಸಲಾಗುವುದು.

ಪಕ್ಷಾತೀತ, ಜಾತ್ಯಾತೀತ ಮತ್ತು ಧರ್ಮಾತೀತವಾಗಿ ಸರ್ವಧರ್ಮಗಳ ವಿಶ್ವಾಸದೊಂದಿಗೆ 'ಮಾನವ ಮಹಾ ಮೈತ್ರಿ' ಘೋಷವಾಕ್ಯದಡಿ ಎರಡು ದಿನಗಳ ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನ ನಡೆಯಲಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಕೊಡವ ಸಮಾಜದಿಂದ ಸಡಗರ ಸಂಭ್ರಮದ ಕೈಲ್ ಪೊಳ್ದ್ ಆಚರಣೆ



ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ನಡೆದ 'ಕೈಲ್ ಪೊಳ್ದ್'(ಕೈಲ್ ಮುಹೂರ್ತ) ಹಬ್ಬದ ಆಚರಣೆಯಲ್ಲಿ ಜಾರಿ ನಿರ್ದೇಶನಾಲಯ(ಇಡಿ)ದ ಉಪ ನಿರ್ದೇಶಕ ಕೊಟ್ಟಂಗಡ ಡಾ.ಪೆಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಕೊಟ್ಟಂಗಡ ಡಾ.ಪೆಮ್ಮಯ್ಯ ಅವರ ಪತ್ನಿ ಲೋಚನ್ ಪೆಮ್ಮಯ್ಯ, ತಾಯಿ ಕೊಟ್ಟಂಗಡ ವಿಜು ದೇವಯ್ಯ(ಗೋಣಿಕೊಪ್ಪದ ಸಾಮಾಜಿಕ ಕಾರ್ಯಕರ್ತರು), ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಗಣಪತಿ, ಉಪಾಧ್ಯಕ್ಷ ಮಾಚಿಮಾಡ ಪಿ.ನಾಣಯ್ಯ, ಕಾರ್ಯದರ್ಶಿ ಕೇಟೋಳಿರ ಎ.ಬೆಳ್ಳಿಯಪ್ಪ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟೀರ ಡಯಾನ ಪೂವಯ್ಯ, ಖಜಾಂಚಿ ಇಟ್ಟೀರ ಜಿ.ಕಾಶಿಯಪ್ಪ ಮತ್ತಿತರರಿದ್ದರು. ಮತ್ತೊಂದು ಚಿತ್ರದಲ್ಲಿ ಸಭಾಂಗಣದಲ್ಲಿ ನೆರೆದಿದ್ದವರನ್ನು ಕಾಣಬಹುದು.

ಮೈಸೂರು, ಸೆ.7(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಆಯುಧ(ಕೃಷಿ ಪರಿಕರಗಳು)ಗಳಿಗೆ ಪೂಜೆ ಸಲ್ಲಿಸಿ, ಸಾಧಕರನ್ನು ಗೌರವಿಸಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದರ ಜೊತೆಗೆ ಹತ್ತಾರು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ 'ಕೈಲ್ ಪೊಳ್ದ್'(ಕೈಲ್ ಮುಹೂರ್ತ) ಹಬ್ಬವನ್ನು ಸಡಗರ–ಸಂಭ್ರಮದಿಂದ ಭಾನುವಾರ ಆಚರಿಸಲಾಯಿತು.

ವಿಶೇಷ ಅಲಂಕೃತ ಆಯುಧಗಳಿಗೆ ಪೂಜೆ ಸಲ್ಲಿಸಿ, ಕಾವೇರಿ ಮಾತೆ, ಇಗ್ಗುತಪ್ಪ ದೇವರಲ್ಲಿ ಪ್ರಾರ್ಥನೆ ಸಲ್ಲಿಸುವ ಮೂಲಕ ಆರಂಭವಾದ ಕೊಡವ ಸಾಂಪ್ರದಾಯಿಕ ಕೈಲ್ ಪೊಳ್ದ್ ಹಬ್ಬದ ಸಂಭ್ರಮಾಚರಣೆಗೆ ಆಗಮಿಸಿದವರನ್ನು ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಎ.ಗಣಪತಿ ಸ್ವಾಗತಿಸಿದರು.

ಬಳಿಕ ಮಾತನಾಡಿದ ಅವರು, ಕೊಡವ ಪರಂಪರೆಯ ಪ್ರತೀಕವಾಗಿ ನಡೆದುಕೊಂಡು ಬಂದಿರುವ ಹಬ್ಬಗಳ ಆಚರಣೆಯನ್ನು ಎಲ್ಲರೊಂದಿಗೆ ಆಚರಿಸುವ ಮೂಲಕ ಮೈಸೂರು ಕೊಡವ ಸಮಾಜ ಕೊಡವರ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕೆಲಸ ಮಾಡುತ್ತಿದೆ. ಕೃಷಿ ಪರಿಕರಗಳಿಗೆ ಪೂಜೆ ಸಲ್ಲಿಸಿ, ಆಹಾರ ಧಾನ್ಯಗಳನ್ನು ರಕ್ಷಣೆ ಮಾಡುವ ಹಬ್ಬ ಇದಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಾರಿ ನಿರ್ದೇಶನಾಲಯ(ಇಡಿ)ದ ಉಪ ನಿರ್ದೇಶಕ ಕೊಟ್ಟಂಗಡ ಡಾ.ಪೆಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕೊಡವರ ಮಕ್ಕಳನ್ನು ಉನ್ನತ ಅಧಿಕಾರಿಗಳನ್ನಾಗಿಸುವ ನಿಟ್ಟಿನಲ್ಲಿ ಮೈಸೂರು ಕೊಡವ ಸಮಾಜ ಕಾರ್ಯೋನ್ಮುಖವಾಗಬೇಕು. 8ನೇ ತರಗತಿಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗಳನ್ನು ನೀಡಬೇಕು. ಚಿಕ್ಕ ವಯಸ್ಸಿನಿಂದಲೇ ತರಬೇತಿ ಪಡೆದರೆ, ಪದವಿ ಮುಗಿಯುತ್ತಿದ್ದಂತೆ ಕೆಎಎಸ್, ಐಎಎಸ್, ಐಪಿಎಸ್, ಐಆರ್‌ಎಸ್ ನಂತಹ ಪರೀಕ್ಷೆಗಳನ್ನು ಸುಲಭವಾಗಿ ಪಾಸ್ ಮಾಡಬಹುದಾಗಿದೆ ಎಂದು ಸಲಹೆ ನೀಡಿದರು.

ಸನ್ಮಾನ: ಹಬ್ಬದ ಸಡಗರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೈಸೂರು ಕೊಡವ ಸಮಾಜದ ಮಾಜಿ ಅಧ್ಯಕ್ಷ ಮುವೇರ ಕುಟ್ಟಪ್ಪ, ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಬಲ್ಯಮಂಡ ಸರಸು ನಾಣಯ್ಯ, ಮೈಸೂರು ಕೊಡವ ಸಮಾಜದ ಗೌರವ ಕಾರ್ಯದರ್ಶಿ ಕೇಟೋಳಿರ ಎ.ಬೆಳ್ಳಿಯಪ್ಪ, ಹಿರಿಯರಾದ ಅಯಲಪ್ಪಂಡ ಪಟ್ಟು ಪೊಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. 35ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.

ಮೈಸೂರು ಕೊಡವ ಸಮಾಜದ ಉಪಾಧ್ಯಕ್ಷ ಮಾಚಿಮಾಡ ಪಿ.ನಾಣಯ್ಯ, ಗೌರವ ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟೀರ ಡಯಾನ ಪೂವಯ್ಯ, ಗೌರವ ಖಜಾಂಚಿ ಇಟ್ಟೀರ ಜಿ.ಕಾಶಿಯಪ್ಪ, ಕೊಡಗು ಸಹಕಾರ ಸಂಘದ ಅಧ್ಯಕ್ಷರಾದ ಚೆಂಬಾಂಡ ನಂಜಮ್ಮ ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಮುಕ್ಕಾಟಿರ ಅಶೋಕ್, ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷರಾದ ಕೊಲ್ಲಿರ ಬೊಳ್ಳಮ್ಮ ಕುಟ್ಟಪ್ಪ, ಶ್ರೀ ಕಾವೇರಿ ವಿದ್ಯಾಸಂಸ್ಥೆ ಮುಖ್ಯಸ್ಥ ಮೇರಿಯಂಡ ನವೀನ್ ಚಂದ್ರ ಶ್ರೀ ಭಗವತಿ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಪಾಲಂದಿರ ಸೋಮಣ್ಣ ಉಪಸ್ಥಿತರಿದ್ದರು.

ಎಂ. ನಂದೀಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಎಂ. ರುಬಿ ಸಲೆಸ್ಟಿನಾ ಅವರ ಮಾರ್ಗದರ್ಶನದಲ್ಲಿ ಎಂ. ನಂದೀಶ್ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಅಧಿಕಾರಿಗಳಿಬ್ಬರ ದಸರಾ ಕುರಿತಾದ ಗೀತೆಗಳಿಗೆ ಸಾಮಾಜಿಕ ಜಾಲತಾಣದಲ್ಲಿ ಸಖತ್ ರೆಸ್ಪಾನ್ಸ್!



ಮೈಸೂರು,ಸೆ.7(ಎಂಟಿವೈ)–ಮೈಸೂರಲ್ಲಿ ನಾಡಹಬ್ಬ ದಸರಾ ಮಹೋತ್ಸವದ ಸಿದ್ಧತಾ ಕಾರ್ಯ ಭರದಿಂದ ಸಾಗಿದ್ದು, ದಸರಾ ಮಹೋತ್ಸವಕ್ಕೆ ವಿವಿಧೆಡೆಯಿಂದ ಪ್ರವಾಸಿಗರ ಸ್ವಾಗತಿಸುವ ಅಧಿಕಾರಿಗಳಿಬ್ಬರು ಬರೆದ ಎರಡು ಗೀತೆಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ಅತೀವ ಮೆಚ್ಚುಗೆ ಪಡೆದಿವೆ.

ದಸರಾ ಮಹೋತ್ಸವದ ಈ ಸಾಲಿನ ಗೀತೆಯನ್ನು ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, 'ಕರುನಾಡ ಕರುಣೆಯ ಕಡಲಿನಲಿ' ಗೀತೆ ರಚಿಸಿದ್ದು, ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್, ಮಧುರ ಕಂಠದಲ್ಲಿ ಸೊಗಸಾಗಿ ಮೂಡಿ ಬಂದಿದೆ. ಕಳೆದ 3 ವರ್ಷದಿಂದಲೂ ದಸರಾ ಗೀತೆ ರಚಿಸುತ್ತಿರುವ ಡಾ.ಪಿ. ಶಿವರಾಜು, ಈ ಬಾರಿ ರಚಿಸಿ, ಸಂಯೋಜಿಸಿ, ಪರಿಕಲ್ಪಿಸಿರುವ ಗೀತೆ ಎಲ್ಲರ ಗಮನ ಸೆಳೆಯುತ್ತಿದೆ.

5.39 ನಿಮಿಷದ ಈ ಗೀತೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಲ್ಲಿ ಬಿಡುಗಡೆ ಮಾಡಿ, ಗೀತೆಗೆ ಸಂಯೋಜಿಸಿರುವ ವಿಡಿಯೋ ತುಣುಕನ್ನು ವೀಕ್ಷಿಸಿ, ಪ್ರಶಂಸಿಸಿದ್ದಾರೆ.

ಯುವ ಸಂಭ್ರಮದ ಗೀತೆ: ಈ ಸಾಲಿನ ದಸರಾ ಮಹೋತ್ಸವದ ಮೊಟ್ಟ ಮೊದಲ ಕಾರ್ಯಕ್ರಮ 'ಯುವ ಸಂಭ್ರಮ' ಸೆ.10ರಂದು ಆರಂಭವಾಗಲಿದ್ದು, ಅದಕ್ಕಾಗಿ ಮೈಸೂರು ಪಾಲಿಕೆ ಕಂದಾಯ ವಿಭಾಗದ ಸಹಾಯಕ ಆಯುಕ್ತ ಸೋಮಶೇಖರ್ ಜಿಗಣಿ, ಮನೋಜ್ ಸೌಗಂದ್ ಸಾಹಿತ್ಯದಲ್ಲಿ ಶೀರ್ಷಿಕೆ ಗೀತೆಯನ್ನು ಹಿನ್ನೆಲೆ ಗಾಯಕ ವಿ.ಜಯಪ್ರಕಾಶ ಮಧುರವಾಗಿ ಹಾಡಿದ್ದು, ರಾಗ ಸಂಯೋಜನೆ ಸೋಮಶೇಖರ್ ಜಿಗಣಿ ಮತ್ತು ನೀನು ನೀನಾದ್ ಅವರ ಸಂಗೀತದಲ್ಲಿ ಮೂಡಿಬಂದಿದೆ. ಈ ಇಬ್ಬರು ಅಧಿಕಾರಿಗಳು ಬರೆದ ಗೀತೆಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಕರುನಾಡ ಕರುಣೆಯ ಕಡಲಿನಲಿ
ಮೈಸೂರ ಮಮತೆಯ ಮಡಿಲಿನಲಿ
ಕನ್ನಡದ ಸಂಭ್ರಮದ ನಾಡಹಬ್ಬ
ನಾಡದೇವತೆಯ ಸಿರಿ ದಸರಾ ಹಬ್ಬ ।

ಅರಮನೆಯ ಅಂಗಳದಿ ಅಂಬಾರಿಯ ಸೊಬಗು
ಮೆರವಣಿಗೆಯ ಸಡಗರದಿ ಜನಮನಗಳ ಮೆರುಗು
ಮೈಸೂರಿದು ಕರುನಾಡಿಗೆ ಸಂಸ್ಕೃತಿಯ ಹಿರಿಮೆ
ಪರಂಪರೆಯ ಸಂಭ್ರಮದ ಅಸ್ಮಿತೆಯ ಗರಿಮೆ ॥

ಅಭಿಮಾನವ ಅರಳಿಸುವ, ಅನುರಾಗವ ಹರಸಿರುವ
ಸನ್ಮಾರ್ಗದಿ ನಡೆಸಿರುವ ನಮ್ಮ ನಾಡಹಬ್ಬ
ಹೃನ್ಮನಗಳ ತಣಿಸಿರುವ, ಕಣ್ಮಣಿಗಳ ಬೆಳೆಸಿರುವ
ಸದ್ಭಾವವ ತೋರಿರುವ ನಮ್ಮ ದಸರಾ ಹಬ್ಬ ॥

ಭಾವೈಕ್ಯದ ಗೂಡಾಗಿದೆ ಭವ್ಯತೆಯ ಊರು
ಸಾಂಸ್ಕೃತಿಕ ವೈಭವದ ಸ್ವರ್ಗವೇ ಇಲ್ಲಿ ಸೂರು
ನವರಾತ್ರಿಯ ಪೂರ್ತಿ, ನಮಗೆಲ್ಲವೂ ಸ್ಫೂರ್ತಿ
ಕರುನಾಡಿನ ಪ್ರಗತಿ ಇದು ಜಗದಗಲಕೂ ಕೀರ್ತಿ ।

ಹರಸೆ ನಮ್ಮ ನಾಡನ್ನು ಅಧಿದೇವತೆ ತಾಯೆ
ನಿನ್ನ ತವರಿನಲ್ಲಿ ಇಂದು ಸಿರಿಸಂಭ್ರಮ
ಹರಕೆ ಎಂದೆಂದು ನಮ್ಮೆಲ್ಲರನು ಕಾಯೆ
ನೂರ್ಕಾಲ ಮರಳಲಿ ಶುಭಸಂಗಮ ॥

–ಡಾ.ಪಿ.ಶಿವರಾಜು ಕೆ.ಎ.ಎಸ್, ಎಡಿಸಿ, ಮೈಸೂರು

ಯುವ ಸಂಭ್ರಮ ಪಲ್ಲವಿ

ಹೆಜ್ಜೆ ಜೊತೆ ಹೆಜ್ಜೆ ಸೇರಿದೆ
ಸದ್ದು ಊರ ತುಂಬಾ ಕೇಳಿದೆ ।
ಎದ್ದು ಕುಣಿಯೋ ಹಾಗೆ ಮಾಡಿದೆ.
ನಾಡಹಬ್ಬ ಶುರುವಾಗಿದೆ !

ಯುವ ಸಂಭ್ರಮ
ಕಲಾ ಸಂಗಮ
ಯುವ ಸಂಭ್ರಮ
ಯುವ ಹೃದಯದ ದಿಂಡಿನು

ಚರಣ
ದೇಶ ಪ್ರೇಮ ಸಾರುವ
ಮೈಸೂರು ದಸರಾ ಉತ್ಸವ!
ಇತಿಹಾಸ ಹೇಳುವ
ಜಾನಪದದ ಸೊಗಡು ನೋಡುವ ।
ವಿವಿಧ ಸಂಸ್ಕೃತಿ
ಕಲಿಸೋ ಸಂಗತಿ
ವಿವಿಧತೆಯಲ್ಲಿ ಏಕತೆ
ನಮಗೇ ಸ್ಫೂರ್ತಿ!

ಸಾಹಿತ್ಯ: ಸೋಮಶೇಖರ್ ಜಿಗಣಿ (ಮೈಸೂರು ನಗರಪಾಲಿಕೆ ಕಂದಾಯ ವಿಭಾಗದ ಸಹಾಯಕ ಆಯುಕ್ತ) ಮತ್ತು ಮನೋಜ್ ಸೌಗಂಧ್

ಡಿ.ದೇವರಾಜ ಅರಸು ಜನ್ಮದಿನೋತ್ಸವ ಆಚರಣೆ



ಮೈಸೂರಿನ ಗೋಕುಲಂನಲ್ಲಿರುವ ಅರಸು ಜಮಖಾನ ಕ್ಲಬ್ ಆವರಣದಲ್ಲಿ ಡಿ.ದೇವರಾಜ ಅರಸು ಜನ್ಮದಿನೋತ್ಸವ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮ ನಡೆಯಿತು.

ಮೈಸೂರು, ಸೆ.7(ಎಂಕೆ)– ನಗರದ ಗೋಕುಲಂನಲ್ಲಿರುವ ಅರಸು ಜಮಖಾನ ಕ್ಲಬ್ ಆವರಣದಲ್ಲಿ ಕರ್ನಾಟಕ ರಾಜ್ಯ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ (ಕರ್ನಾಟಕ ಅರಸು ಸಂಘ ಸಂಸ್ಥೆಗಳ ಒಕ್ಕೂಟ) ಹಾಗೂ ಕೆಯುಎಂಸಿ ಟ್ರಸ್ಟ್ ವತಿಯಿಂದ ಡಿ.ದೇವರಾಜ ಅರಸು ಜನ್ಮದಿನೋತ್ಸವ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮ ಭಾನುವಾರ ನಡೆಯಿತು.

ಕಾರ್ಯಕ್ರಮದ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ನಿವೃತ್ತ ಡೀನ್ ವಿಕ್ರಂ ಚದುರಂಗ ಮಾತನಾಡಿ, ತಮ್ಮ ದೂರದೃಷ್ಟಿ ಕಾರ್ಯಕ್ರಮಗಳಿಂದ ಸಾಮಾಜಿಕ ಅಭಿವೃದ್ಧಿಯ ಹರಿಕಾರ ಎನಿಸಿರುವ ದಿವಂಗತ ಡಿ.ದೇವರಾಜ ಅರಸು ಅವರು ರಾಜಕೀಯವಾಗಿ ಬಹುದೊಡ್ಡ ಕ್ರಾಂತಿ ಮಾಡಿದ್ದಾರೆ. ಶ್ರೀಮಂತ ಅರಸು ಮನೆತನದಲ್ಲಿ ಹುಟ್ಟಿದರೂ ಸಾಮಾನ್ಯ ರೈತನಾಗಿ ಬದುಕಿ, ತಳ ಸಮುದಾಯದ ಏಳಿಗೆಗೆ ಶ್ರಮಿಸಿದ ದೇವರಾಜ ಅರಸು ಅವರ ತತ್ವ–ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ದಕ್ಷತೆ ಮತ್ತು ಪ್ರಾಮಾಣಿಕತೆಯ ಆಡಳಿತಕ್ಕೆ ಹೆಸರಾಗಿದ್ದ ಅರಸು ಅವರು ಸಾಮಾಜಿಕ ಬದಲಾವಣೆ, ಬಡತನ ನಿರ್ಮೂಲನೆ, ಮನೆಗಳ ನಿರ್ಮಾಣದಲ್ಲಿ ಅದ್ವಿತೀಯ ಕಾರ್ಯ ಮಾಡಿದ್ದಾರೆ. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ ಕೀರ್ತಿ ಅವರದು. 70–80ರ ದಶಕದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾದ ನ್ಯಾಯ ಪ್ರತೀಕನೆಂಬ ಖ್ಯಾತಿಗೂ ಪಾತ್ರರಾಗಿದ್ದರು ಎಂದು ಅವರು ಸ್ಮರಿಸಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿಯಲ್ಲಿ ಎರಡು ಪಾತ್ರಗಳಿರುತ್ತವೆ. ಆ ವ್ಯಕ್ತಿಯಿಂದ ಏನು ಒಳ್ಳೆಯ ಕೆಲಸವಾಯಿತು ಎಂಬುದನ್ನು ನೋಡಬೇಕೇ ವಿನಃ ಆತನಿಂದಾದ ಕೆಟ್ಟ ಕೆಲಸಗಳನ್ನು ಗುರುತಿಸುವುದಲ್ಲ. ನಾವೆಲ್ಲ ಗಾಂಧಿ, ಶಾಸ್ತ್ರಿ, ಜಯಪ್ರಕಾಶ್ ನಾರಾಯಣ್ ಹಾಗೂ ದೇವರಾಜ ಅರಸು ಅವರ ಹಾಗೆ ಆಗುವುದಕ್ಕೆ ಆಗಲ್ಲ. ಆದರೆ, ಅವರು ಬದುಕಿರುವ ಕಾಲದಲ್ಲಿ ನಾವೆಲ್ಲರೂ ಇದ್ದೇವೆ ಎಂಬುದೇ ಸಂತೋಷದ ವಿಷಯವಾಗಿದೆ ಎಂದು ಹೇಳಿದರು.

ಕೆಯುಎಮ್‌ಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರ್ ರಾಜೇ ಅರಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಗೌರವಾಧ್ಯಕ್ಷ ಎಂ.ಎಲ್.ಬಸವರಾಜೇ ಅರಸ್, ಜಮಖಾನ ಕ್ಲಬ್ ಅಧ್ಯಕ್ಷ ಮೋಹನ ರಾಜೇ ಅರಸ್, ಆದರ್ಶ್ ಬಿ.ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ 75ನೇ ಜನ್ಮದಿನ: ನಮೋ ಯುವ ರನ್‌ಗೆ ಚಾಲನೆ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಜನ್ಮ ದಿನಾಚರಣೆ ಅಂಗವಾಗಿ ಬಿಜೆಪಿ ಯುವ ಮೋರ್ಚಾವು ನಮೋ ಯುವ ರನ್ ಅಭಿಯಾನ ಆರಂಭಿಸಿದೆ. ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಮತ್ತು ಅಭಿಯಾನದ ರಾಯಭಾರಿ, ನಟ ಮಿಲಿಂದ್ ಸೋಮನ್ ಅವರು ದೆಹಲಿಯಲ್ಲಿನ ಬಿಜೆಪಿಯ ಪ್ರಧಾನ ಕಚೇರಿಯಲ್ಲಿ ಅಭಿಯಾನಕ್ಕೆ ಚಾಲನೆ ನೀಡಿದರು.

ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವಂತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವಂತೆ ಯುವಕರನ್ನು ಪ್ರೇರೇಪಿಸಲು ಈ ಅಭಿಯಾನವನ್ನು ಆರಂಭಿಸಲಾಗಿದೆ. ಪ್ರತಿವರ್ಷ ಮೋದಿ ಅವರ ಜನ್ಮದಿನವಾದ ಸೆ.17ರಿಂದ ಅಕ್ಟೋಬರ್ 2ರವರೆಗೆ ನಡೆಯುವ ಸೇವಾ ಪಾಕ್ಷಿಕದ ಭಾಗವಾಗಿ ನಮೋ ಯುವ ರನ್ ಆಯೋಜಿಸಲಾಗಿದೆ ಎಂದರು.

ನಶೆಮುಕ್ತ ಭಾರತ ಧ್ಯೇಯದೊಂದಿಗೆ ದೇಶದ 100 ನಗರಗಳಲ್ಲಿ ಸೆ.21ರಂದು ನಮೋ ಯುವ ರನ್ ನಡೆಯಲಿದೆ. ಪ್ರತಿ ಸ್ಥಳದಲ್ಲಿ 10 ಸಾವಿರದಿಂದ 15 ಸಾವಿರದವರೆಗೆ ಯುವಕರು ಭಾಗಿಯಾಗಲಿದ್ದಾರೆ ಎಂದು ತೇಜಸ್ವಿ ಸೂರ್ಯ ಹೇಳಿದರು. ಅಭಿಯಾನದ ನೋಂದಣಿಗೆ **www.namo yuvarun.com**, ಲಾಂಛನ, ಮಸ್ಕಾಟ್, ಟಿ–ಶರ್ಟ್‌ಗಳನ್ನು ಅನಾವರಣಗೊಳಿಸಲಾಯಿತು.

ಕಸ್ತೂರಿರಂಗನ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಹರೀಶ್ ಅವರ ಮಾರ್ಗದರ್ಶನದಲ್ಲಿ ಆರ್.ಕಸ್ತೂರಿರಂಗನ್ ಸಂಶೋಧನೆ ನಡೆಸಿ ಸಾದರಪಡಿಸಿದ ಆಟೋ ಮ್ಯಾಟಿಕ್ ಕನ್ನಡ ಡಾಕ್ಯುಮೆಂಟ್ ಕ್ಲಾಸಿಫಿಕೇಷನ್ ಯೂಸಿಂಗ್ ಮೆಷಿನ್ ಲರ್ನಿಂಗ್ ಅಪ್ರೋಚೆಸ್ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ–ತಂತ್ರಜ್ಞಾನ ವಿವಿ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದಿನಿಂದ ಮೈಸೂರಿನ ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಸೆ.7–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2 ಮತ್ತು 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ 66/11 ಕೆವಿ ವಿತರಣಾ ಕೇಂದ್ರದಲ್ಲಿ ಕೆಪಿಟಿಸಿಎಲ್‌ನಿಂದ ತ್ರೈಮಾಸಿಕ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಸೆ.8 ಮತ್ತು 9ರಂದು ಮೈಸೂರಿನ ಕೆಲವೆಡೆ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ.

ನೀರು ಸರಬರಾಜುವಿನಲ್ಲಿ ವ್ಯತ್ಯಯ ಉಂಟಾಗುವ ಪ್ರದೇಶಗಳು: ಸಿಎನ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 28, ವಾರ್ಡ್ ನಂ. 42ರಿಂದ 45, ವಾರ್ಡ್ ನಂ.47ಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾ ದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 2, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರ ವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂ ನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್, ವಿದ್ಯಾರಣ್ಯ ಪುರಂ, ಕೃಷ್ಣಮೂರ್ತಿಪುರಂ, ಜನತಾ ನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜುವಿನಲ್ಲಿ ವ್ಯತ್ಯಯವುಂಟಾಗಲಿದೆ.

ಮಹಾಜನ ವಿದ್ಯಾಸಂಸ್ಥೆ 7ನೇ ತರಗತಿ ವಿದ್ಯಾರ್ಥಿಗೆ ಏಷ್ಯನ್ ಶಾರ್ಟ್‌ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್ ಟ್ರೋಫಿಯಲ್ಲಿ 2 ಚಿನ್ನ

ಮೈಸೂರು, ಸೆ.7(ಜಿಎ) – ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ಇರುವ ಮಹಾಜನ ವಿದ್ಯಾಸಂಸ್ಥೆಯ 7ನೇ ತರಗತಿ ವಿದ್ಯಾರ್ಥಿ ಕೀರ್ತಿರಾಜ್ ಸಿಂಗ್ ಇತ್ತೀಚೆಗೆ ಉತ್ತರಾಖಂಡ್‌ನ ಡೆಹ್ರಾಡೂನ್‌ನಲ್ಲಿ ನಡೆದ ಏಷ್ಯನ್ ಓಪನ್ ಶಾರ್ಟ್‌ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್ ಟ್ರೋಫಿ 2025 ಸ್ಪರ್ಧೆಯಲ್ಲಿ 2 ಚಿನ್ನದ ಪದಕ ಗಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯ ಲಕ್ಷ್ಮಿ ಮುರಳೀಧರ್ ಈ ವಿಷಯ ತಿಳಿಸಿ, ಸುನೀಲ್ ಸಿಂಗ್, ರೀತು ದೇವಿ ಅವರ ಪುತ್ರ ಕೀರ್ತಿರಾಜ್ ಓದಿನಲ್ಲಿಯೂ ಚುರುಕಿದ್ದು, ಕಾವ್ಯ ರಚನೆ, ಚಿತ್ರಕಲೆ, ಗಾಯನ ಹಾಗೂ ಪಿಯಾನೋ ವಾದನದಲ್ಲಿಯೂ ಪ್ರತಿಭೆ ಹೊಂದಿದ್ದಾನೆ. ವಿದ್ಯಾರ್ಥಿಯ ಸಾಧನೆಯನ್ನು ಗೌರವಿಸಲು ಸಂಸ್ಥೆಯಲ್ಲಿ ಆತ ಓದುವವರೆಗೂ ಉಚಿತ ಶಿಕ್ಷಣ ನೀಡಲು ನಿರ್ಧರಿಸಲಾಗಿದೆ ಎಂದರು.

ಚಿತ್ರನಗರಿಗೆ ಭೂಮಿ ನೀಡಿದ ರೈತರ ಬದಲು ಪ್ರಭಾವಿಗಳಿಗೆ ಪರಿಹಾರ ಪ್ರಕರಣ

ತನಿಖಾ ವರದಿ ಬಿಡುಗಡೆಗೆ ರೈತ ಸಂಘ ಆಗ್ರಹ

ಮೈಸೂರು, ಸೆ.7 (ಎಂಟಿವೈ)– ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹಿಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ವಶಪಡಿಸಿಕೊಂಡ ಭೂ ಮಾಲೀಕರಿಗೆ ಪರಿಹಾರ ನೀಡದೆ, ಪ್ರಭಾವಿಗಳಿಗೆ ನೀಡಿರುವ ಪ್ರಕರಣದ ತನಿಖಾ ವರದಿ ಬಿಡುಗಡೆ ಮಾಡುವಂತೆ ಆಗ್ರಹಿಸಿ ನಾಳೆ(ಸೆ.8) ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿರುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫಿಲಂ ಸಿಟಿ ನಿರ್ಮಾಣಕ್ಕೆ ರೈತರಿಂದ ಸ್ವಾಧೀನ ಪಡಿಸಿಕೊಂಡ ಭೂ ಮಾಲೀಕರಿಗೆ ಪರಿಹಾರ ನೀಡದೇ ಸ್ವಾಧೀನದಲ್ಲಿ ಇಲ್ಲದವರ ಹೆಸರಿಗೆ ತಲಾ ನಾಲ್ಕು ಲಕ್ಷ ಪರಿಹಾರ ನೀಡಲಾಗಿದೆ. ಪ್ರಭಾವಿಗಳು, ರಾಜಕಾರಣಿಗಳ ಸಂಬಂಧಿ ಮತ್ತು ಹಿಂಬಾಲಕರು ಪರಿಹಾರ ಪಡೆದುಕೊಳ್ಳುತ್ತಿದ್ದಾರೆ. ಚಿತ್ರನಗರಿಗೆ ಭೂಮಿ ನೀಡಿದವರು ತಮಗೆ ಅನ್ಯಾಯವಾಗಿದೆ ಎಂದು ಕಳೆದುಕೊಂಡ ಭೂಮಿಯಲ್ಲಿ ನಡೆಸುತ್ತಿರುವ ಹೋರಾಟ 125 ನೇ ದಿನಕ್ಕೆ ತಲುಪಿದೆ. ಇದೇ ವೇಳೆ ಕೆಐಎಡಿಬಿ ಸಹಾ ಪರಿಹಾರ ನೀಡಲೆಂದು 18 ಕೋಟಿ ರೂ. ಬಿಡುಗಡೆ ಮಾಡಿತ್ತು. ಆದರೆ ನಂಜನಗೂಡು ತಹಸೀಲ್ದಾರ್ ಹಾಗೂ ಇನ್ನಿತರ ಅಧಿಕಾರಿಗಳು ಅಕ್ರಮ ಎಸಗಿ, ನಿಜವಾದ ರೈತರು ಮತ್ತು ಭೂ ಮಾಲೀಕರಿಗೆ ವಂಚಿ ಸುತ್ತಿದ್ದಾರೆ ಎಂದರು ಕಿಡಿಕಾರಿದರು.

ರೈತ ಸಂಘ ನಡೆಸಿದ ಹೋರಾಟದ ಫಲವಾಗಿ ಜಿಲ್ಲಾಧಿಕಾರಿಗಳು ತನಿಖೆ ನಡೆಸಲು ತನಿಖಾಧಿಕಾರಿ ನೇಮಿಸಿ ಒಂದು ತಿಂಗಳೇ ಕಳೆದಿದ್ದರೂ ಅದರ ವರದಿ ಬಿಡುಗಡೆ ಮಾಡಿಲ್ಲ. ನಿಜವಾದ ರೈತರಿಗೆ ಪರಿಹಾರ ದೊರೆತಿಲ್ಲ. ಹೀಗಾಗಿ ಸೆ.8ರಂದು ಮನವಿಪತ್ರ ಸಲ್ಲಿಸಿ, ಒಂದು ವಾರದ ಗಡುವು ನೀಡಲಾಗುವುದು. ಅಷ್ಟರಲ್ಲಿ ಕ್ರಮ ಕೈಗೊಳ್ಳದಿದ್ದರೆ ತೀವ್ರತರ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ರೈತರಿಗೆ ವಿದ್ಯುತ್ ಕಲ್ಪಿಸಬೇಕಾದುದು ಯಾವುದೇ ಸರ್ಕಾರದ ಕರ್ತವ್ಯ. ಆದರೆ ಈಗ ಹಲವಾರು ರೈತರ ಪಂಪ್ ಸೆಟ್ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ. ಇದರೊಡನೆ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸರ್ಕಾರ ಮುಂದಾಗಿದೆ. ಇದನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿದರು.

ರೈತ ಚಳವಳಿಯಲ್ಲಿ ಪಾಲ್ಗೊಂಡಿದ್ದ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಕೂಗಾಡುವುದೇ ಚಳವಳಿಯಲ್ಲ ಎಂಬ ರೀತಿಯಲ್ಲಿ ಮಾತನಾಡಿರುವುದು ಖಂಡನೀಯ. ಅವರು ಅದರ ಬದಲು ಸರ್ಕಾರ ನಿಮ್ಮೊಂದಿಗಿದೆ ಎಂದು ಸೌಜನ್ಯದಿಂದ ಹೇಳಬಹುದಾಗಿತ್ತು. ಈ ರೀತಿ ಅವರು ಮಾತನಾಡುತ್ತಿರುವುದು ಇದೇ ಮೊದಲಲ್ಲ. ಹೀಗಾಗಿ ಸಿಎಂ, ಅವರಿಗೆ ತಿಳಿಹೇಳಬೇಕೆಂದು ಆಗ್ರಹಿಸಿದರು. ಈ ವೇಳೆ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ನಾಗನಹಳ್ಳಿ ವಿಜೇಂದ್ರ, ಪ್ರೇಮ್‌ರಾಜ್ ಹಾಜರಿದ್ದರು.

ದಸರಾ ಉದ್ಘಾಟಕರನ್ನು ಎಲ್ಲರೂ ಘನತೆಯಿಂದ ಸ್ವೀಕರಿಸಬೇಕಾಗಿತ್ತು



ದಸರಾ ಉದ್ಘಾಟಕರಾಗಿ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆಯನ್ನು ಎಲ್ಲರೂ ಘನತೆಯಿಂದ ಸ್ವೀಕರಿಸ ಬೇಕಾಗಿತ್ತು. ಹಿಂದೂ ಧರ್ಮವನ್ನು ಅವರು ವಿರೋಧಿಸುತ್ತಿದ್ದಾರೆ ಎಂದು ಆರೋಪ ಮಾಡುತ್ತಿದ್ದಾರೆ. ಆದರೆ ಧರ್ಮವನ್ನು ವಿಮರ್ಶಿಸುವ ಹಕ್ಕು ಎಲ್ಲರಿಗೂ ಇದೆ. ರಾಷ್ಟ್ರಕವಿ ಕುವೆಂಪು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಇದನ್ನೇ ಮಾಡಿದ್ದರು. ಹೀಗಾಗಿ ಸಂಕುಚಿತ ಮನಸ್ಥಿತಿಯಿಂದ ವಿರೋಧಿಸುವುದು ಸರಿಯಲ್ಲ. **–ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷ, ರಾಜ್ಯ ರೈತ ಸಂಘ**

ಗಾಂಜಾ ಪೆಡ್ಲರ್ ಬಂಧನ: 4.50 ಲಕ್ಷ ರೂ. ಮೌಲ್ಯದ 14 ಕೆಜಿ ಗಾಂಜಾ ವಶ





ಗಾಂಜಾ ಸಾಗಾಟದ ವೇಳೆ ಬಂಧಿತನಾಗಿರುವ ಹಳೇ ಪೆಡ್ಲರ್ ಗಾಂಜಾ ಶೀನ. ಬಲಚಿತ್ರದಲ್ಲಿ ವಶಪಡಿಸಿಕೊಂಡ ಗಾಂಜಾ ಮೂಟೆ ಕಾಣಬಹುದು.

ಮೈಸೂರು, ಸೆ.7(ಎಂಟಿವೈ)–ಸಿಸಿಬಿ ಪೊಲೀಸರು ಮಿಂಚಿನ ದಾಳಿ ನಡೆಸಿ ಗಾಂಜಾ ಪೆಡ್ಲರ್‌ವೊಬ್ಬನನ್ನು ಬಂಧಿಸಿ, ಆತನಿಂದ 4.50 ಲಕ್ಷ ರೂ. ಮೌಲ್ಯದ 14 ಕೆಜಿ 150 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಪುಷ್ಪಪುರ ಗ್ರಾಮದ ನಿವಾಸಿ ಶ್ರೀನಿವಾಸ್ ಅಲಿಯಾಸ್ ಗಾಂಜಾ ಶೀನ (54) ಎಂಬಾತನೇ ಬೆಂಗಳೂರಿನಿಂದ ಮೈಸೂರಿಗೆ ಖಾಸಗಿ ವಾಹನದಲ್ಲಿ ಗಾಂಜಾ ಸಾಗಿಸುತ್ತಿದ್ದಾಗ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 14 ಕೆಜಿ 150 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದು, ಅದರ ಮೌಲ್ಯ 4.50 ಲಕ್ಷ ಎಂದು ಅಂದಾಜಿಸಲಾಗಿದೆ.

ಬಂಧಿತ ಆರೋಪಿ ಗಾಂಜಾ ಪೆಡ್ಲರ್ ಆಗಿದ್ದು, ಈ ಹಿಂದೆಯೂ ಗಾಂಜಾ ಸಾಗಿಸುತ್ತಿದ್ದ ವೇಳೆ ಬಂಧನಕ್ಕೊಳಗಾಗಿದ್ದ. 2011ರಿಂದ ಇಲ್ಲಿಯವರೆಗೆ ಗಾಂಜಾ ಶೀನನ ವಿರುದ್ಧ 12 ಪ್ರಕರಣಗಳು ದಾಖಲಾಗಿವೆ. ಗಾಂಜಾ ಮತ್ತು ಮಾದಕ ವಸ್ತು ಸಾಗಾಟದ 8 ಪ್ರಕರಣದಲ್ಲಿ ಆತನ ವಿರುದ್ಧ ನ್ಯಾಯಾಲಯವು ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು.

ಕೆಲ ವರ್ಷಗಳಿಂದ ಒರಿಸ್ಸಾದಲ್ಲಿ ತಲೆ ಮರೆಸಿಕೊಂಡಿದ್ದ ಆರೋಪಿ ಇಂದು ಮುಂಜಾನೆ ಬೆಂಗಳೂರಿನಿಂದ ಮೈಸೂರಿಗೆ ಅಪಾರ ಪ್ರಮಾಣದ ಗಾಂಜಾ ಸಾಗಾಟ ಮಾಡುವಾಗ ಬಂಧನಕ್ಕೊಳಗಾಗಿದ್ದಾನೆ. ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸರು ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಬೆಂಗಳೂರಿನಿಂದ ಬರುತ್ತಿದ್ದ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ಗಾಂಜಾ ಶೀನ ವಾಹನದಲ್ಲಿ ಚೀಲದಲ್ಲಿ ಗಾಂಜಾ ಸಾಗಿಸುತ್ತಿದ್ದುದು ಕಂಡು ಬಂದಿತು. ಕೂಡಲೇ ಆತನನ್ನು ಬಂಧಿಸಿದರು. ಈತನ ಮಕ್ಕಳಾದ ಸುರೇಶ್ ಮತ್ತು ನಂದೀಶ್ ಮೇಲೂ 4 ಎನ್‌ಡಿಪಿಎಸ್ ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಳಿಯಲ್ಲಿ ಸಿಸಿಬಿ ಘಟಕದ ಎಸಿಪಿ ಮಹಮ್ಮದ್ ಷರೀಫ್ ರಾವುತರ್, ಇನ್ಸ್‌ಪೆಕ್ಟರ್ ಶಬೀರ್ ಹುಸೇನ್, ಸಬ್ ಇನ್ಸ್‌ಪೆಕ್ಟರ್ ಕೆ.ಲೇಪಾಕ್ಷಿ, ಸಿಬ್ಬಂದಿಗಳಾದ ರಾಮಸ್ವಾಮಿ, ಮಧುಕುಮಾರ್, ಪ್ರಕಾಶ್ ರಾಥೋಡ್ ಇನ್ನಿತರರು ಪಾಲ್ಗೊಂಡಿದ್ದರು.